ಗೌರಿ ಲಂಕೇಶರ

ಲಂಕೇಶ್

ಜೂನ್ 7, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋ



171 ಕೋಟಿಗೆ

ಿಜಯ ಕರ್ನಾಟಕ

www.vijaykarnatakaepaper.com ಸಮಸ್ತ ಕನ್ನಡಿಗರ ಹೆಮ್ಮೆ

ಹರಾಜ್

ಪ್ರಜಾವಾಣಿ-ಟೈಮ್ಸ್ ಆಫ್ ಇಂಡಿಯಾ ಯುದ್ಧ ಶುರು





ಕಿಲ್ಲರ್ ಕವಳ ಜೈಲುಪಾಲು!

ಮಂತ್ರಿ ಕಟ್ಟಾ ನೆಲ ನುಂಗಿದ್ದು



ಬಿಜೆಪಿ Y2K ರಾದ್ಧಾಂತ




ಖಾಸಗಿ ಮೊಬೈಲ್ ಕಂಪನಿಗಳ ಲಾಭಕ್ಕೆ ದೇಶದ ರಕ್ಷಣೆಯ ಬಲಿ!

ಖಾಸಗೀಕರಣದ ಈ ಯುಗದಲ್ಲಿ ಇಡೀ ದೇಶವನ್ನೇ ಸ್ವದೇಶಿ ಮತ್ತು ವಿದೇಶಿ ಬಂಡವಾಳಿಗರಿಗೆ ದುಗ್ಗಾಣಿ ಬೆಲೆಗೆ ಹರಾಜು ಹಾಕುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಈವರೆಗೆ ದೇಶದ ರಕ್ಷಣಾ ವಿಷಯದಲ್ಲಿ ಮಾತ್ರ ಸ್ವಲ್ಪ ಮಟ್ಟಿಗೆ ತೋರಿಕೆಯ ಎಚ್ಚರ ತೋರಿಸಲಾಗುತ್ತಿತ್ತು. ಆದರೆ ದೇಶಭಕ್ತ ಬಿ.ಜೆ.ಪಿ.ಸರ್ಕಾರ ಅಧಿಕಾರದಲ್ಲಿ ಇದ್ದಾಗಲೇ ರಕ್ಷಣಾ ಇಲಾಖೆಗೆ ಮಾತ್ರ ಸೀಮಿತವಾಗಿದ್ದ ಹಲವಾರು ವಿಷಯಗಳನ್ನು ಖಾಸಗೀಕರಿಸಲಾಯಿತು. ಎಲ್ಲಿಯ ತನಕ ಅಂದರೆ ಸೈನಿಕರ ಶವ ಸಾಗಿಸುವ ಶಾಫಿನ್‌ಗಳ ಸರಬರಾಜನ್ನು ಖಾಸಗೀಕರಿಸಿ ಅದರಲ್ಲಿ ಆಗಿನ ರಕ್ಷಣಾ ಮಂತ್ರಿ ಸಮಾಜವಾದಿ ಜಾರ್ಜ್ ಫರ್ನಾಂಡೀಸ್ ಸಾಕಷ್ಟು ಹಣ ದೋಚಿದ್ದು ಎಲ್ಲರಿಗೂ ತಿಳಿದಿರುವ ವಿಷಯವೇ.

ಈಗ ಎಡಪಕ್ಷ ಬೆಂಬಲಿತ ಯು.ಪಿ.ಎ. ಸರ್ಕಾರದ ಸರದಿ

ನಮ್ಮ ದೇಶದಲ್ಲಿ ಮೊಬೈಲ್ ಕ್ರಾಂತಿ ಸಂಭವಿಸಿದ ಮೇಲೆ ದೇಶದ ಭೂಮಿಗೆ ಮಾತ್ರವಲ್ಲ ಆಕಾಶಕ್ಕೂ ಚಿನ್ನದ ಬೆಲೆ ಬಂದಿದೆ. ಈ ಮೊಬೈಲ್ ಕಂಪನಿಗಳಲ್ಲಿ ಎರಡು ವಿಧ. ಅದರಲ್ಲಿ ಏರ್‌ಟೆಲ್ ಮತ್ತು ಹಚ್‌ನಂತ ಕಂಪನಿಗಳು ಗ್ಲೋಬಲ್ ಸಿಸ್ಟಮ್ ಫಾರ್ ಮೊಬೈಲ್ ಕಮ್ಯುನಿಕೇಷನ್(GSM) ಎಂಬ ತಂತ್ರಜ್ಞಾನ ಬಳಸುತ್ತವೆ. ಆದರೆ ಟಾಟಾ ಮೊಬೈಲ್ ಮತ್ತು ರಿಲೈಯನ್ಸ್ ಕಂಪನಿಗಳು ಕೋಡ್ ಡಿವೈಡೆಡ್ ಮಲ್ಟಿಪಲ್ ಆಕ್ಸೆಸ್(CDMA) ಎಂಬ ಸುಧಾರಿತ ತಂತ್ರಜ್ಞಾನವನ್ನು ಬಳಸುತ್ತವೆ. ಈ ಜಿ.ಎಸ್.ಎಂ ತಂತ್ರಜ್ಞಾನಕ್ಕೆ ಆಕಾಶದಲ್ಲಿ ಶಬ್ದವನ್ನು ಹೊತ್ತೊಯ್ಯಲು ಹೆಚ್ಚಿನ ತರಂಗಾಂತರ ಬೇಕು. ಆದರೆ ಸಿ.ಡಿ.ಎಂ.ಎ ತಂತ್ರಜ್ಞಾನಕ್ಕೆ ಕಡಿಮೆ ತರಂಗಾಂತರ ಸಾಕು. ಆದ್ದರಿಂದಲೇ ಭಾರತದ ಆಕಾಶದಲ್ಲಿ ವಿವಿಧ ತರಂಗಾಂತರಗಳ ಸಂಪರ್ಕಕ್ಕೆ ಒಂದು ಮಿತಿ ಇರುತ್ತದೆ. ಏಕೆಂದರೆ ನಮ್ಮ ದೇಶ ರಕ್ಷಣೆ ಇಲಾಖೆ ವಿವಿಧ ತರಂಗಾಂತರಗಳಲ್ಲಿ ತನ್ನ ಸಂಪರ್ಕ, ಬೇಹುಗಾರಿಕೆ ಇತ್ಯಾದಿಗಳನ್ನು ನಡೆಸುತ್ತದೆ. ಮೊಬೈಲ್ ಕಂಪನಿಗಳಿಗಾಗಿ ಭಾರತ ಸರ್ಕಾರವು ರಕ್ಷಣಾ ಇಲಾಖೆಯ ತರಂಗಾಂತರವನ್ನು ಕಡಿತ ಮಾಡಿ ಈ ಕಂಪನಿಗಳಿಗೆ ಒದಗಿಸಿತು. ಜಿ.ಎಸ್.ಎಮ್. ಕಂಪನಿಗಳಿಗೆ 15 ಮೆಗಾಹರ್ಟ್ಸ್ ತರಂಗಾಂತರವನ್ನೂ ಸಿ.ಡಿ.ಎಂ.ಎ. ಕಂಪನಿಗಳಿಗೆ 7 ಮೆಗಾಹರ್ಟ್ಸ್ ತರಂಗಾಂತರವನ್ನು ಒದಗಿಸಿದೆ. ಆದರೆ ಕೆಲವೇ ವರ್ಷಗಳಲ್ಲಿ ಏರ್‌ಟೆಲ್‌ನಂತ ಜಿ.ಎಸ್.ಎಂ. ಕಂಪನಿ 1.85ಕೋಟಿ ಗ್ರಾಹಕರನ್ನು ಪಡೆದುಕೊಂಡಿದ್ದರೆ ರಿಲೈಯನ್ಸ್‌ನಂತ ಸಿ.ಡಿ.ಎಂ.ಎ ಕಂಪನಿ 1.45ಕೋಟಿ ಗ್ರಾಹಕರನ್ನು ಪಡೆದುಕೊಂಡಿದೆ. ಹಾಗೂ ಪ್ರತಿವರ್ಷ ಶೇ.25ರಷ್ಟು ಏರಿಕೆಯನ್ನು ಎದುರುನೋಡುತ್ತಿವೆ. ಅಂದರೆ ಮತ್ತಷ್ಟು ಸಾವಿರ ಕೋಟಿ ಲಾಭ!



ಆದರೆ ಅದಕ್ಕೆ ದೊಡ್ಡ ಅಡಚಣೆ ಇರುವುದು ದೇಶದ ರಕ್ಷಣಾ ಇಲಾಖೆಯದ್ದು! ಏಕೆಂದರೆ ಮತ್ತಷ್ಟು ವಿಸ್ತರಣೆಯಾಗಬೇಕೆಂದರೆ ಈಗಿರುವಷ್ಟು ತರಂಗಾಂತರ ಸಾಲುವುದಿಲ್ಲ, ಆದ್ದರಿಂದ ಮೊಬೈಲ್ ಕಂಪನಿಗಳು ಇನ್ನೂ ಹೆಚ್ಚಿನ ಲಾಭ ಮಾಡಬೇಕೆಂದರೆ ಇನ್ನೂ ಹೆಚ್ಚಿನ ತರಂಗಾಂತರಗಳಿಂದಲೇ ಮೊಬೈಲ್ ಸಂಪರ್ಕಗಳನ್ನು ಕೊಡಲು ಸಾಧ್ಯ, ಆದ್ದರಿಂದಲೇ ಎಲ್ಲಾ ಕಂಪನಿಗಳು ಅಧಿಕವಾಗಿ 45 ಮೆಗಾಹರ್ಟ್ಸ್‌ಗಳಷ್ಟು ತರಂಗಾಂತರವನ್ನು ತಮಗೆ ಬಿಡುಗಡೆ ಮಾಡಬೇಕೆಂದು ಕೋರಿವೆ. ಸ್ಸಾರಿ, ಆದೇಶಿಸಿವೆ. ಅದನ್ನು ಶಿರಸಾವಹಿಸಿ ಪಾಲಿಸಿರುವ ಸರ್ಕಾರ ರಕ್ಷಣಾ ಇಲಾಖೆ ತನ್ನ ಹಲವು ದಿನನಿತ್ಯದ ರಕ್ಷಣಾ ಸಂಬಂಧಿತ ಸಂಪರ್ಕಗಳಿಗೆ ಬಳಸುತ್ತಿದ್ದ ತರಂಗಾತರವನ್ನು ಕತ್ತರಿಸಿ ಈ ಖಾಸಗಿ ಕಂಪನಿಗಳಿಗೆ ಕೊಡಮಾಡಿದೆ.


ಇದಕ್ಕೆ ಅಧಿಕ ಶುಲ್ಕವನ್ನು ತೆರಬೇಕೆಂದರೆ ರಿಲೈಯನ್ಸ್ ಕಂಪನಿ ಒಂದು ಪೈಸೆ ಕೊಡುವುದಿಲ್ಲವೆಂದು ನಿರಾಕರಿಸಿದೆ. ಇನ್ನು ಸರ್ಕಾರಿ ಮೊಬೈಲ್ ಕಂಪನಿ ಬಿ.ಎಸ್.ಎನ್.ಎಲ್.ಎಲ್ಲೋ ಮುದುರಿಕೊಂಡು ಬಿದ್ದಿದೆ.

ಸರ್ಕಾರಿ ಪ್ರತಿನಿಧಿಗಳಿಂದ ಖಾಸಗಿಯವರಿಗೋಸ್ಕರ ಖಾಸಗಿಯವರಿಗಾಗಿಯೇ ನಡೆಯುವ ಆಡಳಿತ ಪದ್ಧತಿಯನ್ನು ಏನೆಂದು ಕರೆಯುತ್ತಾರೆ?..ಪ್ರಜಾತಂತ್ರದ ಹೆಸರಲ್ಲಿ ಕಂಪನಿಗಳ ಕುತಂತ್ರ..!?

No Comments

"ಭಾರತದಲ್ಲಿ ದಿನೇದಿನೇ ಲಾಕಪ್ ಡೆತ್‌ಗಳ ಸಂಖ್ಯೆ ಹೆಚ್ಚುತ್ತಿದೆ. ಅದಕ್ಕೆ ಕಾರಣ ಸ್ಟೇಷನ್ನುಗಳಲ್ಲಿ ಪೊಲೀಸರು ನೀಡುವ ಚಿತ್ರಹಿಂಸೆ ಭಾರತದ ಕಾನೂನಿನ ಪ್ರಕಾರ ಅಪರಾಧವಾಗದೇ ಇರುವುದು"

-ಅಮ್ನೆಸ್ಟಿ ಇಂಟರ್‌ನ್ಯಾಷನಲ್, ಭಾರತದಲ್ಲಿ ಮಾನವ ಹಕ್ಕುಗಳ ಪರಿಸ್ಥಿತಿಯ ಬಗ್ಗೆ ತನ್ನ 2005ನೇ ಸಾಲಿನ ವರದಿಯಲ್ಲಿ.



"ಸ್ಲಂಗಳ ಎತ್ತಂಗಡಿ ಹೀಗೇ ಮುಂದುವರೆದರೆ ಜನ ಅನಿವಾರ್ಯವಾಗಿ ನಕ್ಸಲೈಟರಾಗುತ್ತಾರೆ."

ವಿ.ಪಿ.ಸಿಂಗ್.

"ಸ್ಪಿನ್ನರ್‌ಗಳಿಗೆ ಬಾಲಿನ ಮೇಲೆ ಪಟ್ಟು ಸಿಕ್ಕಿದ್ದಾಗ ಹೊಸ ಬ್ಯಾಟ್ಸ್‌ಮ್ಯಾನ್ ಬ್ಯಾಟು ತಿರುಗಿಸುವುದು ಅಷ್ಟು ಸುಲಭವಲ್ಲ."

-ಒನ್ ಡೇ ಮ್ಯಾಚ್ ಸೋತ ಮೇಲೆ ರಾಹುಲ್ ದ್ರಾವಿಡ್



"ಪ್ರೇಕ್ಷಕರನ್ನು ಕನ್ವಿನ್ಸ್ ಮಾಡ್ಬೇಕು. ಅದಾಗದಿದ್ದರೆ ಕನ್ಫ್ಯೂಸ್ ಮಾಡಬೇಕು."

-ವಿಷ್ಣುವರ್ಧನ್

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಮುಂದಿನ ತಿಂಗಳಿಂದ ಒಂದು ಲಕ್ಷ ಜನರಿಗೆ ಕೆಲಸ ನೀಡುವಂತ ನವ ಕೈಗಾರಿಕಾ ನೀತಿ ಜಾರಿಗೆ."

-ಕಟ್ಟಾ ಸುಬ್ರಹ್ಮಣ್ಯ ನಾಯ್ಡು



"ಮುಂದಿನ ವರ್ಷ ಸರ್ಕಾರಕ್ಕೆ 4000ಕೋಟಿ ಅಧಿಕ ಆದಾಯ ಬರಲಿದೆ."

-ಯಡಿಯೂರಪ್ಪ

"ಬಿ.ಜೆ.ಪಿ.ಯು ಯು.ಪಿ.ಎ ಸರ್ಕಾರದ ಮೀಸಲಾತಿ ನೀತಿಯನ್ನು ಬೆಂಬಲಿಸುತ್ತದೆ."

-ಬಿ.ಜೆ.ಪಿ. ತಮಿಳುನಾಡು ಘಟಕ


"ನೇಪಾಳ ಜಾತ್ಯತೀತ ರಾಷ್ಟ್ರವಾದರೆ ಹಿಂಸಾಚಾರ ಜಾಸ್ತಿಯಾಗುತ್ತದೆ."

-ಹಿಂದೂ ಫೆಡರೇಷನ್, ನೇಪಾಳ

ಪೆಟ್ರೋಲ್ ಬೆಲೆ ಏರುತ್ತದೆ-ಬಸ್ ಪ್ರಯಾಣ ದರ ಏರುತ್ತದೆ-ಕಾರುಗಳ ಬೆಲೆ ಕುಗ್ಗುತ್ತದೆ!

ಚಾರ್ವಾಕ

- ಶಿವಸುಂದರ್-




ಪೆಟ್ರೋಲ್ ಬೆಲೆಯನ್ನು ಲೀಟರಿಗೆ 9 ರೂಪಾಯಿಯಷ್ಟು ಮತ್ತು ಡೀಸಲ್ ಬೆಲೆಯನ್ನು ಲೀಟರಿಗೆ 5ರಷ್ಟು ಏರಿಸಬೇಕೆಂಬ ಪ್ರಸ್ತಾಪವನ್ನು ಇಂಧನ ಇಲಾಖೆ ಸರ್ಕಾರದ ಮುಂದಿಟ್ಟಿದೆ. ಸರ್ಕಾರ ಸಹಾ "ಇನ್ನು ಬೆಲೆ ಏರಿಸದೆ ಇರಲು ಸಾಧ್ಯವಿಲ್ಲ, ಏಕೆಂದರೆ ಪ್ರತಿ ದಿನ ಇಂಧನ ಇಲಾಖೆಗೆ ಕೋಟ್ಯಾಂತರ ರೂಪಾಯಿ ಹೊರೆ ಬೀಳುತ್ತಿದೆ. ಸರ್ಕಾರ ಇನ್ನು ಈ ಹೊರೆ ಹೊರಲು ಸಾಧ್ಯವೇ ಇಲ್ಲವಾದ್ದರಿಂದ ಅದರ ಭಾರವನ್ನು ಜನರು ಹೊರಲೇಬೇಕು" ಎಂದು ತೀರ್ಮಾನಿಸಿದೆ. ಯಥಾ ಪ್ರಕಾರ ಎಡಪಕ್ಷಗಳು ಈ ಬೆಲೆ ಏರಿಕೆಗೆ ಪ್ರತಿಭಟನೆ ತೋರಿಸುವ ಕ್ರಿಯಾಕರ್ಮವನ್ನು ಮಾಡಿ ಮುಗಿಸಿವೆ. ಸರ್ಕಾರ ಅದಕ್ಕೆ ಕಿವಿಗೊಟ್ಟಂತೆ ತೋರಿಸುತ್ತಾ 9 ರೂಪಾಯಿ ಏರಿಕೆಯ ಬದಲು 5 ರೂಪಾಯಿ ಏರಿಕೆಯ ಖಾಜಿ ಸೂತ್ರವನ್ನು ಜಾರಿಗೆ ತರಲಿದೆ. ಇನ್ನು ಎರಡು ತಿಂಗಳ ನಂತರ ಮತ್ತೆ 10 ರೂಪಾಯಿ ಏರಿಕೆಯ ಪ್ರಸ್ತಾಪ ಮತ್ತು ಅಂತಿಮವಾಗಿ 5ರೂಪಾಯಿ ಏರಿಕೆಯ ನಾಟಕ ಮುಂದುವರೆಯಲಿದೆ. ಅದರಲ್ಲಿ ಎಡಪಕ್ಷಗಳು ಸೂತ್ರಧಾರಿಗಳಾಗಿ ಇರುತ್ತಾರೋ ಇಲ್ಲವೋ ಆದರೆ ಪಾತ್ರಧಾರಿಗಳಾಗಿಯಂತೂ ಇದ್ದೇ ಇರುತ್ತಾರೆ!

ಈ ಪೆಟ್ರೋಲ್ ಬೆಲೆ ಏರಿಕೆ ಸಕಾರಣವಾದದ್ದೂ ಅಲ್ಲ, ಸಾಧುವಾದದ್ದೂ ಅಲ್ಲ. ಪೆಟ್ರೋಲ್ ಮತ್ತು ಡೀಸಲ್‌ಗಳನ್ನು ತೆರಿಗೆ ಆದಾಯದ ಮತ್ತೊಂದು ಮೂಲವೆಂದು ಭಾವಿಸದೆ ಅದರ ಮೇಲೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಾಕುತ್ತಿರುವ ತೆರಿಗೆಯನ್ನು ಕಡಿಮೆ ಮಾಡಿದರೂ ಬೆಲೆ ಏರಿಕೆ ಮಾಡುವ ಅಗತ್ಯವೇ ಉದ್ಭವಿಸುವುದಿಲ್ಲ. ಬದಲಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇನ್ನು ಬೆಲೆ ಹೆಚ್ಚಳವಾದರೂ ಅದನ್ನು ತಡೆದುಕೊಳ್ಳಬಹುದು. ಅಷ್ಟು ಮಾತ್ರವಲ್ಲ ಈಗಿನ ಬೆಲೆಯನ್ನು ಅರ್ಧದಷ್ಟು ಇಳಿಸಬಹುದು.

ಹೀಗಾಗಿ ಪೆಟ್ರೋಲ್ ಮತ್ತು ಡೀಸಲ್ ಬೆಲೆ ಏರಿಕೆಯೆಂದರೆ ಒಟ್ಟಾರೆ ಜನಸಾಮಾನ್ಯರ ಜೇಬು ತೂತೆಂಬುದು ನಿಜವಾದರೂ ನಿರಾತಂಕವಾಗಿ ಸಾಗುತ್ತದೆ. ಆದರೆ ಕಾರುಗಳ ಬೆಲೆ ಕುಗ್ಗುತ್ತದೆ. ಈ ಕಾರುಗಳ ಸುಗಮ ಸಂಚಾರಕ್ಕಾಗಿ ನಮ್ಮ ಖರ್ಚಿನಲ್ಲಿ ಎಕ್ಸ್‌ಪ್ರೆಸ್ ಹೈವೇಗಳು ನಿರ್ಮಾಣಗೊಳ್ಳುತ್ತವೆ. ಜೈ ಭಾರತ್ ಮಾತಾ!

ಒಂದು ಪ್ರಶ್ನೆ:

ತದಡಿ ಅಲ್ಟ್ರಾ ಥರ್ಮಲ್ ಪವರ್ ಯೋಜನೆಯ ಬಗ್ಗೆ ನಿಧಾನವಾಗಿ ಉತ್ತರ ಕರಾವಳಿಯಲ್ಲಿ ಹೋರಾಟದ ಅಲೆಗಳು ಏಳುತ್ತಿವೆ. ಆತಂಕಗೊಂಡ ಮೀನುಗಾರರು, ರೈತರು ಬೀದಿಯಲ್ಲಿ ಹೋರಾಟ ಮಾಡುತ್ತಿದ್ದರೆ, ಉತ್ತರ ಕನ್ನಡದ ನಿರುದ್ಯೋಗಿ ರಾಜಕಾರಣಿಗಳು ಈ ಹೋರಾಟದಲ್ಲಿ ತಮ್ಮ ರಾಜಕೀಯ ಭವಿಷ್ಯವನ್ನೂ ಕಾಣುತ್ತಿದ್ದಾರೆ. ಕೆಲವು ಮಠಾಧೀಶರು ಇದರಲ್ಲಿ ತಮ್ಮ ಭಕ್ತರನ್ನು ಹೆಚ್ಚಿಸಿಕೊಳ್ಳುವ ಸಾಧ್ಯತೆಗಳನ್ನೂ ಕಾಣುತ್ತಿದ್ದಾರೆ. ಹೀಗಾಗಿಯೇ ಇದ್ದಕ್ಕಿದ್ದಂತೆ ಹಲವು ಮಠಾಧೀಶರು ತಮ್ಮ ಸಂಪೂರ್ಣ ಬೆಂಬಲವನ್ನು ಘೋಷಿಸಿದ್ದರು. ಆದರೆ ಅದರ ಬಗ್ಗೆ ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿ ಸಭೆ ಕರೆದಾಗ ಒಬ್ಬ ಮಠಾಧೀಶರೂ ಆ ಕಡೆ ತಲೆಯೂ ಹಾಕಲಿಲ್ಲ, ಏಕೆ?



ಒಂದು ಸತ್ಯ:

ಅದರ ಸತ್ಯ ಇಷ್ಟೇ. ಈ ಮುಖ್ಯಮಂತ್ರಿ ಮಠಾಧೀಶರ ಪರ. ಅವರ ಗೋಮೂತ್ರ ಪ್ರಾಜೆಕ್ಟಿನಿಂದ ಹಿಡಿದು ಎಲ್ಲಾ ಯೋಜನೆಗಳಿಗೂ ಬಜೆಟ್ಟಿನಲ್ಲಿ ಹಣ ಸ್ಯಾಂಕ್ಷನ್ ಮಾಡಿದ್ದಾರೆ. ಅಷ್ಟು ಮಾತ್ರವಲ್ಲ, ತದಡಿ ಯೋಜನೆಯ ಹಿಂದಿರುವ ವಿದೇಶಿ ಹಣದ ಥೈಲಿಗೆ ಈ ಮಠಾಧೀಶರೇ ಭಕ್ತರು. ಹೀಗಾಗಿ ಈ ಅಲೌಕಿಕವಾದ ಸಂಪತ್ತಿನ ಮುಂದೆ ಜನತೆಯ ಐಹಿಕ ಬದುಕಿನ ಪ್ರಶ್ನೆ ಅಷ್ಟು ಮುಖ್ಯವಲ್ಲ ಎಂದು ದಿವ್ಯ ನಿರ್ಲಕ್ಷ್ಯ ತೋರಿದ್ದಾರೆ ಅಷ್ಟೇ.

ವಾರದ ಘೋಷಣೆ:

"ನರ್ಮದಾ ವಿಷಯದಲ್ಲಿ ಮತ್ತು ವಡೋದ್ರ ಘಟನೆಯ ಕುರಿತು ನನ್ನ ನಿಲುವನ್ನು ಬದಲಿಸಿಕೊಳ್ಳುವುದಿಲ್ಲ ಮತ್ತು 'ಫನ' ಚಿತ್ರ ನಿಷೇಧಿಸಿದರೂ ನಾನು ಯಾರ ಕ್ಷಮೆಯನ್ನೂ ಕೇಳುವುದಿಲ್ಲ"

-ಆಮಿರ್ ಖಾನ್, ಗುಜರಾತಿನ ಮುಖ್ಯಮಂತ್ರಿ ಮೋದಿಯನ್ನು ಕೋಮುವಾದಿ ಎಂದು ಟೀಕಿಸಿದ್ದಕ್ಕಾಗಿ ತನ್ನ ಚಿತ್ರಕ್ಕೆ ಗುಜರಾತಿನಲ್ಲಿ ನಿಷೇದ ವಿಧಿಸಿರುವ ಬಗ್ಗೆ ಪ್ರತಿಕ್ರಿಯಿಸುತ್ತಾ.

2000

ಆ ಇಸವಿಯಲ್ಲಿ ಏನು ಸಂಭವಿಸಿತೆಂದು ಹೇಳುವ ಧೈರ್ಯ ನನಗಿಲ್ಲದೇ ಹೋಯಿತು.

ಆದರೆ, ಆ ಗ್ರಾಮದ ಸಾಲುಮನೆಗಳ ಮನೆಯೊಂದರ ಚಿಮಣಿಯಿಂದ ಕಪ್ಪು ಹೊಗೆಯ ಬದಲಿಗೆ ದಟ್ಟ ರಕ್ತದ ಹೊಗೆಯೇ ಚಿಮ್ಮುತ್ತಿತ್ತು.

(ಲಂಕೇಶ್ ತೀರಿಕೊಂಡ ವರ್ಷ)

-ಮಂಜುನಾಥ್ ವಿ.ಎಂ.



ಪ್ರೀತಿ




"ಪ್ರೀತಿ ಅನ್ನೋದು ಗಾಂಭೀರ್ಯ ಮತ್ತು ತಮಾಷೆಗಳನ್ನೊಳಗೊಂಡ ಒಂದು ಸುಕೋಮಲ ಕಲ್ಪನೆ. 'ಗ್ರಹಗಳ ವಿಕರ್ಷಣೆಯಲ್ಲಿಯೂ ಪ್ರೀತಿ ಇದೆ' ಅಂದ ಮೇಲೆ ಅದರದೇ ಭಾವನೆಯ, ಅದರದೇ ತಳಮಳದ, ಅದರದೇ ಕನಸಿನ ಪತ್ರಿಕೆಯಲ್ಲಿ ಕೊಂಚ ಪ್ರೀತಿಗೆ ಜಾಗ ಇಲ್ಲದಿರುವುದೇ" ಎಂದು ಬರೆದಿರುವ ಗುಲ್ಬರ್ಗಾದ ಶಿವಕುಮಾರ್ ಅಮ್ಮಾಪುರರವರು ಪ್ರೀತಿ ಕುರಿತು ಈ ವಾರದ ಸೂಕ್ತಿಗಳನ್ನು ಸಂಗ್ರಹಿಸಿ ಕಳುಹಿಸಿದ್ದಾರೆ. ಎಂಟನೇ ತರಗತಿಯಲ್ಲಿದ್ದಾಗಿನಿಂದಲೂ ಪತ್ರಿಕೆಯನ್ನು ಓದುತ್ತಿರುವ ಈ 24 ವರ್ಷದ ಯುವಕನಿಗೆ ನಮ್ಮ ಧನ್ಯವಾದಗಳು. -ಗೌರಿ

ಪತ್ರಿಕೋದ್ಯಮ ಬ್ಯುಸಿನೆಸ್ ಅಲ್ಲ...

ಕನ್ನಡ ಪತ್ರಿಕೋದ್ಯಮ ಹಲವು ಮೈಲಿಗಲ್ಲುಗಳನ್ನು ಕಂಡಿದೆ. ಸರ್ಕಾರ ಮತ್ತು ಮಾಲೀಕ ಕೈಜೋಡಿಸಿದ್ದರಿಂದ ನಿಂತ ನೀರಿನಂತಾಗಿದ್ದ ಕನ್ನಡ ಪತ್ರಿಕಾ ವಲಯದಲ್ಲಿ 26 ವರ್ಷಗಳ ಹಿಂದೆ ಸಂಚಲನ ಮೂಡಿಸಿದ್ದು ಅಪ್ಪ. ಪತ್ರಿಕೆಯೊಂದು ಹೇಗೆ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ನಿಲುವು ತೆಗೆದುಕೊಂಡು ಜಾಹಿರಾತಿನ ಹಂಗಿಲ್ಲದೆ ಬದುಕಬಹುದೆಂದು ತೋರಿಸಿ ಕೊಟ್ಟದ್ದೇ ಅಪ್ಪ.

ಅಪ್ಪನ ನಂತರ ಕನ್ನಡ ಪತ್ರಿಕೋದ್ಯಮದಲ್ಲಿ ಮತ್ತೊಂದು ರೀತಿಯ ಕಾವು ತರಿಸಿದ್ದು ವಿಜಯ ಸಂಕೇಶ್ವರ್. ಆದರೆ ಇವರಿಬ್ಬರ ನಡುವೆ ವ್ಯತ್ಯಾಸಗಳಿವೆ ಅಲ್ಲದೆ, ಇವರ ಆಶಯಗಳೂ ವಿರುದ್ಧ ದಿಕ್ಕಿನವು. ಸಾಹಿತ್ಯ ಲೋಕದಿಂದ ಪತ್ರಿಕಾ ರಂಗಕ್ಕೆ ಬಂದ ಅಪ್ಪ ಎಲ್ಲ ದೃಷ್ಟಿಕೋನಗಳಿಂದ ಅಪ್ಪಟ ಪತ್ರಕರ್ತರಾಗಿದ್ದರು. ಪ್ರಜಾಪ್ರಭುತ್ವದ ನಾಲ್ಕನೆ ಸ್ತಂಭವಾದ ಪತ್ರಿಕಾರಂಗ ಹೇಗೆ ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಜನಪರವಾಗಿರಬಹುದು ಎಂದು ತೋರಿಸಿಕೊಟ್ಟ ಅಪ್ಪ ಸರ್ಕಾರಗಳನ್ನು ಉರುಳಿಸಿದರು, ಅವ್ಯವಹಾರಗಳನ್ನು ಬಯಲಿಗೆಳೆದರು, ಹೊಸ ಪ್ರತಿಭೆಗಳನ್ನು ಪ್ರೋತ್ಸಾಹಿಸಿದರು.



ಆದರೆ ಸಂಕೇಶ್ವರ್‌ರವರು ಪತ್ರಕರ್ತರೂ ಅಲ್ಲ, ಪತ್ರಿಕೋದ್ಯಮಿಯೂ ಅಲ್ಲ. ಅವರು ಏನೇ ಇದ್ದರು ಒಬ್ಬ ವ್ಯವಹಾರ ಪ್ರಜ್ಞೆಯುಳ್ಳ, ಒಂದು ಪ್ರಾಡಕ್ಟ್ ಅನ್ನು ತಯಾರಿಸಿ ಮಾರುವ ಮಾಲೀಕ, ಅಷ್ಟೇ. ನನಗೆ ಇನ್ನೂ ಚೆನ್ನಾಗಿ ನೆನಪಿದೆ... ವಿಜಯ ಕರ್ನಾಟಕ ಪ್ರಾರಂಭವಾದ ಸಮಯದಲ್ಲೇ 'ಜನವಾಹಿನಿ' ಎಂಬ ಮತ್ತೊಂದು ಪತ್ರಿಕೆ ಶುರುವಾಗಿತ್ತು. ಆಗ ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ ಮತ್ತು ಉದಯವಾಣಿಯಿಂದ ಪತ್ರಕರ್ತರ ವಲಸೆ ಪ್ರಾರಂಭವಾಗಿತ್ತು ಮಾತ್ರವಲ್ಲ ಅವರನ್ನು ಹೆಚ್ಚು ರೇಟಿಗೆ ಸಂಕೇಶ್ವರರು ಖರೀದಿಸಲಾರಂಭಿಸಿದರು.. "ಕನ್ನಡ ಪತ್ರಕರ್ತರಿಗೆ ಈಗಲಾದರೂ ಬೆಲೆ ಬಂದಿದೆ" ಎಂದು ಅವರಲ್ಲಿ ಹಲವರು ಹಿಗ್ಗಿದ್ದರೂ, ಹೇಳಿಕೇಳಿ ಸಂಕೇಶ್ವರರು ಬಿಜೆಪಿಯ ಸಂಸದ ಆಗಿದ್ದರಿಂದ ನನ್ನಲ್ಲಿ ಅನುಮಾನಗಳು ತುಂಬಿದ್ದವು. ಕುವೆಂಪು, ಬಸವಣ್ಣ, ಶಿಶುನಾಳ ಷರೀಫರ ಕರ್ನಾಟಕದಲ್ಲಿ ಹಿಂದೂತ್ವ ಸಿದ್ಧಾಂತದ ಸಂಕೇಶ್ವರರ ಪತ್ರಿಕೆಯಿಂದ ಇಲ್ಲಿ ಎಷ್ಟು ಅನಾಹುತಗಳು ಸಂಭವಿಸುತ್ತವೆಯೋ ಎಂಬ ಆತಂಕ ನನ್ನದಾಗಿತ್ತು. ಅದಕ್ಕೆ ತಕ್ಕಂತೆ ಈಶ್ವರ್ ದೈತೋಟ, ಮಹದೇವಪ್ಪರಂತಹ ಸಂಪಾದಕರು ವಿಜಯ ಕರ್ನಾಟಕದ ಬಾಗಿಲನ್ನು ಪ್ರವೇಶಿಸಿ, ಒಳಗಿದ್ದಿದ್ದನ್ನು ನೋಡಿ ಶಾಕ್ ಹೊಡೆದವರಂತೆ ಹೊರಬಂದಿದ್ದರು. ಅದು ಅಂತ್ಯಗೊಂಡಿದ್ದು ಆರ್‌ಎಸ್‌ಎಸ್‌ನ ಕೂಸಾದ ವಿಶ್ವೇಶ್ವರ ಭಟ್ ಕೊನೆಗೂ ವಿಜಯ ಕರ್ನಾಟಕದ ಗರ್ಭಗುಡಿಯನ್ನು ಪ್ರವೇಶಿಸಿ, ಅದರ ಕಚೇರಿಯಲ್ಲೇ ಆರ್‌ಎಸ್‌ಎಸ್ ಶಾಖಾವನ್ನು ಪ್ರಾರಂಭಿಸಿದಾಗ.

ಆನಂತರ 'ವಿಕ'ದಲ್ಲಿ ಹಿಂದೂತ್ವವಾದದ ವರದಿಗಳು ಪ್ರಾರಂಭವಾಗಿ, ಸುಳ್ಳು ವರದಿಗಳು, ಸೃಷ್ಟಿತ ಪತ್ರಗಳು ರಾರಾಜಿಸಲಾರಂಭಿಸಿದವು. ಇವೆಲ್ಲ ಪ್ರಜ್ಞಾವಂತರಲ್ಲಿ ಆತಂಕ ಮೂಡಿಸಿದವು. ಅದೇ ಸಂದರ್ಭದಲ್ಲಿ ವಿಜಯ ಸಂಕೇಶ್ವರರು ನನ್ನನ್ನು ನೋಡಲು ನಮ್ಮ ಆಫೀಸಿಗೆ ಬಂದರು. ಅಪ್ಪನ ಚೇಂಬರ್‌ನಲ್ಲಿ ಅಪ್ಪನ ಕುರ್ಚಿ ಮುಂದೆ ಕೂತ ಅವರನ್ನು ಮಾತನಾಡಿಸಿದ್ದೆ. ದೊಡ್ಡ ಸಂಸ್ಥೆಯೊಂದರ ಮಾಲೀಕ, ಕೋಟ್ಯಾಧಿಪತಿಯಾಗಿದ್ದ ಸಂಕೇಶ್ವರರು ಅವರಿಗಿಂತ ಕಿರಿಯಳಾದ ನನ್ನನ್ನು "ಅಕ್ಕ" ಎಂದೇ ಉದ್ದೇಶಿಸಿ ಮಾತನಾಡಿದರಲ್ಲದೆ, ಸರಳ ಮತ್ತು ಸಜ್ಜನರಂತೆ ಕಂಡರು. ಆದರೂ ನಾನು ಸುಮ್ಮನಿರಬೇಕಲ್ಲ! ಅವರ ಪತ್ರಿಕೆ ಹೇಗೆ ಆರ್‌ಎಸ್‌ಎಸ್‌ನ ಕೇಂದ್ರವಾಗಿದೆ ಎಂದೂ, ಅದರ ಹಿಂದೂತ್ವವಾದದಿಂದ ರಾಜ್ಯದ ಸಾಮರಸ್ಯಕ್ಕೆ ಹಾನಿಯಾಗಲಿದೆ ಎಂದೂ ವಿವರಿಸಿ "ನಿಮ್ಮ ಪತ್ರಿಕೆ ಕರ್ನಾಟಕವನ್ನು ಮತ್ತೊಂದು ಗುಜರಾತ್ ಆಗಿಸದಂತೆ ಎಚ್ಚರ ವಹಿಸಿ" ಅಂದಿದ್ದೆ. ಆಗ ಅವರು "ನಾನು ಪತ್ರಿಕೆಯ ಸಿದ್ಧಾಂತದ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ, ನನಗೆ ಹಲವಾರು ಕೆಲಸಗಳಿರುತ್ತವೆ. ಅದರಲ್ಲಿ ದಿನಕ್ಕೆ ಹತ್ತು ನಿಮಿಷವನ್ನು ಪತ್ರಿಕೆಯ ಕೆಲಸಗಳಿಗೆ ನೀಡುತ್ತೇನೆ" ಎಂದು ಉತ್ತರಿಸಿದರು. ಲಾರಿ ನೆಟ್‌ವರ್ಕ್ ನಡೆಸುವುದಕ್ಕೂ, ಪತ್ರಿಕೆಯನ್ನು ನಡೆಸುವುದಕ್ಕೂ ವ್ಯತ್ಯಾಸ ಕಂಡಂತಿರಲಿಲ್ಲ ಸಂಕೇಶ್ವರರು. ಅವರೊಂದಿಗೆ ಹದಿನೈದು ನಿಮಿಷ ಮಾತನಾಡಿ, ಜ್ಯೂಸ್ ತರಿಸಿಕೊಟ್ಟು ಬೀಳ್ಕೊಟ್ಟಿದ್ದೆ.

ಅವರು ಹೊರ ಹೋಗುತ್ತಿದ್ದಂತೆ ನನಗೆ ಫೋನ್ ಕರೆಗಳು ಬರಲು ಆರಂಭಿಸಿದವು. ಏನಾಗಿತ್ತೆಂದರೆ ಸಂಕೇಶ್ವರರು ನನ್ನನ್ನು ನೋಡಲು ಯಾಕೆ ಬಂದಿದ್ದರು ಎಂಬ ಆತಂಕ, ಕುತೂಹಲ 'ವಿಕ' ಒಳಗೆ ಹಬ್ಬಿತ್ತು. ನಾನು 'ವಿಕ'ದ ಸಂಪಾದಕಿ ಆಗುತ್ತೇನೆಂದೂ, ಅವರು ಪ್ರಾರಂಭಿಸಲಿರುವ ಹೊಸ ಇಂಗ್ಲಿಷ್ ದಿನ ಪತ್ರಿಕೆಯ ಜವಾಬ್ದಾರಿ ಹೊರತ್ತೇನೆಂದೂ ಗುಸುಗುಸು ಶುರುವಾಗಿತ್ತು. ಇದನ್ನು ಕೇಳಿ ನಾನು ಜೋರಾಗಿ ನಕ್ಕೆ. "ನನ್ನ ಅಪ್ಪನ ಜಾತ್ಯತೀತ ಪತ್ರಿಕೆ ನಡೆಸುತ್ತಿರುವ ನನಗೂ, ಬಿಜೆಪಿ ಸಂಸದ ಮಾಲೀಕತ್ವದ ಪತ್ರಿಕೆಗೂ ಎತ್ತಣೆಂದೆತ್ತಣ ಸಂಬಂಧ?" ಎಂದು ಅಚ್ಚರಿಪಟ್ಟಿದ್ದೆ.

ಇದಾದ ನಂತರ ಸಂಕೇಶ್ವರರು ಮತ್ತೊಮ್ಮೆ ನನ್ನ ಆಫೀಸಿಗೆ ಭೇಟಿ ನೀಡಿದ್ದರು. ಆಗ ವಿಧಾನಸಭೆಗೆ ಚುನಾವಣೆಗಳ ಕಾವು ಏರಿತ್ತು. ಸಂಕೇಶ್ವರರು 'ಕನ್ನಡ ನಾಡು ಪಾರ್ಟಿ' ಎಂಬ ಪಕ್ಷ ಸ್ಥಾಪಿಸಿ ಎಲ್ಲ ಕ್ಷೇತ್ರಗಳಲ್ಲಿ ಕೈಗೆ ಸಿಕ್ಕವರನ್ನು ಅಭ್ಯರ್ಥಿಗಳನ್ನಾಗಿಸಿದ್ದರಲ್ಲದೆ, ಸ್ವತಃ ತಾವೇ ಕಣಕ್ಕಿಳಿದಿದ್ದರು. ಆದರೆ ಅವರ ಪಕ್ಷವನ್ನು ಯಾರೂ ಸೀರಿಯಸ್ ಆಗಿ ತೆಗೆದುಕೊಂಡಿರಲಿಲ್ಲ. ಅವತ್ತು ಅವರು ನಮ್ಮ ಆಫೀಸಿಗೆ ಬಂದಾಗ "ನಿಮ್ಮ ಪ್ರಕಾರ ಈ ಚುನಾವಣೆಯಲ್ಲಿ ಯಾವ ಪಕ್ಷ ಎಷ್ಟು ಗೆಲ್ಲಬಹುದು" ಎಂದು ಕೇಳಿದ್ದೆ ಅದಕ್ಕೆ ಸಂಕೇಶ್ವರರು

ಕಂಡಹಾಗೆ



"Absolute majority ಬರುತ್ತೆ" ಅಂದರು.

"ಯಾವ ಪಕ್ಷಕ್ಕೆ?"

"ನಮ್ಮ ಪಕ್ಷಕ್ಕೆ!"

ಇದನ್ನು ಕೇಳಿ ಉಕ್ಕಿ ಬಂದ ನಗುವನ್ನು ಕಷ್ಟಪಟ್ಟು ಹತ್ತಿಕ್ಕಿದ್ದೆ. ಇದು ಅವರ ಭಂಡತನವೋ, ಮುಗ್ಧತನವೋ ಗೊತ್ತಾಗದೆ ಸುಮ್ಮನಾಗಿದ್ದೆ.

"ನೀವು ನಿಮ್ಮ ಪಕ್ಷಕ್ಕೆ ದೇಣಿಗೆ ಕೋರಿ ಪ್ರತಿ ದಿನ ಪತ್ರಿಕೆಯಲ್ಲಿ ಜಾಹಿರಾತು ನೀಡುತ್ತಿದ್ದಿರಲ್ಲ, ಅದರಿಂದ ಎಷ್ಟು ಹಣ ಸಂಗ್ರಹವಾಯಿತು?" ನನ್ನ ಪ್ರಶ್ನೆ.

"ಅಷ್ಟು ದಿನ ಅದನ್ನು ಪ್ರಕಟಿಸಿದ್ದಕ್ಕೆ ಬಂದ ಹಣ ಕೇವಲ 13,500 ರೂಪಾಯಿಗಳು. ಅದೇ ಜಾಗಕ್ಕೆ ನಾನು ಬೇರೆಯವರ ಜಾಹಿರಾತು ತೆಗೆದುಕೊಂಡಿದ್ದರೆ ಇನ್ನೂ ಹೆಚ್ಚು ಹಣ ಗಳಿಸುತ್ತಿದ್ದೆ" ಎಂದು ಹೇಳಿದರು ಸಂಕೇಶ್ವರ್. ಇಂತಹ ಪ್ರತಿಕ್ರಿಯೆಯನ್ನು ಕಂಡು, ಚುನಾವಣಾ ರಾಜಕೀಯದ ಬೇಕು-ಬೇಡಗಳನ್ನು ಅರಿತಿದ್ದ ಅವರು ತಮ್ಮ ಪಕ್ಷಕ್ಕೆ absclute majority ಬರುತ್ತದೆ ಎಂದು ಯಾವ ಆಧಾರದ ಮೇಲೆ ಭ್ರಮಿಸಿದ್ದರೋ, ಅವರಿಗೇ ಗೊತ್ತು.

ಈ ಎರಡು ಭೇಟಿಗಳ ಹೊರತಾಗಿ ಅವರೊಂದಿಗೆ ಫೋನ್‌ನಲ್ಲಿ ಹತ್ತೋ, ಹನ್ನೊಂದೋ ಬಾರಿ ಮಾತನಾಡಿದ್ದೇನೆ. ಅವುಗಳಲ್ಲಿ ಹೆಚ್ಚಿನವು ಪತ್ರಿಕೆಗೆ ಸಂಬಂಧಿಸಿದಂತೆ ಮಾಹಿತಿ, ದಾಖಲೆ, ವರದಿ ಇತ್ಯಾದಿಗಳನ್ನು ಕುರಿತು. ಆದರೆ ಒಂದರ ಬಗ್ಗೆ ಇಲ್ಲಿ ಹೇಳಬಯಸುತ್ತೇನೆ.

ಅವತ್ತು ವಿಜಯ ಕರ್ನಾಟಕದಲ್ಲಿ ಸಾವರ್‌ಕರ್ ಕುರಿತ ಒಂದು ಲೇಖನವಿತ್ತು. ರಾಷ್ಟ್ರೋತ್ಥಾನ ಪರಿಷತ್ತು ಪ್ರಕಟಿಸಿರುವ ಪುಟ್ಟ ಪುಸ್ತಕದಲ್ಲಿದ್ದ ಮಾಹಿತಿಯೇ ಆ ಲೇಖನದಲ್ಲಿದ್ದು ಸಾವರ್‌ಕರ್ ಒಬ್ಬ ದೇಶಭಕ್ತ, ಸ್ವಾತಂತ್ರ್ಯ ಹೋರಾಟಗಾರ ಎಂದೆಲ್ಲ ಬಣ್ಣಿಸಲಾಗಿತ್ತು. ಅದನ್ನು ನೋಡಿ ನನಗೆ ಸಿಟ್ಟುಬಂದು ನಾನು ಸಂಕೇಶ್ವರ್‌ರವರಿಗೆ ಫೋನ್ ಮಾಡಿದೆ.

"ಅಕ್ಕ, ಹೇಗಿದ್ದೀರ?" ಎಂದು ಅವರು ಕೇಳಿದಾಗ ಸಾವರ್‌ಕರ್ ಬಗೆಗಿನ ಲೇಖನದ ಬಗ್ಗೆ ಹೇಳಿ "ನಾನು ಸಾವರ್‌ಕರ್ ಎಂಬ ದೇಶದ್ರೋಹಿ ಬಗ್ಗೆ ಒಂದು ಲೇಖನ ಕಳುಹಿಸುತ್ತೇನೆ, ಅದನ್ನು ಪ್ರಕಟಿಸುತ್ತೀರಾ?" ಅಂತ ಕೇಳಿದೆ.

"ನಮ್ಮ ಸಂಪಾದಕರಿಗೆ ಕಳುಹಿಸಿ."

"ಅವರು ಅದನ್ನು ಕಸದಬುಟ್ಟಿಗೆ ಹಾಕ್ತಾರೆ ಅಂತ ಗೊತ್ತಿರೋದ್ರಿಂದ ನಿಮಗೆ ಫೋನ್ ಮಾಡ್ತಿದ್ದೀನಿ. ನೀವು ಪ್ರಕಟಿಸುತ್ತೇನೆ ಅಂದರೆ ಕಳುಹಿಸುತ್ತೇನೆ."

"ಯಾಕೆ ಈ controversy? ಸಾವರ್‌ಕರ್‌ರವರು ದೇಶಭಕ್ತರು, ದೊಡ್ಡ ಮನುಷ್ಯರು."

"ನಿಮ್ಮಿಂದ ಈ ಉತ್ತರವನ್ನೇ ನಿರೀಕ್ಷಿಸಿದ್ದೆ. ನಿಮ್ಮ ಪತ್ರಿಕೆಯಿಂದ ಈ ರಾಜ್ಯಕ್ಕೆ ಒಳ್ಳೆದಾಗುವುದಿಲ್ಲ" ಎಂದು ಹೇಳಿ ಫೋನ್ ಇಟ್ಟೆ. ಅದಾದ ನಂತರ ನಾನಿದ್ದ ಚಿತ್ರವೊಂದಕ್ಕೆ ತಪ್ಪು caption ನೀಡಿ ನನ್ನ ಬಗ್ಗೆ ತಪ್ಪು ಕಲ್ಪನೆ ಬರುವಂತೆ ಪ್ರಕಟಿಸಲಾಗಿತ್ತು. ಈ ಚಿತ್ರ 'ವಿಕ'ದ ಎಲ್ಲಾ ಆವೃತ್ತಿಗಳಲ್ಲಿ ಪ್ರಕಟಗೊಂಡಿತ್ತು. ಆದರೆ ಅದಕ್ಕೆ ನಾನು ನೀಡಿದ ಉತ್ತರವನ್ನು ಬೆಂಗಳೂರಿನ ಆವೃತ್ತಿಯಲ್ಲಿ ಮಾತ್ರ ಪ್ರಕಟಿಸಲಾಯಿತು. ಈ ಕುತಂತ್ರದ ಬಗ್ಗೆ ನಾನು 'ಕಂಡಹಾಗೆ'ಯಲ್ಲಿ ಬರೆದ ನಂತರ ನನ್ನ ಮೇಲೆ 'ವಿಕ'ದಲ್ಲಿ ಒಂದು ರೀತಿಯ ಬ್ಯಾನ್ ಹೇರಲಾಯಿತು. ಇದನ್ನು ಯಾರೋ ನನ್ನ ಗಮನಕ್ಕೆ ತಂದಾಗ ನಾನು ನಕ್ಕು ಸುಮ್ಮನಾಗಿದ್ದೆ. ನನ್ನ ಮೇಲಿನ ಬ್ಯಾನ್ ಹೇಗಿತ್ತೆಂದರೆ ನಾವು 'ಲಂಕೇಶ್' ವಾರ ಪತ್ರಿಕೆಯ ಜಾಹಿರಾತನ್ನು ನೀಡಿದಾಗ ಅದನ್ನು ತೆಗೆದುಕೊಳ್ಳಲು ನಿರಾಕರಿಸಿದ್ದರು. ಇದನ್ನು ಸಂಕೇಶ್ವರ್‌ರವರ ಗಮನಕ್ಕೆ ತಂದ ಕೂಡಲೇ ಅಧನ್ನು ಸ್ವೀಕರಿಸಿದ್ದರು.

ಇಂತಹ ಸಂಕೇಶ್ವರ್ ತಮ್ಮ 'ವಿಜಯ ಕರ್ನಾಟಕ'ವನ್ನು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಬೆನ್ನೆಟ್ ಕೋಲ್‌ಮನ್ ಅಂಡ್ ಕಂಪನಿ ಲಿಮಿಟೆಡ್ ಕಂಪನಿಗೆ ಮಾರಿದ್ದಾರೆ. ಮೇಲುವರ್ಗದ, ಐಷಾರಾಮಿ ಜಗತ್ತಿನ ಪ್ರತಿಬಿಂಬದಂತಿದೆ ಟೈಮ್ಸ್ ಆಫ್ ಇಂಡಿಯಾ, ನಿಜ. ಆದರೆ ಎಲ್ಲೋ ಒಂದು ಮೂಲೆಯಲ್ಲಿ ಸ್ವಲ್ಪವಾದರೂ ಜನಪರ, ಜಾತ್ಯತೀತ ನಿಲುವನ್ನು ಹೊಂದಿದೆ. ಇದಕ್ಕೆ ಉದಾಹರಣೆ ಮೊನ್ನಿನ ಮುಖಪುಟದಲ್ಲಿ ಮೀಸಲಾತಿ ವಿರೋಧಿ ವರದಿಗಳೇ ರಾರಾಜಿಸುತ್ತಿದ್ದರೂ, ಒಳಗಿನ ಪುಟದಲ್ಲಿ ಓರ್ವ ಪ್ರತಿಭಾವಂತ ದಲಿತನಿಗೆ ಹೇಗೆ ದೆಹಲಿಯ IIT ಯಲ್ಲಿ ಸೀಟ್ ನಿರಾಕರಿಸಲಾಗಿತ್ತು ಎಂಬ ತನಿಖಾ ವರದಿ ಪ್ರಕಟವಾಗಿದ್ದು, ಈ ನಿಲುವುಗಳು ಮುಂದೆ ವಿಜಯ ಕರ್ನಾಟಕದಲ್ಲೂ ತಲೆದೋರಲಿವೆ.

'ವಿಜಯ ಕರ್ನಾಟಕ' ಓದುವುದನ್ನು ಎಂದೋ ನಿಲ್ಲಿಸಿದ್ದ ನನಗೆ ಪ್ರಸ್ತುತ ವಿದ್ಯಾಮಾನಗಳಿಂದ ಏನೂ ಆಗದಿದ್ದರೂ, ಈ ಬದಲಾವಣೆಗಳಿಂದಾಗಿ ಪ್ರತಿನಿತ್ಯ ಕೋಮುವಾದದ ವಿಷ ಉಣಿಸುತ್ತಿರುವ ಪ್ರವೃತ್ತಿಯಾದರೂ ಅಂತ್ಯಗೊಳ್ಳಬಹುದು ಎಂಬ ಆಶಯವಂತೂ ಇದೆ.

* * * * * * *

ಕಳೆದ ಶುಕ್ರವಾರ ಸಂಜೆ ನಮ್ಮ ಕಚೇರಿಯಲ್ಲೇ ನಡೆದ 'ಮೀಸಲಾತಿ: ಬೆಂಕಿ? ಬೆಳಕು' ಚರ್ಚಾ ಕಾರ್ಯಕ್ರಮ ತುಂಬಾ ಚೆನ್ನಾಗಿ ನಡೆಯಿತು. ನಾವು ನಿರೀಕ್ಷಿಸಿದ್ದು ನಲವತ್ತು ಜನರನ್ನು, ಆದರೆ ಅಂದು ಬಂದಿದ್ದವರ ಸಂಖ್ಯೆ 80! ಅಪ್ಪ ಇದ್ದಾಗ ಪ್ರತಿ ತಿಂಗಳು 'ಸಂವೇದನೆ' ಹೆಸರಿನಡಿ ಇಂಥ ಚರ್ಚಾ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆನಂತರ ಅವರ ಆರೋಗ್ಯ ಹದಗೆಟ್ಟಾಗ ಅದು ನಿಂತಿತ್ತು. ಇದಕ್ಕೆ ಮತ್ತೆ ಚಾಲನೆ ನೀಡಬೇಕೆಂಬುದು ನನ್ನ ಬಹಳ ದಿನಗಳ ಆಸೆ ಆಗಿತ್ತು. ಆದರೆ ಹಲವಾರು ಒತ್ತಡಗಳು, ಕೆಲಸಗಳು ಇದ್ದಿದ್ದರಿಂದ ಅದು ಸಾಧ್ಯವಾಗಿರಲಿಲ್ಲ.

ಕಳೆದ ಸಂಚಿಕೆ ಮುದ್ರಣಕ್ಕೆ ತಯಾರಾಗುತ್ತಿದ್ದಾಗ ನಮ್ಮ ಬಳಿದಾಳೆ ಈಶರವರು "ಮೀಸಲಾತಿ ಬಗ್ಗೆ ಯಾಕೆ ಇಲ್ಲೇ ಒಂದು ಚರ್ಚೆ ನಡೆಸಬಾರದು?" ಅಂದರು. ಅವರು ಹೇಳಿದ್ದು ಸರಿ ಅನ್ನಿಸಿ ಅಪ್ಪನ 'ಸಂವೇದನೆ'ಗೆ ಪುನರ್‌ಜನ್ಮ ನೀಡಲು ಇದು ಸೂಕ್ತ ಸಮಯ ಮತ್ತು ಸೂಕ್ತ ವಿಷಯ ಅನ್ನಿಸಿ ಆ ಚರ್ಚೆಗೆ ಎಲ್ಲರಿಗೂ ಆಹ್ವಾನ ಕೋರಿ ಪ್ರಕಟಿಸಿದೆವು. ಆನಂತರ ಹಿರಿಯರಾದ 'ಕೆ. ಮರುಳಸಿದ್ದಪ್ಪ, ಕಿ.ರಂ. ನಾಗರಾಜ್', ಇಂದೂಧರ ಹೊನ್ನಾಪುರ ಮತ್ತು ಜಾಫೆಟ್ ಶಾಂತಪ್ಪರವರಿಗೆ ಖುದ್ದಾಗಿ ಫೋನ್ ಮಾಡಿದೆವು. ಎಲ್ಲರೂ ನಮ್ಮ ಕರೆಗೆ ಓಗೊಟ್ಟು ಇಂಥ ಒಂದು

(ನೀಲಿ ಪುಟಕ್ಕೆ)

ಲಂಕೇಶ್ ಪ್ರಜ್ಞೆಯೇ ನಮ್ಮೆಲ್ಲರ ಬೆನ್ನೆಲುಬು

ಪ್ರೀತಿಯ ಗೌರಿಯವರೇ,

ಎರಡು ವಾರಗಳ ಹಿಂದೆ ಸಂಭವಿಸಿದ ನನ್ನ ಪ್ಯಾರಾಗ್ಲೈಡಿಂಗ್ ಅಪಘಾತ, ತದನಂತರದ ಕ್ಲಿಷ್ಟವಾದ ಶಸ್ತ್ರಚಿಕಿತ್ಸೆ ಹಾಗೂ ಈ ಅಗ್ನಿಪರೀಕ್ಷೆಯಲ್ಲಿ ಚೇತರಿಸಿಕೊಂಡ ನನ್ನ ವೃತ್ತಾಂತವನ್ನು ಸ್ವತಃ ನಾನೇ ನಿರೂಪಿಸಿದ್ದರೂ ನಿಮ್ಮ ಟಿಪ್ಪಣಿಯಷ್ಟು ಹೃದಯಂಗಮವಾಗಿ ಮೂಡಿಬರುತ್ತಿರಲಿಲ್ಲವೇನೋ? ಪತ್ರಿಕೆಯ ಸಮಸ್ತ ಬಳಗದ ಪರವಾಗಿ ನೀವು ದಾಖಲಿಸಿರುವ ಶುಭ ಹಾರೈಕೆಗಳಿಗಾಗಿ ನನ್ನ ಕೃತಜ್ಞತೆ. ನನ್ನ ಹೋರಾಟದ ಸನ್ನಿವೇಶದಲ್ಲೂ ನೀವು ನನ್ನಲ್ಲಿ ಗುರುತಿಸಿದ ಜೀವನೋತ್ಸಾಹ, ನಿರಂತರ ಎಚ್ಚರ ಇವೆಲ್ಲವೂ ಕಳೆದ 26 ವರ್ಷಗಳ ಒಡನಾಟದಲ್ಲಿ ಲಂಕೇಶ್ ಮೇಷ್ಟ್ರಿಂದ ಪಡೆದುಕೊಂಡು ಬಂದ ಅಮೂಲ್ಯ ಬಳುವಳಿಯಲ್ಲವೆ?

ನಾಡಿನ ಎಲ್ಲ ಪ್ರಜ್ಞಾವಂತ ಮನಸ್ಸುಗಳ ಜೀವನಾಸಕ್ತಿ, ಹೋರಾಟ ಮನೋಭಾವ ಮತ್ತು ಪ್ರಸನ್ನ ನಿಷ್ಠುರತೆಯ ಹುಡುಕಾಟ ಇವುಗಳಿಂದಾಗಿಯೇ




ರೇಶ್ಮೆ ನಾಣಯ್ಯ, ಲಂಕೇಶ್ ಮೇಷ್ಟ್ರು, ಪಾಟಾಳ್

ನಮ್ಮ 'ಪತ್ರಿಕೆ' ನಮ್ಮೆಲ್ಲರ ನಿಜವಾದ ಬೆನ್ನೆಲುಬು. ಹಾಗಾಗಿ ನನ್ನ ಬೆನ್ನು ಮೂಳೆ ಮುರಿತದ ಈ ಕಹಿ ಪ್ರಸಂಗ ಅದಷ್ಟು ಶೀಘ್ರವೇ ಅಂತ್ಯಗೊಂಡು, ನಾನು ಮತ್ತೆ ದೈಹಿಕವಾಗಿಯೂ, ಮಾನಸಿಕವಾಗಿಯೂ ಚೈತನ್ಯಶಾಲಿಯಾಗಿ ಮರಳುವ ಆತ್ಮವಿಶ್ವಾಸ ಮೂಡಿದೆ.

ನನ್ನ ಶಸ್ತ್ರ ಚಿಕಿತ್ಸೆ ಮತ್ತು ತದ ನಂತರದ ಸಂಕಷ್ಟದ ಕ್ಷಣಗಳಲ್ಲಿ ಎಂ.ಎಸ್. ರಾಮಯ್ಯ ಆಸ್ಪತ್ರೆಯ ಆರ್ಥೋ ವಿಭಾಗದ ಮುಖ್ಯಸ್ಥರಾದ ಡಾ. ಸುಂದರೇಶ್ ಮತ್ತು ಅವರ ಸಹಾಯಕ ಸರ್ಜನ್ ಡಾ. ಗೌರಿಶಂಕರ್ ಹಾಗೂ ಅರಿವಳಿಕೆ ತಜ್ಞ ಡಾ. ರಾಘವೇಂದ್ರ ಪೈ ಅವರುಗಳ ತಂಡದ ವೃತ್ತಿ ಪ್ರಾವೀಣ್ಯತೆ, ಶ್ರದ್ಧೆ ಮತ್ತು ಪರಿಶ್ರಮಗಳ ಬಗ್ಗೆ ನನ್ನ ಮೆಚ್ಚುಗೆಯನ್ನು ದಾಖಲಿಸಲೇಬೇಕಾಗಿದೆ. ಹಾಗೆಯೇ ಐಸಿಯು ಪರಿಸರದಲ್ಲಿ ಕಾರ್ಯನಿರ್ವಹಿಸುವ ನರ್ಸಿಂಗ್ ಮತ್ತಿತರ ಎಲ್ಲಾ ಸಿಬ್ಬಂದಿಯ ಮದರ್ ಥೆರೇಸಾ ಮನೋಧರ್ಮ ಕೂಡ ಉಲ್ಲೇಖನೀಯ. ಈ ಎಲ್ಲಕ್ಕೂ ಮುಖ್ಯವಾಗಿ ಸತತವಾಗಿ 2 ದಿನಗಳ ಕಾಲ ರಕ್ತದಾನ ಶಿಬಿರದ ಮೂಲಕ ನನ್ನನ್ನು ಬದುಕುಳಿಸಲು ಅಗತ್ಯವಿದ್ದ ಸುಮಾರು 15 ಬಾಟಲ್‌ಗಳಷ್ಟು ರಕ್ತ ಸರಬರಾಜು ಮಾಡಿದ ಸಿಟಿ ಜನರಲ್ ಆಸ್ಪತ್ರೆಯ ಯುವ ಟೆಕ್ನಿಷಿಯನ್ ಕಿರಣ್ ಮತ್ತು ರಮೇಶ್ ಹಾಗೂ ಅಧೀಕ್ಷಕರ ಸಕಾಲಿಕ ನೆರವನ್ನೂ ಕೂಡ ಸಾರ್ವಜನಿಕವಾಗಿ ಸ್ಮರಿಸುತ್ತಿದ್ದೇನೆ.

ಬಹುಶಃ ಇನ್ನೊಂದು ವಾರದೊಳಗಾಗಿ ಈ ಶರಶಯ್ಯೆಯಿಂದ ಮೇಲೆದ್ದು ಮತ್ತೆ ನನ್ನ ಬದುಕು, ಬರವಣಿಗೆಗಳನ್ನು ಮುಂದುವರೆಸಲು ಕಾತುರದಿಂದಿದ್ದೇನೆ.

-ರವೀಂದ್ರ ರೇಶ್ಮೆ



ಮಂತ್ರಿ ಕಟ್ಟಾ ನೆಲ ನುಂಗಿದ್ದು




ಇದರ ಜೊತೆಗೇ ವೃಷಭಾವತಿ ಮೋರಿಯ ಕನಿಷ್ಠ ಐದು ಎಕರೆಗೆ ಕಟ್ಟಾ ಕಾಂಪೌಂಡ್ ಹಾಕದೇ ಬಿಡುವವನಲ್ಲ. ಬಿಡಿಎ ಮತ್ತು ಪಾಲಿಕೆಗಳೆರಡನ್ನೂ ಒಟ್ಟೊಟ್ಟಿಗೆ ವಂಚಿಸಿದ, ಸರ್ಕಾರಿ ಭೂಮಿಯನ್ನೇ ಕಬಳಿಸಿದ ಮಂತ್ರಿ ಕಟ್ಟಾ ವಿರುದ್ಧ ಮುಖ್ಯಮಂತ್ರಿ ಕುಮಾರಸ್ವಾಮಿ ಯಾವ ಲೆವೆಲ್ಲಿಗೆ ತನಿಖೆ ನಡೆಸುತ್ತಾರೆ? ಈ ಬಗ್ಗೆ ವಿರೋಧಿ ಕಾಂಗ್ರೆಸ್ ಕಾಟಚಾರಕ್ಕಾದರೂ ಪ್ರತಿಭಟಿಸುತ್ತಾ? ಇದು ಪ್ರತಿಯೊಬ್ಬ ಪ್ರಜ್ಞಾವಂತನನ್ನೂ ಕಾಡುತ್ತಿರುವ ಪ್ರಶ್ನೆ.

ರಾ. ಸೋಮನಾಥ್

ನೋಡ್ತಾ ಇರಿ. ಇಷ್ಟರಲ್ಲೇ ನೆಲಗಳ್ಳರನ್ನೆಲ್ಲ ಮಟ್ಟಾ ಹಾಕ್ತೀನಿ! ಲ್ಯಾಂಡ್ ಮಾಫಿಯಾಗಳನ್ನು ಪತ್ತೆ ಹಚ್ಚೋಕೆ ಅಂತಲೇ ಉನ್ನತ ಮಟ್ಟದ ತನಿಖಾ ಸಮಿತಿ ನೇಮಿಸ್ತೀನಿ... ಎಂದಿದ್ದ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಡೈಲಾಗನ್ನು ಅವರಿಗೇ ಮತ್ತೊಮ್ಮೆ ನೆನಪಿಸಿಕೊಡಬೇಕಾಗಿದೆ.

ಎಲ್ಲೋ ಇರುವ ನೆಲಗಳ್ಳರನ್ನು ಹಿಡಿದು ಜೈಲಿಗೆ ದಬ್ಬುವುದು ಹಾಳಾಗಲಿ, ಕನಿಷ್ಠ ಅವರ ಸಚಿವ ಸಂಪುಟದಲ್ಲೇ ಇರುವ ಭೂಚೋರರ ಮೇಲಾದರೂ ತನಿಖೆ ಮಾಡುತ್ತಾರಾ?

ಹೀಗೆ ಮುಖ್ಯಮಂತ್ರಿಯೊಬ್ಬನ ಅಸಲಿಯತ್ತನ್ನೇ ಕೆಣಕುವಂತೆ ಸರಿಸುಮಾರು ಇಪ್ಪತ್ತು ಕೋಟಿಯ ಭೂವಂಚನೆಗೆ ಕಾರಣನಾದ ನೆಲಗಳ್ಳನ ಹೆಸರು ಕಟ್ಟಾ ಸುಬ್ರಮಣ್ಯನಾಯ್ಡು. ರಾಜ್ಯ ಬಿಜೆಪಿಯ ವಿಧೂಷಕ ನಾಯಕ. ಶಿವಾಜಿನಗರದ ಹಾಲೀ ಶಾಸಕ ಮತ್ತು ರೇಷ್ಮೆ ಮತ್ತು ಸಣ್ಣ ಕೈಗಾರಿಕಾ ಖಾತೆಯ ಸನ್ಮಾನ್ಯ ಸಚಿವ ಬಹುಶಃ ಲ್ಯಾಂಡ್ ಮಾಫಿಯಾಗಳನ್ನೆಲ್ಲ ಮುಖ್ಯಮಂತ್ರಿ ಕುಮಾರಣ್ಣ ಜೈಲಿಗೆ ಹಾಕುವುದೇ ಆದರೆ ಅದಕ್ಕೆ ಬೇಕಾದ ಸೀನಿಯಾರಿಟಿ ಮತ್ತು ಕ್ವಾಲಿಟಿಗಳೆರಡೂ ಸಮೃದ್ಧವಾಗಿ ಮೇಳೈಸಿರುವುದು ಈತನಲ್ಲೇ!




ರಾಮಕೃಷ್ಣ ಹೆಗಡೆ ಕಾಲದಲ್ಲಿ ರೇವಜೀತು ಭೂಹಗರಣವಿತ್ತಲ್ಲಾ ಅಂಥದ್ದೇ ಭೂಗಳ್ಳತನವೊಂದಕ್ಕೆ ಕಟ್ಟಾಸುಬ್ರಮಣ್ಯನಾಯ್ಡು ಕಾರಣಕರ್ತನಾಗುತ್ತಿದ್ದಾನೆ. ಸರಿ ಸುಮಾರು ಇಪ್ಪತ್ತು ಕೋಟಿ ಬೆಲೆ ಬಾಳುವ ಭೂಮಿಯನ್ನು ಬಿಡಿಎಗೆ ವಂಚಿಸಿ ನುಂಗಿದ್ದು ಈತನ ಚಾಲಾಕಿತನಕ್ಕೆ ಸಾಕ್ಷಿಯಾದರೆ, ಅದಕ್ಕೆಂದು ಇಡೀ ಬೆಂಗಳೂರು ಮಹಾನಗರ ಪಾಲಿಕೆಯನ್ನೇ ದುರುಪಯೋಗಪಡಿಸಿಕೊಂಡಿದ್ದಾನೆ. ತಾನಷ್ಟೇ ಅಲ್ಲದೆ ತನ್ನ ಧರ್ಮ ಪತ್ನಿ ಸೌಭಾಗ್ಯ ಮತ್ತು ಮಗ ಕೆ.ಎಸ್. ಜಗದೀಶ್‌ನನ್ನೇ ಭೂ ವಂಚನೆಗೆ ಎಳೆತಂದಿದ್ದಾನೆ. ಪಾಲಿಕೆಯ ಮಾಜಿ ಕಮಿಷನರ್ ಜ್ಯೋತಿರಾಮಲಿಂಗಮ್ ಮತ್ತು ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗಳನ್ನೆಲ್ಲ ತಮ್ಮ ಮಂತ್ರಿ ಪದವಿ ಬಳಸಿಯೇ ಬ್ಲಾಕ್‌ಮೇಲ್ ಮಾಡುತ್ತಿದ್ದಾನೆ.

ಅದು ಏಳೆಕರೆ ಇಪ್ಪತ್ತೊಂದು ಗುಂಟೆಯಷ್ಟು ವಿಶಾಲವಾದ ಹಾಲೀ ಮಾರುಕಟ್ಟೆಯಲ್ಲಿ ಇಪ್ಪತ್ತುಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ಭರ್ಜರಿ ಸೈಟು. ಸಧ್ಯ ಮೈಸೂರು ರಸ್ತೆಯ ಬ್ಯಾಟರಾಯನಪುರ ಪೋಲೀಸ್ ಠಾಣೆಯ ಹಿಂಭಾಗಕ್ಕೆ ವಿಶಾಲ ಕಾಂಪೌಂಡಿನ ಒಳಗೆ ಖಾಲಿ ಖಾಲಿ ಬದ್ದಿದೆ. ಪಕ್ಕದಲ್ಲೇ ಅವಲಹಳ್ಳಿ-ಬ್ಯಾಟರಾಯನಪುರ. ಮತ್ತೊಂದು ಮಗ್ಗುಲಿಗೆ ಮೈಸೂರು ರಸ್ತೆ. ಹಿಂಭಾಗಕ್ಕೆ ಹೊಸಕೆರೆಹಳ್ಳಿ ಮೇನ್ ರಸ್ತೆ. ಅದಕ್ಕೆ ಹೊಂದಿಕೊಂಡಂತೆ ವೃಷಭಾವತಿ ಮೋರಿಯ ಎಕರೆಗಟ್ಟಲೇ ಸರ್ಕಾರಿ ಜಮೀನಿದೆ.

ಒಂದಾನೊಂದು ಕಾಲಕ್ಕೆ ಇದೇ ಏಳೆಕರೆ ಇಪ್ಪತ್ತೊಂದು ಗುಂಟೆ ಕಾಂಪೌಂಡಿನಲ್ಲಿ ಮೈಸೂರು ಮೆಷನರಿ ಮ್ಯಾನು ಫ್ಯಾಕ್ಚರರ್ಸ್ ಕಂಪನಿ ಲಿಮಿಡೆಟ್ ಎಂಬ ಫ್ಯಾಕ್ಟರಿಯಿತ್ತು, ಮೂರು ಸಾವಿರಕ್ಕೂ ಅಧಿಕ ಕಾರ್ಮಿಕರಿದ್ದರು. ಸಿಐಟಿಯು ನಾಯಕರಾಗಿದ್ದ ಸೂರ್ಯನಾರಾಯಣರಾವ್ ನೇತೃತ್ವದಲ್ಲಿ ನಡೆದ ಕಾರ್ಮಿಕರ ಮುಷ್ಕರವನ್ನು ಹತ್ತಿಕ್ಕಲು ದೇವರಾಜ ಅರಸು ಸರ್ಕಾರ ಗೋಲಿಬಾರ್ ನಡೆಸಿತ್ತು. ಆ ಕಾಲಕ್ಕೆ ಪತ್ರಿಕೆಗಳ ಪಾಲಿಗೆ ಅದೇ ದೊಡ್ಡ ಸುದ್ದಿ. ಹಾಗೇ ರೋಗಗ್ರಸ್ಥಗೊಂಡ ಮೈಸೂರು ಮ್ಯಾನು ಫ್ಯಾಕ್ಚರರ್ಸ್ ಕಂಪನಿ 1946ರಲ್ಲಿ ಶುರುವಾದದ್ದು 1982ರ ಡಿಸೆಂಬರ್ ಹೊತ್ತಿಗೆ ಕಣ್ಣು ಮುಚ್ಚಿದಾಗ ಸರಿಸುಮಾರು 61.52 ಲಕ್ಷ ರೂಪಾಯಿಗಳಷ್ಟು ನಷ್ಟಕ್ಕೀಡಾಗಿತ್ತು. ಆಗ ಅದರ ಸಾರಥ್ಯ ವಹಿಸಿಕೊಂಡ ಮುಂಬಯಿಯ ಉದ್ಯಮಿಪತಿ ಎಸ್.ಎಂ. ಶೆಟ್ಟಿ ಏನೆಲ್ಲಾ ಸಾಲ ಎತ್ತಿ ಫ್ಯಾಕ್ಟರಿಯ ಪುನಶ್ಚೇತನಕ್ಕೆ ಯತ್ನಿಸಿದರೂ ಬರಕತ್ತಾಗಲಿಲ್ಲ. ವಿಧಿಯಿಲ್ಲದೆ ಫ್ಯಾಕ್ಟರಿಯ ಚರಾಚರಗಳನ್ನೆಲ್ಲ ಎಸ್.ಎಂ. ಶೆಟ್ಟಿಯ ಮೆII ಎಸ್.ಎಂ. ಪ್ರಾಪರ್ಟೀಸ್ ಅಂಡ್ ಡೆವಲಪರ್ಸ್ ಲಿಮಿಡೆಟ್ ಎಂಬ ಮತ್ತೊಂದು ಕಂಪನಿಯ ಪಾಲಾಯಿತು.


ತಮಗೆ ಬರಬೇಕಿದ್ದ ಸಾಲಕ್ಕೆ ಇಡೀ ಫ್ಯಾಕ್ಟರಿಗೇ ಹಕ್ಕುದಾರರಾದ ಮುಂಬಯಿಯ ಎಸ್.ಎಂ. ಪ್ರಾಪರ್ಟಿ ಡೆವಲಪರ್ಸ್ ಕಂಪನಿ ಅದಕ್ಕೆಂದು ಸತತ ಹತ್ತು ವರ್ಷಗಳ ಕಾಲ ರಾಜ್ಯ ಹೈಕೋರ್ಟಿನಲ್ಲಿ ಹೋರಾಡಿತ್ತು. ಉಳಿದದ್ದು ಫ್ಯಾಕ್ಟರಿಗೆ ಸೇರಿದ್ದ ಏಳೆಕರೆ ಇಪ್ಪತ್ತೊಂದು ಗುಂಟೆ ಜಮೀನು ಮಾತ್ರ. ಅದನ್ನು ಮಾರಿಯೇ ಸಾಲ ತೀರಿಸಬೇಕಾಗಿತ್ತು. 1991ರಲ್ಲಿ ಮೈಸೂರು ಮ್ಯಾನುಫ್ಯಾಕ್ಚರರ್ಸ್ ಕಂಪನಿಯೇ ಕೈಗಾರಿಕಾ ಉದ್ದೇಶದ ಭೂಮಿಯನ್ನು ವಸತಿ ಉದ್ದೇಶಕ್ಕೆಂದು ಮಾರ್ಪಡಿಸಲು ಪರವಾನಗಿ ಕೋರಿ ನಗರಾಭಿವೃದ್ಧಿ ಇಲಾಖೆಗೆ ಅರ್ಜಿ ಸಲ್ಲಿಸಿತ್ತು. ಬೆಂಗಳೂರು ಉತ್ತರ ಕಸಬಾ ಹೋಬಳಿ ಬ್ಯಾಟರಾಯನಪುರದ ಸರ್ವೆ ನಂಬರ್ 7/2 ಮತ್ತು 7/3ರ ಏಳೆಕರೆ ಇಪ್ಪತ್ತೊಂದು ಗುಂಟೆ ಜಮೀನಿನ ಭೂ ಪರಿವರ್ತನೆಗೆ 1993ರಲ್ಲಿ ಸರ್ಕಾರಿ ಮಂಜೂರಾತಿಯೂ ಸಿಕ್ಕಿತ್ತು.

ಹಾಗೇ ಸಮೂಹ ವಸತಿಗೆಂದು ಅನುಮತಿ ನೀಡಿದ ನಗರಾಭಿವೃದ್ಧಿ ಇಲಾಖೆ ತನ್ನ ಆದೇಶದಲ್ಲಿ ಕೆಲ ಷರತ್ತುಗಳನ್ನು ವಿಧಿಸಿತ್ತು. ಅದರ ಪ್ರಕಾರ ಮೈಸೂರು ಮ್ಯಾನುಫ್ಯಾಕ್ಚರರ್ಸ್ ಕಂಪನಿ ಅಂದರೆ ಎಂಎಂಸಿ ತನ್ನ ಸಮೂಹ ವಸತಿ ಯೋಜನೆಯನ್ನು ಎಸ್.ಎಂ. ಪ್ರಾಪರ್ಟೀಸ್ ಅಂಡ್ ಡೆವಲಪರ್ಸ್‌ಗೆ ಮಾತ್ರವೇ ವಹಿಸತಕ್ಕದ್ದು. ಅದಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪರವಾನಗಿ ಪಡೆಯತಕ್ಕದ್ದು. ಇದನ್ನು 1992ರಿಂದ ಐದು ವರ್ಷಗಳ ಒಳಗಾಗಿ ಮುಗಿಸಬೇಕು. ನಿರ್ಮಿಸಿದ ಫ್ಲಾಟುಗಳನ್ನು ಯಾವುದೇ ನಗರ ಸಮುಚ್ಚಯದಲ್ಲಿ ಹೆಚ್ಚುವರಿ ಭೂಮಿ ಹೊಂದಿಲ್ಲದೆ ಇರುವವರಿಗೆ ಮಾತ್ರ ಮಾರಬೇಕು. ರಸ್ತೆ ನಿರ್ಮಿಸಲು ಬೇಕಾದಷ್ಟು ಭೂಮಿಯನ್ನು ಪಾಲಿಕೆಗೆ ಬಿಟ್ಟುಕೊಡಬೇಕು ಮತ್ತು ಈ ಯಾವುದೇ ಷರತ್ತು ಉಲ್ಲಂಘನೆಯಾದ ಪಕ್ಷದಲ್ಲಿ ಇಡೀ ಯೋಜನೆಯನ್ನೇ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವುದು.



ಸೇಲ್ ಡೀಡ್‌ನಲ್ಲಿ ಕಟ್ಟಾ ದಂಪತಿಗಳ ಸಹಿ

ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಆದೀನ[...] ಕಾರ್ಯದರ್ಶಿ ಎ.ಎಸ್. ಶ್ರೀಧರ್ 1993ರ ಏಪ್ರಿಲ್ ಇಪ್ಪತ್ಮೂರರಂದು ಭೂ ಪರಿವರ್ತನೆಗೆ ಒಪ್ಪಿ ಹೊರಡಿಸಿದ[...] ಆದೇಶವಿದು. ಈ ಷರತ್ತುಗಳ ಪ್ರಕಾರವೇ ಮುಂಬಯಿಯ[...] ಎಸ್.ಎಂ. ಪ್ರಾಪರ್ಟೀಸ್ ಅಂಡ್ ಡೆವಲಪರ್ಸ್ ಕಂಪನಿ[...] ಹೊಸ ಲೇಔಟ್ ನಿರ್ಮಾಣಕ್ಕೆ ನಕ್ಷೆ ಮಂಜೂರು[...] ಮಾಡುವಂತೆ ಕೋರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿತ್ತು. ಕಾರ್ಪೋರೇಷನ್ ವ್ಯಾಪ್ತಿಯಲ್ಲಿ ಹೊಸ ಲೇಔಟ್ ನಿರ್ಮಿಸಬೇಕೆಂದರೆ ಅದಕ್ಕೆ[...] ಬಿ.ಡಿ.ಎ.ತನ್ನದೇ ಆದ ಷರತ್ತುಗಳನ್ನು ವಿಧಿಸುತ್ತದೆ. ಅ[...] ಪ್ರಕಾರ ಅರ್ಧಕ್ಕರ್ಧ ಭೂಮಿಯನ್ನು ರಸ್ತೆ, ಪಾರ್ಕು, ಪೋಸ್ಟ್ ಆಫೀಸ್, ಪೋಲೀಸ್ ಸ್ಟೇಷನ್ನಿಗೆಂದು[...] ಬಿಡಬೇಕಾಗುತ್ತದೆ. ಒಟ್ಟೂ ಸೈಟುಗಳ ಪೈಕಿ ಶೇ. 30ರಷ್ಟನ್ನು ಬಿಡಿಎಗೆ ಬಿಟ್ಟುಕೊಡಬೇಕು. ಸಾಲದ್ದಕ್ಕೆ[...] ಚದರ ಅಡಿಗೆ ಐವತ್ತು ರೂಪಾಯಿಯಂತೆ ಅಭಿವೃದ್ಧಿ[...] ಶುಲ್ಕ ಕಟ್ಟಬೇಕು. ಇದನ್ನೆಲ್ಲ ಲೆಕ್ಕ ಹಾಕಿದರೆ ಒಟ್ಟೂ[...]



ಪಾಲಿಕೆಗೆ ಕೊಟ್ಟ ಮನವಿಯಲ್ಲಿ ಕಟ್ಟಾ ಸಹಿ

ಪಾಲಿಕೆ ಕಳ್ಳರಿಗೆ ತಲೆಗೊಂದು ಸೈಟು

ಕಟ್ಟಾ ಭೂ ಕಬಳಿಕೆ ವಿರುದ್ಧ ಪಾಲಿಕೆ ಕಮಿಷನರ್‌ಗೆ 2005ರ ಏಪ್ರಿಲ್ ಒಂದರಂದೇ ಬಿ.ಡಿ.ಎ. ಪತ್ರ ಬರೆದಿತ್ತು. ಅಲ್ಲಿನ ನಿವೇಶನಗಳ ಖಾತಾ ವರ್ಗಾವಣೆ, ಕಟ್ಟಡ ನಕ್ಷೆ ಅನುಮೋದನೆಯಂತಹ ಅಭಿವೃದ್ಧಿ ಕಾರ್ಯಗಳಿಗೆ ಅನುಮತಿ ನೀಡಲೇಬಾರದೆಂದು ಸೂಚಿಸಿತ್ತು. ಆದಾಗ್ಯೂ ಕಟ್ಟಾ ತನ್ನ ಅಕ್ರಮ ಲೇಔಟ್ ನಿರ್ಮಿಸಿದ್ದು ತಾನು ರೇಷ್ಮೆ ಮತ್ತು ಸಣ್ಣ ಕೈಗಾರಿಕಾ ಮಂತ್ರಿಯಾದ ನಂತರವೇ.



ರಾಜಣ್ಣ

ಅದಕ್ಕೆಂದು ಕಟ್ಟಾಗೆ ಎಲ್ಲ ಕಳ್ಳ ದಾರಿಗಳನ್ನೂ ಕಲಿಸಿಕೊಟ್ಟವನು ಪಾಲಿಕೆಯ ಚಂದ್ರಾ ಲೇಔಟ್ ಉಪ ವಿಭಾಗದ ಸಹ ಕಂದಾಯ ಅಧಿಕಾರಿ ರಾಮಲಿಂಗಯ್ಯ. ಈ ಹಿಂದೆ ಅಕ್ರಮ ನೇಮಕಾತಿ ದಂಧೆಯಲ್ಲಿ ಈತನಿಗೆ ಜೈಲು ಶಿಕ್ಷೆಯಾಗಿತ್ತು. ತನ್ನ ಖಾಸಗಿ ಜಾಗದಲ್ಲಿ ಕಟ್ಟಾ ರಸ್ತೆ ಮತ್ತು ಚರಂಡಿ ನಿರ್ಮಿಸಿದ್ದು ಕಾನೂನು ಬದ್ಧವಾಗಿದೆಯೆಂದು ಆತ ವರದಿ ಕೊಟ್ಟಿದ್ದೇ ತಡ, ಪಾಲಿಕೆ ಕಮಿಷನರ್ ಜ್ಯೋತಿ ರಾಮಲಿಂಗಮ್ 2006ರ ಮಾರ್ಚ್ 24ರಂದು ಅದನ್ನು ಒಪ್ಪಿ ಟಿಪ್ಪಣಿ ಬರೆಯುತ್ತಾರೆ. ಅದು 2006ರ ಏಪ್ರಿಲ್ ಐದರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸಭೆಯಲ್ಲೂ ಅನುಮೋದಿಸಲ್ಪಡುತ್ತದೆ.



ನಾಗರತ್ನ

ಲೇಔಟಿಗೆ ಅಭಿವೃದ್ಧಿ ಶುಲ್ಕ, ವಿದ್ಯುತ್ ದೀಪಗಳ ಶುಲ್ಕ ಇತ್ಯಾದಿಯನ್ನು ಪಾವತಿಸಿಕೊಳ್ಳುವಂತೆ ರಾಜಾಜಿನಗರದ ಕೌನ್ಸಿಲರ್ ಮತ್ತು ನಗರ ಯೋಜನೆ-ಅಭಿವೃದ್ಧಿ ಸ್ಥಾಯಿ ಸಮಿತಿಯ ಅಧ್ಯಕ್ಷ ಎನ್. ರಾಜಣ್ಣ ಆದೇಶ ಹೊರಡಿಸುತ್ತಾನೆ. ಅದಕ್ಕೆ ಸ್ಥಾಯಿ ಸಮಿತಿಯ ಇತರೇ ಸದಸ್ಯರಾದ ಗೀತಾ ಸದಾಶಿವ, ಜಮೀಲ್ ಅಹ್ಮದ್, ಬಿ.ಎಸ್. ಪುಟ್ಟರಾಜು, ಬಿ. ಸೋಮಶೇಖರ್ ಮುಂತಾದ ಕೌನ್ಸಿಲರ್‌ಗಳು ಒಪ್ಪಿ ಸಹಿ ಹಾಕುತ್ತಾರೆ. ಅಲ್ಲಿಗೆ ಎಪ್ಪತ್ತು ಕೋಟಿಯ ಕಟ್ಟಾ ಭೂ ಕಬಳಿಕೆಗೆ ಸರ್ಕಾರಿ ಸಮ್ಮತಿ ಸಿಕ್ಕಂತಾಗುತ್ತದೆ.

ಕಾನೂನು ಕೋಶದ ಮುಖ್ಯಸ್ಥರು, ಲೆಕ್ಕಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷೆ ನಾಗರತ್ನ ಪಿಳ್ಳರಾಜು, ಬಿಡಿಎ ಕಮಿಷನರ್ ಮುಂತಾದವರ ವಿರೋಧ ವಿದ್ದಾಗ್ಯೂ ಕಟ್ಟಾ ಭೂ ಕಬಳಿಕೆ ನೆರವೇರಿದ್ದಕ್ಕೆ ಆತನ ಮಂತ್ರಿಗಿರಿಯ ತಾಕತ್ತು ಮತ್ತು ಪಾಲಿಕೆ ಕಳ್ಳರಿಗೆ ತಿನ್ನಿಸಿದ ಬಿಸ್ಕತ್ತು ಕಾರಣವಾಗಿತ್ತು. ಒಂದು ಮೂಲದ ಪ್ರಕಾರ ಪಾಲಿಕೆ ಮಾಜಿ ಕಮೀಷನರ್ ಜ್ಯೋತಿರಾಮಲಿಂಗಮ್, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಅಧ್ಯಕ್ಷ ಎನ್. ರಾಜಣ್ಣ ಮತ್ತು ಚಂದ್ರಾಲೇಔಟ್ ಪಿ.ಆರ್.ಓ. ರಾಮಲಿಂಗಯ್ಯ ಮುಂತಾದವರಿಗೆ ಕಟ್ಟಾ ತಲಾ ಒಂದೊಂದು ಸೈಟು ಕೊಟ್ಟಿದ್ದಾನೆ.

ಈ ಬಗ್ಗೆ ದೊಡ್ಡ ಮಟ್ಟದ ತನಿಖೆ ಯಾಗಬೇಕಷ್ಟೆ.

ರೇಷ್ಮೆ ಹುಳುಗಳನ್ನೆಲ್ಲ ಸಾಯಿಸಿ ಅಂದನಂತೆ!

ಸದ್ಯ ಕಟ್ಟಾ ರೇಷ್ಮೆ ಮಂತ್ರಿಯಷ್ಟೇ ಅಲ್ಲ ಸಣ್ಣ ಕೈಗಾರಿಕಾ ಮಂತ್ರಿ ಕೂಡ. ಕೆಲ ರೈತರು ಹೋಗಿ ಚೈನಾ ರೇಷ್ಮೆ ಸ್ಮಗ್ಲಿಂಗ್ ತಡೆಗಟ್ಟಿ ಎಂದು ಮನವಿ ಕೊಟ್ಟರೆ, ಮರುದಿನಕ್ಕೇ ಚಿಕ್ಕಪೇಟೆಯ ಚೈನಾ ರೇಷ್ಮೆ ಸ್ಮಗ್ಲರುಗಳಾದ ಪಟೇಲ್ ಅಂಗಾಡಿಯಾ, ಶಾಂತಿಲಾಲ್, ಜೈಪುರಿಯಾ ಮುಂತಾದವರನ್ನು ತಮ್ಮ ಆ್ಯಂಟಿ ಛೇಂಬರಿಗೆ ಕರೆಸಿ ಅವರ ಜೊತೆ ನಾಷ್ಟ ಮಾಡುತ್ತಿದ್ದನಂತೆ ಕಟ್ಟಾ ನಾಯ್ಡು.

ಲ್ಯಾಂಡ್ ಗ್ರ್ಯಾಬರ್ ಒಬ್ಬ ರೇಷ್ಮೆ ಮಂತ್ರಿಯಾದರೆ ಇನ್ನೇನಾಗುತ್ತೆ? ರೇಷ್ಮೆಯ ಗಂಧಗಾಳಿ ಗೊತ್ತಿಲ್ಲದ ಮಂತ್ರಿಗಳಿಗೆ ರೇಷ್ಮೆ ಹುಳದ ಬಗ್ಗೆ ಅಧಿಕಾರಿಗಳು ವಿವರಿಸುತ್ತಿದ್ದರೆ 'ಅಲ್ರೀ ಇಂಥ ಹುಳಗಳನ್ನೆಲ್ಲ ಕೀಟನಾಶಕ ಹಾಕಿ ಸಾಯಿಸೋದಲ್ವೇನ್ರಿ? ಎಷ್ಟೊಂದು ರೇಷ್ಮೆ ಬಟ್ಟೆ ತಿನ್ನುತ್ತವೆ ಅಲ್ವಾ?' ಎಂದರಂತೆ!

ಇದು ರೇಷ್ಮೆಯ ಬಗ್ಗೆ ಕಟ್ಟಾ ತಿಳುವಳಿಕೆಯಾದರೆ ಇನ್ನು ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ (ಕೆಎಸ್‌ಎಸ್‌ಐಡಿಸಿ)ದ ಖಾಲಿ ಷೆಡ್ಡುಗಳು, ಖಾಲಿ ಸೈಟುಗಳು ಎಲ್ಲೆಲ್ಲಿವೆ ಎಂದು ಹುಡುಕುತ್ತಾ ಕುಂತಿದ್ದಾರಂತೆ ನಾಯ್ಡು. ಹೀಗೆ ಲ್ಯಾಂಡ್ ಗ್ರ್ಯಾಬಿಂಗ್ ದೃಷ್ಟಿಯಿಟ್ಟುಕೊಂಡೇ ಕೆಎಸ್‌ಎಸ್‌ಐಡಿಸಿಗೆ ಎಂ.ಡಿ.ಯಾಗಿದ್ದ ಮುಕ್ತಾಂಬ ನೆಲಗಳ್ಳತನ ಪತ್ತೆಹಚ್ಚಿದ್ದಾರಂತೆ. ಆಕೆ ಅಷ್ಟೊಂದು ಕಮ್ಮಿ ರೇಟಿಗೆ ಸೈಟು ಮಾರಿದ್ದೇ ಮಹಾಪರಾಧ ಎಂದು ಕಟ್ಟಾ ಮಹಾನ್ ದಕ್ಷನ ಗತ್ತಿನಲ್ಲಿ ಪೋಜು ಕೊಡುತ್ತಿರುವುದರ ಹಿಂದಿನ ಉದ್ದೇಶ ಎಂಥವರಿಗೂ ಅರ್ಥವಾಗುವಂಥದ್ದೆ.

ಏಳೆಕರೆಯಲ್ಲಿ ಉಳಿಯುವುದು ಬರೇ ಮೂರೂವರೆ ಎಕರೆ. ಬಿಡಿಎಯ ಕಣ್ಣಿಗೇ ಮಣ್ಣೆರಚುವುದು ಹೇಗೆ? ಅದನ್ನು ಮಾಡಬಲ್ಲ ಪ್ರಳಯಾಂತಕ ಯಾರು?

ಇಂಥದ್ದೊಂದು ಹುನ್ನಾರಕ್ಕೆಂದು ಮುಂಬಯಿಯ ಬಿಲ್ಡರ್ ಎಸ್.ಎಂ.ಶೆಟ್ಟಿಗೆ ಸಿಕ್ಕವನು ಶಿವಾಜಿನಗರದ ಶಾಸಕ ಕಟ್ಟಾಸುಬ್ರಮಣ್ಯನಾಯ್ಡು!

ಇಪ್ಪತ್ತು ಕೋಟಿಯ ಬ್ಯಾಟರಾಯನಪುರದಂಥ ಏರಿಯಾದ ಏಳೆಕರೆ ಇಪ್ಪತ್ತೊಂದು ಗುಂಟೆ ಜಮೀನು ಅದರ ಅರ್ಧ ರೇಟಿಗೆ ಸಿಗುತ್ತದೆಯೆಂದರೆ ಯಾರಿಗೆ ಬೇಡ? ತನ್ನ ಎಮ್ಮೆಲ್ಲೇಗಿರಿಯನ್ನು ಮುಂದಿಟ್ಟುಕೊಂಡೇ ಬಿಡಿಎ ಅಧಿಕಾರಿಗಳಿಗೆ ಧಮಕಿ ಹಾಕಿದರಾಯ್ತು. ಸಾಲದ್ದಕ್ಕೆ ಇದಕ್ಕೆ ಹೊಂದಿಕೊಂಡೇ ವೃಷಭಾವತಿ ನದಿ(ಮೋರಿ)ಯ ಎಕರೆಗಟ್ಟಲೇ ಸರ್ಕಾರಿ ಭೂಮಿಯಿದೆ. ಎಷ್ಟು ಬೇಕೋ ಅಷ್ಟಕ್ಕೆ ಕಾಂಪೌಂಡ್ ಒತ್ತರಿಸಬಹುದು. ಹೀಗೆ ಲೆಕ್ಕ ಹಾಕಿದ ಕಟ್ಟಾ ಸುಬ್ರಮಣ್ಯನಾಯ್ಡು ಇದಕ್ಕೆಂದು ತುರುವೇಕೆರೆಯ ದಾಸಪ್ಪಶೆಟ್ಟಿ ಎಂಬ ಧನಿಕರ ಮಕ್ಕಳಾದ ಎಂ.ಡಿ. ಲಕ್ಷ್ಮಿನಾರಾಯಣ ಮತ್ತು ಎಂ.ಡಿ. ಮೂರ್ತಿ ಎಂಬಿಬ್ಬರು ಫೈನಾನ್ಸಿಯರ್‌ಗಳನ್ನು ಜೊತೆ ಮಾಡಿಕೊಂಡ. ಬೆಂಗಳೂರಿನ ಲ್ಯಾಂಡ್ ದಂಧೆಗೆ ಲೇಟೆಸ್ಟ್ ಎಂಟ್ರಿಗಳಂತಿದ್ದ ಅವರಿಬ್ಬರ ಜೊತೆ ತನ್ನ ಧರ್ಮಪತ್ನಿ ಕೆ. ಸೌಭಾಗ್ಯರನ್ನೂ ಸೇರಿಸಿಕೊಂಡು 2005ರ ಮಾರ್ಚ್ ಇಪ್ಪತ್ಮೂರರಂದು ಇಡೀ ಎಂಎಂಸಿಯ ಏಳೆಕರೆಯನ್ನು ಖರೀದಿಸಿದ.

ಬಸವನಗುಡಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಾವಣಿಯಾದ ವಿವಿಧ ಸೇಲ್ ಡೀಡುಗಳ ಪ್ರಕಾರ ಕಟ್ಟಾ ಶ್ರೀನಿವಾಸಲು ನಾಯ್ಡು ಎಂಬಾತನ ಮಗ ಕಟ್ಟಾ ಸುಬ್ರಮಣ್ಯನಾಯ್ಡು ಮೂರು ಕೋಟಿ ನಲವತ್ತೈದು ಲಕ್ಷ, ಅವರ ಧರ್ಮಪತ್ನಿ ಕೆ. ಸೌಭಾಗ್ಯ ಮೂರು ಕೋಟಿ ಎಪ್ಪತ್ತೈದು ಲಕ್ಷ, ಎಂ.ಡಿ. ಲಕ್ಷ್ಮೀನಾರಾಯಣ ನಾಲ್ಕು ಕೋಟಿ ಮೂವತ್ಮೂರು ಲಕ್ಷ ಮತ್ತು ಎಂ.ಡಿ. ಮೂರ್ತಿ ಮೂರೂವರೆ ಕೋಟಿ ರೂಪಾಯಿಗಳಂತೆ ಹಣ ಪಾವತಿಸಿ, ಒಟ್ಟೂ ಏಳೆಕರೆ ಇಪ್ಪತ್ತೊಂದು ಗುಂಟೆ ಜಮೀನನ್ನು ಖರೀದಿಸಿದ್ದಾರೆ.

ಒಂದಾನೊಂದು ಕಾಲಕ್ಕೆ ಮನೆ ಬ್ರೋಕರಿಕೆ ಮಾಡಿಕೊಂಡು ತುಂಡು ಬೀಡಿಗೂ ತತ್ವಾಡುತ್ತಿದ್ದ ಕಟ್ಟಾಸುಬ್ರಮಣ್ಯ ನಾಯ್ಡು ತನ್ನ ಪತ್ನಿಯನ್ನೂ ಸೇರಿಸಿದಂತೆ ಇದಕ್ಕೆಂದು ಸುರಿದ ಒಟ್ಟೂ ಏಳುಕೋಟಿ ಇಪ್ಪತ್ತು ಲಕ್ಷದಷ್ಟು ಬಂಡವಾಳವನ್ನು ಎಲ್ಲಿಂದ ಹೊಂಚಿದ? ಅದಕ್ಕೆಂದು ಆದಾಯ ತೆರಿಗೆ ಪಾವತಿಸಿದ್ದಾನಾ? ಬ್ಲಾಕ್‌ಮನಿಯೇ?

ಹೀಗೆ ಸರಿಸುಮಾರು ಹದಿನೈದು ಕೋಟಿ ಸುರಿದು ಎಂಎಂಸಿಯ ಜಮೀನು ಖರೀದಿಸಿದ ಕಟ್ಟಾನಾಯ್ಡು ಬಿಡಿಎಗೆ ಪಂಗನಾಮ ಹಾಕಲು ಮಾಸ್ಟರ್ ಪ್ಲಾನ್ ಹಾಕಿದ. ಮೊದಲು ಎಂಎಂಸಿ ಹೆಸರಿಗಿದ್ದ ಖಾತೆಯನ್ನು ವಿಭಜಿಸಿ ತನ್ನ ನಾಲ್ವರೂ ಪಾಲುದಾರರ ಹೆಸರಿಗೆ ಮಾಡಿಸಿದ.

ಹೈಕೋರ್ಟ್ ಆದೇಶದ ಪ್ರಕಾರ ಖಾತೆ ಎಂಎಂಸಿ ಹೆಸರಿಗೇ ಇರಬೇಕು ಮತ್ತು ಅಲ್ಲಿ ಎಸ್.ಎಂ. ಪ್ರಾಪರ್ಟೀಸ್ ಕಂಪನಿಯೇ ಅಪಾರ್ಟ್‌ಮೆಂಟ್ ನಿರ್ಮಿಸತಕ್ಕದ್ದು, ಇಂಥ ಷರತ್ತು ಹಾಕಿಯೇ ಸರ್ಕಾರ ಭೂ ಪರಿವರ್ತನೆಗೆ ಒಪ್ಪಿತ್ತು, ಇಲ್ಲಿ ಹೈಕೋರ್ಟ್ ಆದೇಶ ಮತ್ತು ಸರ್ಕಾರದ ಆದೇಶ ಎರಡೂ ಉಲ್ಲಂಘನೆಯಾಗಿತ್ತು.

ಇದೆಲ್ಲಕ್ಕೂ, ಮೊದಲೇ ಬಿಡಿಎ ಪಾಲಿಕೆಗೆ ಸುತ್ತೋಲೆ ಕಳಿಸಿ ಸದರಿ ಆಸ್ತಿಯ ವಿಷಯದಲ್ಲಿ ಏನೇ ನಿರ್ಧಾರಕ್ಕೂ ತನ್ನ ಒಪ್ಪಿಗೆ ಪಡೆಯಬೇಕೆಂದು ಸೂಚಿಸಿತ್ತು. ಹಾಗಿದ್ದೂ ಬಿಡಿಎಯನ್ನು ಧಿಕ್ಕರಿಸಿದ ಪಾಲಿಕೆ ಕಮಿಷನರ್ ಜ್ಯೋತಿ ರಾಮಲಿಂಗಂ ಖಾತಾ ವರ್ಗಾಯಿಸಿಬಿಟ್ಟರು. ಅದು ಕಟ್ಟಾ ಕೊಟ್ಟ ಕಾಟದ ಪ್ರತಿಫಲವಾಗಿತ್ತು, ಇಲ್ಲಿ ಬಿಡಿಎಗೆ ವಿರುದ್ಧವಾಗಿ ಪಾಲಿಕೆಯನ್ನೇ ಮರುಳುಗೊಳಿಸಿಕೊಳ್ಳಲು ಕಟ್ಟಾ ಷಡ್ಯಂತ್ರ ಹೆಣೆದಿದ್ದ.

ಅದರಂತೆ 27.4.2005 ಮತ್ತು 19.5.2005ರಂದು ಬಿಡಿಎಗೆ ತಾನು ಖಾಸಗಿ ಲೇಔಟ್ ಮಾಡುತ್ತಿಲ್ಲವಾದ್ದರಿಂದ ತನ್ನ ಬಡಾವಣೆ ನಿರ್ಮಾಣದ ಅರ್ಜಿಯನ್ನೇ ಹಿಂದಕ್ಕೆ ಪಡೆಯುತ್ತಿದ್ದೇನೆಂದು ಇನ್ನೆರಡು ಅರ್ಜಿ ಸಲ್ಲಿಸಿದ. ಭೂಗಳ್ಳತನದ ವಾಸನೆ ಹಿಡಿದ ಬಿಡಿಎ ಕಮಿಷನರ್ ವಿದ್ಯಾಶಂಕರ್ ಪಾಲಿಕೆಗೆ ಮತ್ತೊಂದು ಪತ್ರ ಬರೆದು ಈ ವಿಷಯದಲ್ಲಿ ಯಾವುದೇ ನಿರ್ಧಾರಕ್ಕೂ ಬಿಡಿಎ ಅನುಮತಿ ಪಡೆಯಬೇಕೆಂದು ಮತ್ತೊಮ್ಮೆ ಎಚ್ಚರಿಸಿದ್ದಾರೆ. ಹಾಗಿದ್ದೂ ಕಟ್ಟಾ ಹೊಸ ಲೇಔಟ್ ನಿರ್ಮಿಸಲು ಕೋರಿದ ಅರ್ಜಿಯನ್ನು ಪಾಲಿಕೆ ಬಿಡಿಎ ಗಮನಕ್ಕೆ ತರಲೇ ಇಲ್ಲ.

ವಿಪರ್ಯಾಸವೆಂದರೆ ಅರ್ಜಿದಾರರು ಈಗಾಗಲೇ ಬಿಡಿಎಗೆ ಅರ್ಜಿ ಸಲ್ಲಿಸಿದ್ದು ಸದರಿ ಲೇಔಟ್ ನಿರ್ಮಾಣದ ಅರ್ಜಿಯನ್ನು ಮತ್ತೆ ಬಿಡಿಎಗೆ ಕಳಿಸುವಂತೆ ಪಾಲಿಕೆಯ ಕಾನೂನು ಕೋಶ ಮುಖ್ಯಸ್ಥ ಜಾಗೀರ್‌ದಾರ್ 2005ರ ಆಗಸ್ಟ್ ಹದಿನೇಳರಂದು ವರದಿ ಕೊಟ್ಟಿದ್ದರು. ಅದನ್ನು ಆಧರಿಸಿಯೇ ಕಟ್ಟಾ ಅರ್ಜಿಯನ್ನು ತಿರಸ್ಕರಿಸಿ ಮತ್ತೆ ಬಿಡಿಎಗೇ ಹೋಗುವಂತೆ ಹಿಂಬರಹ ನೀಡಬೇಕೆಂದು ಪಾಲಿಕೆಯ ದಕ್ಷಿಣ ವಲಯದ ಉಪ ಆಯುಕ್ತ ಡಾ. ಚಂದ್ರಶೇಖರ್ ಕೂಡಾ ಆದೇಶ ಹೊರಡಿಸಿದ್ದರು.

ಇಷ್ಟಾಗ್ಯೂ ಪಾಲಿಕೆ ಕಮಿಷನರ್ ಜ್ಯೋತಿರಾಮಲಿಂಗಂ ಇದ್ಯಾವುದನ್ನೂ ಲೆಕ್ಕಿಸದೇ ಕಟ್ಟಾ ಭೂಕಬಳಿಕೆಗೆ ಕುಮ್ಮಕ್ಕು ಕೊಟ್ಟರು. ಒಟ್ಟೂ ಏಳೆಕರೆಯನ್ನು ಬೇರೆ ಬೇರೆ ತುಂಡುಗಳಾಗಿ ವಿಂಗಡಿಸಿ ಅದರಲ್ಲಿ 7216 ಚದರಡಿಯ ಭಾರೀ ನಿವೇಶನವೊಂದನ್ನು ಕಟ್ಟಾ ಕುಲಪುತ್ರ ಕೆ.ಎಸ್. ಜಗದೀಶ್‌ಗೆ ಅವರ ತಾಯಿ ಕೆ. ಸೌಭಾಗ್ಯರಿಂದ ದಾನ ಪತ್ರದ ಮೂಲಕ ಹಸ್ತಾಂತರಿಸಿದಂತೆ ದಾಖಲೆ ಸೃಷ್ಟಿಸಲಾಯಿತು. ಮತ್ತೊಂದು ಸೈಟನ್ನು RSS ಕಾರ್ಯಕರ್ತ ವಾಸುದೇವಾಚಾರ್ ಮಗ ವಿ.ರಮೇಶ್‌ಗೆ ದಾನ ಕೊಟ್ಟಂತೆ ತೋರಿಸಲಾಯಿತು. ಹೀಗೆ ಕಟ್ಟಾ ಕೈಯಿಂದ ಎಂಎಂಸಿ ಆಸ್ತಿಯಲ್ಲಿ ವಿವಿಧ ಸೈಟುಗಳನ್ನು ದಾನ ಪಡೆದವರೆಂದರೆ ಜೋಗುಪಾಳ್ಯದ ಬಿಜೆಪಿ ಕೌನ್ಸಿಲರ್ ಮಂಗಳ, ಡಾ.ಪಿ.ಸುಜಾತ, RSS ಕಾರ್ಯಕರ್ತ ಇ. ಶ್ರೀರಂಗ, ಎಂ.ಎಲ್. ಯೋಗೇಶ್ ಮತ್ತು ಡಾ. ಬಿ.ಎಚ್. ಚಂದ್ರಶೇಖರ್!

ಇವರೆಲ್ಲರೂ ಕಟ್ಟಾ ಬೇನಾಮಿಗಳೇ. ಹೀಗೆ ದಾನಪತ್ರದ ಮೂಲಕ ಸೈಟು ವಿತರಿಸಿ, ಲಕ್ಷಾಂತರ ರೂಪಾಯಿಗಳ ಸ್ಟಾಂಪ್ ಡ್ಯೂಟಿ ವಂಚಿಸಿದ್ದ ಕಟ್ಟಾ. ಅಲ್ಲಿಗೆ ಏಳೆಕರೆ ಇಪ್ಪತ್ತೊಂದು ಗುಂಟೆ ಎಂಎಂಸಿ ಜಮೀನಿನ ಅರ್ಧಕ್ಕರ್ಧ ಮುಂಡಾಮೋಚಿದಂತಾಯ್ತು. ಬಿಡಿಎಗೇ ಪಂಗನಾಮ ಹಾಕಿ ಪಾಲಿಕೆಯನ್ನೂ ಕಟ್ಟಾ ವಂಚಿಸಿದ್ದ. ಪಾಲಿಕೆಗೆ ಸಂದಾಯವಾಗಬೇಕಿದ್ದ ಸರಿಸುಮಾರು ಐವತ್ತು ಲಕ್ಷದಷ್ಟು ಅಭಿವೃದ್ಧಿ ಶುಲ್ಕಕ್ಕೇ ವಂಚನೆಯಾಗಿತ್ತು. ಪಾರ್ಕು, ರೋಡು, ಆಟದ ಮೈದಾನಕ್ಕೆಂದು ಖಾಲಿ ಬಿಡಬೇಕಿದ್ದ ಅಷ್ಟೂ ಭೂಮಿಯನ್ನು ಕಟ್ಟಾ ನುಂಗಿಹಾಕಿದ್ದ.

ಈಗ ಬ್ಯಾಟರಾಯನಪುರದ ಎಂಎಂಸಿ ಕಾಂಪೌಂಡಿನಲ್ಲಿ ಇನ್ನೂರು ಸೈಟುಗಳ ಭರ್ಜರಿ ಕಟ್ಟಾ ಲೇಔಟ್ ತಲೆಎತ್ತಿದೆ. ಸೈಟುಗಳಿಗೆ ನಂಬರುಗಳನ್ನೂ ಕೊಟ್ಟಿದ್ದಾರೆ. ಚದರ ಅಡಿಗೆ ಮಾರುಕಟ್ಟೆ ಬೆಲೆಯೇ ಮೂರು ಸಾವಿರ ರೂಪಾಯಿ. ಮಾಮೂಲಿ 30X40 ಸೈಟೇ ಮೂವತ್ತಾರು ಲಕ್ಷ ಬೆಲೆ ಬಾಳುತ್ತದೆ. ಅಂಥ ಇನ್ನೂರು ಸೈಟುಗಳಿಗೆ ಎಪ್ಪತ್ತೆರಡು ಕೋಟಿ ರೂಪಾಯಿಗಳಾಯಿತು. ಹದಿನೈದು ಕೋಟಿ ಸುರಿದು ಎಪ್ಪತ್ತೆರಡು ಕೋಟಿ ಬಾಚಿದ್ದಾನೆ ಮಂತ್ರಿ ಕಟ್ಟಾ ಸುಬ್ರಮಣ್ಯನಾಯ್ಡು.

ಇದರ ಜೊತೆಗೇ ವೃಷಭಾವತಿ ಮೋರಿಯ ಕನಿಷ್ಠ ಐದು ಎಕರೆಗೆ ಕಟ್ಟಾ ಕಾಂಪೌಂಡ್ ಹಾಕದೇ ಬಿಡುವವನಲ್ಲ, ಬಿಡಿಎ ಮತ್ತು ಪಾಲಿಕೆಗಳೆರಡನ್ನೂ ಒಟ್ಟೊಟ್ಟಿಗೆ ವಂಚಿಸಿದ, ಸರ್ಕಾರಿ ಭೂಮಿಯನ್ನೇ ಕಬಳಿಸಿದ ಮಂತ್ರಿ ಕಟ್ಟಾ ವಿರುದ್ಧ ಮುಖ್ಯಮಂತ್ರಿ ಕುಮಾರಸ್ವಾಮಿ ಯಾವ ಲೆವಲ್ಲಿಗೆ ತನಿಖೆ ನಡೆಸುತ್ತಾರೆ? ಈ ಬಗ್ಗೆ ವಿರೋಧಿ ಕಾಂಗ್ರೆಸ್ ಕಾಟಚಾರಕ್ಕಾದರೂ ಪ್ರತಿಭಟಿಸುತ್ತಾ? ಇದು ಪ್ರತಿಯೊಬ್ಬ ಪ್ರಜ್ಞಾವಂತನನ್ನೂ ಕಾಡುತ್ತಿರುವ ಪ್ರಶ್ನೆ.


ಕಿಲ್ಲರ್ ಕವಳ ಜೈಲುಪಾಲು



ಕಮಿಷನರ್ ಅಜಯ್‌ಕುಮಾರ್ ಸಿಂಗ್ ಕಳೆದ ಎರಡು ತಿಂಗಳಲ್ಲಿ ಗೂಂಡಾ ಕಾಯ್ದೆಯ ಮೇಲೆ ಜೈಲಿಗಟ್ಟಿದ ಕ್ರಿಮಿಗಳ ಪೈಕಿ ಈತ ಮೂರನೇಯವನು. ಕಾಟನ್‌ಪೇಟೆಯ ರಕ್ಕಸ ಚೌಧುರಿ, ಶಿವಾಜಿನಗರದ ಡಾನ್ ಇಮ್ತಿಯಾಜ್ ಪೈಲ್ವಾನ್ ನಂತರ ಗೂಂಡಾ ಆಕ್ಟಿನಲ್ಲಿ ಬಳ್ಳಾರಿ ಜೈಲುಪಾಲಾದ ಈ ಮೂರನೇ ಯವನೇ ಕವಳ!

ವಿಜಿ ಆಲಿಯಾಸ್ ವಿಜಯ್‌ಕುಮಾರ್ ಉರ್ಫ್ ಕವಳ ಆತನ ಪೂರ್ತಿ ಹೆಸರು. ಬೆಂಗಳೂರಿನ ಪಾತಕ ಲೋಕಕ್ಕೆ ಆತ ತುಂಬಾ ಹಳಬ. ಡೆಡ್ಲಿ ಸೋಮನ ಕಿರಾತಕ ಪಡೆಯಲ್ಲಿ ಪಳಗಿದ ಕೀಚಕ. ಕವಳನನ್ನು ಮಡಿವಾಳದ ಇನ್ಸ್‌ಪೆಕ್ಟರ್ ಎಚ್.ಎಂ. ಕೃಷ್ಣಪ್ಪ ಎಳೆದೊಯ್ದು ಬಳ್ಳಾರಿ ಜೈಲಿಗೆ ಹಾಕಿದ್ದಾರೆ ಎಂಬ ಸುದ್ದಿ ಕೇಳಿದ್ದೇ ಇಡೀ ಮಡಿವಾಳ ಏರಿಯಾ ನಿಟ್ಟುಸಿರಿಟ್ಟಿತ್ತು.

1987 ರಿಂದಲೂ ಕೊಲೆ, ಸುಲಿಗೆ, ವಂಚನೆ ಮಾಡಿ ಪೊಲೀಸರ ಕೈಗೆ ಸಿಕ್ಕರೂ ಜೈಲು ಸೇರಿ ಜಾಮೀನು ಪಡೆದು ಹೊರಬರುತ್ತಿದ್ದ ಮಡಿವಾಳದ ಪುರಾತನ ಪಾತಕಿ ಕವಳ ಈ ಬಾರಿ ವರ್ಷಗಟ್ಟಲೇ ಹೊರಬರದ ಸ್ಥಿತಿಯಲ್ಲಿ ಜೈಲು ಸೇರಿದ್ದಾನೆ. ಕಾಂಗ್ರೆಸ್ ಸರ್ಕಾರ ಇದ್ದಷ್ಟೂ ದಿನ ಆತನನ್ನು ಪೊಲೀಸರು ಮುಟ್ಟಲಿಲ್ಲ. ಸಾಕ್ಷಾತ್ ಮಾಜಿ ಮಂತ್ರಿ ರಾಮಲಿಂಗಾರೆಡ್ಡಿಯೇ ನಿಂತು ಕವಳನನ್ನು ಸಲಹುತ್ತಾ ಬಂದರು. ತಾವರೆಕೆರೆಯ ಕೌನ್ಸಿಲರ್ ಮುನಿರಾಜುವಂತೂ ಕವಳನನ್ನು ತನ್ನ ಮನೆಯಲ್ಲೇ ಬಚ್ಚಿಟ್ಟು ಪೊರೆಯುತ್ತಿದ್ದ. ಆದರೆ ಕವಳನ ಪಾಪದ ಕೊಡ ತುಂಬುವು ದಕ್ಕೂ ಕಾಂಗ್ರೆಸ್ ಸರ್ಕಾರ ಕುಸಿಯುವುದಕ್ಕೂ ಒಂದೇ ಆಗಿತ್ತು. ಅದಕ್ಕೆ ಕಾರಣವಾದದ್ದು ಮೇ ಇಪ್ಪತ್ತೇಳರ ಘಟನೆ. ಮಡಿವಾಳದ ಆಂಜನೇಯ ದೇವಸ್ಥಾನದ ಬಳಿ ವರ್ಕ್‌ಶಾಪ್ ಇಟ್ಟುಕೊಂಡಿದ್ದ ವೆಂಕಟೇಶ್ ಎಂಬಾತನಿಂದ ಕವಳ ಐವತ್ತು ಸಾವಿರ ರೂಪಾಯಿ ರೋಲ್‌ಕಾಲ್ ಕೇಳಿದ್ದ.


ಎಚ್.ಎಂ. ಕೃಷ್ಣಪ್ಪ

ವೆಂಕಟೇಶ್ ಅದನ್ನು ಮಡಿವಾಳದ ಇನ್ಸ್‌ಪೆಕ್ಟರ್ ಕೃಷ್ಣಪ್ಪನವರ ಕಿವಿಗೆ ಹಾಕಿದ್ದ. ಕವಳನ ಕ್ರೌರ್ಯ ಎಂಥಾದ್ದೆಂದರೆ ತನ್ನ ವಿರುದ್ಧ ಪೊಲೀಸರಿಗೆ ಮಾಹಿತಿ ಕೊಟ್ಟ ಎಂಬ ಒಂದೇ ಕಾರಣಕ್ಕೆ ವೆಂಕಟೇಶನ ವರ್ಕ್ ಶಾಪ್‌ಗೆ ನುಗ್ಗಿದ್ದೇ ಆತನ ತಲೆಗೆ ಲಾಂಗ್ ಬೀಸಿಬಿಟ್ಟ.

ನಿಷ್ಪಾಪಿ ವೆಂಕಟೇಶ್ ಬದುಕುಳಿ ದನಾದರೂ ಕವಳ ಮಾತ್ರ ಬಚಾವಾಗು ವಂತಿರಲಿಲ್ಲ. ಹೊಸೂರು ರಸ್ತೆಯ ತಮಿಳುನಾಡಿನ ಗಡಿಯುದ್ದಕ್ಕೂ ನಾಕಾ ಬಂದಿ ಹಾಕಿದ ಇನ್ಸ್‌ಪೆಕ್ಟರ್ ಕೃಷ್ಣಪ್ಪ ಇನ್ನೇನು ಕರ್ನಾಟಕ ಬಿಟ್ಟು ಪರಾರಿಯಾಗಲಿದ್ದ ಕವಳನನ್ನು ಸೆರೆಹಿಡಿದಿದ್ದಾರೆ. ಪಾತಕಿ ಕವಳನ ಹೈಸಿಯತ್ತೇ ಇಂಥಾದ್ದು. ಬಹುಶಃ ಜಯನಗರದ ಶಾಸಕ ರಾಮಲಿಂಗಾರೆಡ್ಡಿ ಮತ್ತು ತಾವರೆಕೆರೆಯ ಕೌನ್ಸಿಲರ್ ಮುನಿರಾಜು ಆತನ ಬೆನ್ನಿಗಿರದೇ ಇರುತ್ತಿದ್ದರೆ ಅದ್ಯಾವತ್ತೋ ಪೊಲೀಸ್ ಎನ್‌ಕೌಂಟರ್‌ಗೆ ಸಿಲುಕಿ ಕವಳನ ಹೆಣ ಬೀಳಬೇಕಿತ್ತು.

ಈತ ಮಡಿವಾಳದ ಸಭಾಪತಿ ಮೊದಲಿಯಾರ್ ಚೌಲ್ಟ್ರಿ ಪಕ್ಕದ ತಮಿಳು ಸ್ಲಮ್ಮಿನ ಪ್ರಾಡಕ್ಟು. ತಮಿಳುನಾಡಿನ ಕೃಷ್ಣಗಿರಿ ಪಕ್ಕದ ಹಳ್ಳಿಯೊಂದರಿಂದ ವಲಸೆ ಬಂದು ಮಡಿವಾಳ ಸ್ಲಮ್ಮಿಗೆ ಜಮೆಯಾದ ಈತನ ತಂದೆ ಶಂಕರ್ ಗಾರೆ ಕೂಲಿಯಾಗಿದ್ದ. ಕುಡಿತಕ್ಕೆ ಬಿದ್ದೇ ಅಪ್ಪ ಬೀದಿಗೆ ಬಿದ್ದರೆ ಮಗ ವಿಜಿ ಕಾರ್ಪೋರೇಷನ್ ಶಾಲೆಗೆ ಚಕ್ಕರ್ ಹಾಕಿದ್ದೇ 'ಮಜೂರ್' ಕಸುಬಿಗಿಳಿದ. ಮಜೂರ್ ಎಂದರೆ ಪಾತಕ ಲೋಕದಲ್ಲಿ ಪಿಕ್‌ಪಾಕೆಟ್ ಎಂದರ್ಥ.

ಮೊದಮೊದಲು ಸಿಟಿ ಬಸ್‌ಗಳಲ್ಲಿ ಜೇಬು ಕತ್ತರಿಸುತ್ತಿದ್ದ ವಿಜಿ ರಾತ್ರಿಯಾಗುತ್ತಿದ್ದಂತೆ ಸ್ಲಮ್ಮಿನ ಸಾರಾಯಿ ಅಂಗಡಿಯಲ್ಲಿ ತಟ್ಟಾಡುತ್ತಿದ್ದ. ಕ್ರಮೇಣ ಕಳ್ಳಬಟ್ಟಿ ಕಾಯಿಸಿ ಅದೇ ಸ್ಲಮ್ಮಿನಲ್ಲಿ ಮಾರುತ್ತಿದ್ದ. ಬಕಾಸುರನಂತೆ ಗಬಗಬನೇ ತಿನ್ನುತ್ತಿದ್ದ ಆತನನ್ನು ಕಂಡಿದ್ದೇ ಗೆಳೆಯರು 'ಕವಳ' ಅಂತ ಗೇಲಿ ಮಾಡುತ್ತಿದ್ದರು. ಬರುಬರುತ್ತ ಅಕ್ಕಪಕ್ಕದ ಸ್ಲಮ್ಮುಗಳಿಗೂ ಕಳ್ಳಭಟ್ಟಿ ಸರಬರಾಜು ಮಾಡತೊಡಗಿದ. ಹಾಗೇ ರಾಬರಿ, ಮಜೂರಿ, ಕಳ್ಳಭಟ್ಟಿ ಮಾಡಿಕೊಂಡಿದ್ದ ಕವಳನನ್ನು 'ರೌಡಿಜಮ್ಮಿಗೆ' ಎಳೆತಂದವನು ಡೆಡ್ಲಿ ಸೋಮ.

1987 ರಲ್ಲಿ ತನ್ನದೇ ಸ್ಲಮ್ಮಿನ ಹುಡುಗನೊಬ್ಬನ ಮುಖಕ್ಕೆ ರೇಜರ್ ಹಾಕಿ ಜೈಲು ಸೇರಿದ ಕವಳ, ಸರ್ಕಾರಿ ಸಾರಾಯಿ ಗುತ್ತಿಗೆದಾರನೊಬ್ಬನನ್ನು ನಡುರಸ್ತೆಯಲ್ಲೇ ಹಿಡಿದು ಬಡಿದ. ಆನಂತರ ಜಯನಗರದ ಇಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬನನ್ನು ಕಿಡ್ನಾಪ್ ಮಾಡಿ ಎರಡು ಲಕ್ಷ ಕಿತ್ತುಕೊಂಡ. ಅದು ಪಕ್ಕಾ ಡೆಡ್ಲಿ ಸೋಮನ ಸ್ಟೈಲಾಗಿತ್ತು. ಸೋಮನ ಹಾವಳಿ ವಿಪರೀತವಾಗುತ್ತಿದ್ದಂತೆ ಪೊಲೀಸರು ಕವಳನ ಬೆನ್ನಿಗೆ ಬಿದ್ದರು. ಇನ್ಸ್‌ಪೆಕ್ಟರ್ ಅಶೋಕ್‌ಕುಮಾರ್ ಕವಳನನ್ನು ಆತನ ವಿಲ್ಸನ್ ಗಾರ್ಡನ್ನಿನ ಅಡ್ಡೆಯಿಂದ ಹೊತ್ತೊಯ್ದು ಬಾಳಕಟ್ಟಿದ್ದೇ ತಡ, ಇಂಥಲ್ಲೇ ಇಂತಿಷ್ಟೇ ಹೊತ್ತಿಗೆ ಸೋಮ ಬರುತ್ತಾನೆಂದು ಬಾಯಿಬಿಟ್ಟ ಅಷ್ಟೇ. ಇನ್ಸ್‌ಪೆಕ್ಟರ್‌ಗಳಾದ ಅಬ್ದುಲ್ ಅಜೀಮ್ ಮತ್ತು ಅಶೋಕ್‌ಕುಮಾರ್ ಕೈಗೆ ಸಿಕ್ಕಿದ ಸೋಮ-ಬಸವ ಇಬ್ಬರೂ ಅಲಸೂರು ಸ್ಮಶಾನದಲ್ಲಿ ಹೆಣವಾಗಿದ್ದರು!

ಕವಳ ಗುರು ಸೋಮನ ಪ್ರಾಣಕ್ಕೆ ಮುಳುಗುನೀರು ತಂದಿದ್ದ. ಸೋಮನ ಕಥೆ ಮುಗಿಯುತ್ತಿದ್ದಂತೆ ಜತೆ ಎಂ.ಪಿ. ಜೈರಾಜ್ ಅಣ್ಣನ ಮಗ ಗಿರಿಯ ಜೊತೆ ಬಿದ್ದ ಕವಳ ಇನ್ನೆಲ್ಲಿ ಸೋಮನ ಶಿಷ್ಯರು ತನ್ನನ್ನು ಮುಗಿಸುತ್ತಾರೋ ಎಂದು ಕತೆಯೊಂದನ್ನು ಕಟ್ಟಿದ. ಗಿರಿ ಕಣ್ಣಿಟ್ಟಿದ್ದ ಹುಡುಗಿಯೊಬ್ಬಳನ್ನು ವಿಲ್ಸನ್ ಗಾರ್ಡನ್ನಿನ ಮಧು ಎಂಬಾತ ಲವ್ ಮಾಡುತ್ತಿದ್ದ. ಮಧು ಜೊತೆಗೆ ಒಂದೇ ರೂಮಿನಲ್ಲಿದ್ದ ಮತ್ತೊಬ್ಬನ ಹೆಸರು ವೆಂಕಟೇಶ್. ಅವರಿಬ್ಬರೂ ಕವಳನನ್ನು ವರ್ಷಗಟ್ಟಲೇ ತಮ್ಮ ರೂಮಿನಲ್ಲಿಟ್ಟು ಸಾಕಿದ್ದರು. ತಾನು ಕಣ್ಣಿಟ್ಟಿದ್ದ ಹುಡುಗಿಯನ್ನು ಪ್ರೀತಿಸುತ್ತಿದ್ದ ಮಧುವಿಗೆ ಬುದ್ಧಿ ಕಲಿಸು ಎಂದು ಗಿರಿ ಸುಪಾರಿ ಕೊಟ್ಟಿದ್ದೇ ಕವಳ ಮಧುವನ್ನು ಬಾರ್ ಒಂದಕ್ಕೆ ಕರೆಸಿ ಕಂಠಮಟ್ಟ ಕುಡಿಸಿದ. ಮಧು ಚಿತ್ತಾಗಿದ್ದೇ ಚುಚ್ಚಿ ಸಾಯಿಸಿ ಬಿಟ್ಟ. ಆತನ ಜೊತೆಗಿದ್ದ ವೆಂಕಟೇಶನನ್ನು ಮೋರಿಗೆ ನೂಕಿ ಕಲ್ಲೆತ್ತಿಹಾಕಿ ಕೊಂದುಬಿಟ್ಟ.

ತನ್ನನ್ನು ವರ್ಷಗಟ್ಟಲೇ ಆಶ್ರಯವಿತ್ತು ಸಾಕಿದ್ದ ಗೆಳೆಯರಿಬ್ಬರನ್ನೂ ಕವಳ ವಿನಾಕಾರಣ ಕೊಂದು ಹಾಕಿದ್ದ. ಜೋಡಿ ಕೊಲೆ ಕೇಸು ಸರಿಸುಮಾರು ಮೂರು ವರ್ಷಗಳ ಕಾಲ ನಡೆಯಿತು. ಬಹುಶಃ ಇದರಲ್ಲೇ ಆತನಿಗೆ ಜೀವಾವಧಿ ಶಿಕ್ಷೆಯಾಗಬೇಕಿತ್ತು, ಆದರೆ ಪಾತಕಿ ದೀದಿ ರವಿ ಕವಳನ ನೆರವಿಗೆ ಬಂದ. ನಕಲಿ ದೀದಿ ವಂಚಿಸಿ ಕೂಡಿಟ್ಟ ದುಡ್ಡಲ್ಲೇ ಕವಳನಿಗೆ ಜಾಮೀನು ಕೊಡಿಸಿದ. ಜೋಡಿ ಕೊಲೆ ಕೇಸು ಬಿದ್ದು ಹೋಯಿತು. ಸರಿಸುಮಾರು ಮೂರು ವರ್ಷ ಜೈಲು ಶಿಕ್ಷೆ ಅನುಭವಿಸಿಯೂ ಕವಳ ಸುಧಾರಿಸಲಿಲ್ಲ.

ಜೈಲಿಂದ ಹೊರಬಿದ್ದವನು ಮತ್ತೊಬ್ಬ ಪಾತಕಿ ಪ್ರವೀಣನ ಜೊತೆ ಬಿದ್ದ ಮಡಿವಾಳದ ಗೌಡರ ಯುವತಿಯೊಬ್ಬಳನ್ನು ಕಿಡ್ನಾಪ್ ಮಾಡಿ ಮದುವೆಯಾದ. ಆಕೆ ಜೈಲಿಗೆ ಬುತ್ತಿ ತರುತ್ತಿದ್ದಾಗ ದೀದಿ ರವಿ ಗ್ಯಾಂಗಿನ ಮತ್ತೊಬ್ಬ ಪಾತಕಿ ಅರುಣನ ಬಳಿ ಮಾತಾಡಿದಳು ಎಂಬ ಒಂದೇ ಕಾರಣಕ್ಕೆ ಆತನ ಹೊಟ್ಟೆ ಬಗೆದು ಹಾಕಿದ. ಹೊಸೂರು ರಸ್ತೆಯಲ್ಲಿ ರಿಯಲ್ ಎಸ್ಟೇಟ್ ದಂಧೆ ಮಾಡಿಕೊಂಡಿದ್ದ ಅನೀಲ್ ಎಂಬಾತನ ಡ್ರೈವರ್ ಸೆಲ್ವರಾಜ್‌ನನ್ನು ಆತನ ಸ್ಲಮ್ಮಿಗೇ ನುಗ್ಗಿ ಕೊಚ್ಚಿ ಹಾಕಿದ. ಕವಳ ಬೀಸಿದ ಲಾಂಗಿಗೆ ಡ್ರೈವರ್ ಸೆಲ್ವರಾಜನ ರುಂಡವೇ ಬೇರ್ಪಡೆಯಾಗಿತ್ತು!

ಆಗಲೇ ಮಡಿವಾಳದ ಇನ್ಸ್‌ಪೆಕ್ಟರ್ ಕೃಷ್ಣಪ್ಪ ಬಂದೂಕು ಕೈಗೆತ್ತಿಕೊಂಡು ಕವಳನ ಬೆನ್ನಿಗೆ ಬಿದ್ದರು. ಇದು ಗೊತ್ತಾಗಿದ್ದೇ ಬೆಂಗಳೂರಿಗೆ ನೋ ಎಂಟ್ರಿಯಾದ ಕವಳ ತಮಿಳುನಾಡು ಸೇರಿಕೊಂಡನಾದರೂ ಕದ್ದುಮುಚ್ಚಿ ಬೆಂಗಳೂರಿಗೆ ಬಂದು ಹೋಗುತ್ತಿದ್ದ. ಬಂದಾಗಲೆಲ್ಲ ಒಂದಲ್ಲಾ ಒಂದು ಅನಾಹುತ ಮಾಡುತ್ತಿದ್ದ. ಯಾವತ್ತು ಪಳನಿ ಹತ್ಯೆಯಾಯಿತೋ once again ಕವಳನ ಹೆಸರೇ ಕೇಳಿಬಂತು. ಈ ಹೊತ್ತಿಗಾಗಲೇ ದೀದಿ ರವಿಯ ಬಲಗೈ ಬಂಟನಂತಾಗಿದ್ದ ಕವಳ ಯಾವ ಮಟ್ಟಕ್ಕೆ ಬೆಳೆದಿದ್ದನೆಂದರೆ ಎಚ್‌ಎಸ್‌ಆರ್ ಲೇಔಟನಲ್ಲಿ ಎರಡೂವರೆ ಕೋಟಿಯ ನಿವೇಶನ ಕಟ್ಟಿಸಿ ಇಪ್ಪತ್ತೈದು ಮನೆಗಳ ಲೇಔಟ್ ನಿರ್ಮಾಣಕ್ಕೆ ಕೈ ಹಾಕಿದ್ದ. ಈತನ ತಮ್ಮ ಮಣಿಯೂ ಒಂದು ಝೆನ್ ಮತ್ತೊಂದು ಟಾಟಾ ಸುಮೋ, ಇನ್ನೊಂದು ಮಾರುತಿ ಸಾಲದ್ದಕ್ಕೆ, ಮೂರು ಗೂಡ್ಸ್ ಗಾಡಿಗಳನ್ನು ಖರೀದಿಸಿ ಬಾಡಿಗೆಗೆ ಬಿಟ್ಟಿದ್ದ. ಮಡಿವಾಳದಲ್ಲೇ ಕವಳನ ಮತ್ತೊಂದು ಬಂಗಲೆ ತಲೆ ಎತ್ತಿತು.


ಆನೆಪಾಳ್ಯದ ಬಾರ್ ಗೋಪಿ, ವಿಲ್ಸನ್ ಗಾರ್ಡನ್‌ನ ಪುಢಾರಿ ಪಾಲಾ ಸುಬ್ರಹ್ಮಣ್ಯಂ ಥರದವರು ಕವಳನ ಪಾಲಿಗೆ ಕಾಮಧೇನುಗಳಂತೆ ಅವತರಿಸಿದ್ದರು. ಪಳನಿ ಕೊಲೆ ಕೇಸಿನಲ್ಲಿ ಕವಳ ಇದ್ದನಾದರೂ ಪೊಲೀಸರು ಆತನ ಶಿಷ್ಯ ಸೂರ್ಯರಾಜ್‌ನನ್ನು ಅದಕ್ಕೆ ಸಿಲುಕಿಸಿ ಕವಳನನ್ನು ಬಚಾವು ಮಾಡಿದ್ದರು. ಬರುಬರುತ್ತಾ ಮಡಿವಾಳದ ಮಾರ್ಕೆಟಿನ ಬಡಕೂಲಿಗಳನ್ನೂ ಬಿಡದಂತೆ ಕವಳ ಪೀಡಿಸಲಾರಂಭಿಸಿದ್ದ. ಆತನ ಕ್ರೌರ್ಯ, ನಡೆಸಿದ ರಕ್ತಪಾತದ ಅರಿವಿದ್ದ ಯಾರಿಗಾದರೂ ಕವಳ ಎನ್‌ಕೌಂಟರ್ ಆಗುತ್ತಾನೆಂದೇ ನಿರೀಕ್ಷೆಯಿತ್ತು.

ಪಾಪಿ ಕವಳ ಸೇಫಾಗಿ ಬಳ್ಳಾರಿ ಜೈಲು ಸೇರಿದ್ದಾನೆ. ಇನ್ನೊಂದು ವರ್ಷ ಹೊರಬರಲಾರ. ಆತನ ಮಿರಾ ಬಾರಗಳನ್ನೆಲ್ಲ ಆತನ ತಮ್ಮ ಮಣಿಯೇ ನಿಭಾಯಿಸುತ್ತಿದ್ದಾನೆ. ಸಾಲದ್ದಕ್ಕೆ ಪಾತಕಿ ದೀದಿ ರವಿಯ ಬೆಂಬಲ ಬೇರೆ. ಇತ್ತ ಪೊಲೀಸರ ಕಾಟವಿಲ್ಲ ಅತ್ತ ದುಶ್ಮನ್‌ಗಳ ಬಾಧೆಯೂ ಇಲ್ಲ, ಈ ಮಧ್ಯೆ ಜಾಮೀನು ಸಿಕ್ಕಿತೆಂದರೆ ಕವಳನ ಹಾವಳಿಯ ಲೈಸೆನ್ಸು ರಿನೀವಲ್ ಆದಂತೆಯೇ. ಪಾಪಿ ಚಿರಾಯು!

-ರಾ.ಸೋ.

ಕವಿಪುಂಗವನೆಂಬ ಮಣ್ಣಿನಲಿ ಪ್ರೇಮನಾದದ ಪುಂಗಿಯ ಊದಿದೆ. ಪರಿಣಾಮವಾಗಿ ನನ್ನ ಬಲಗೆನ್ನೆ ಸ್ವಲ್ಪ ಊದಿದೆ -ಎಚ್. ಡುಂಡಿರಾಜ

ದ್ಯಾವೇಗೌಡ ಮಗನಿಗೂ ಲಟ್ರು ಬರದಿದ್ದನಂತೆ!



ನೆಂಜಣ್ಣನ ಮಗನ ಮದುವೆಗೆ ಹೋಗುವ ತರಾತುರಿಯಿಂದ ಉಗ್ರಿ, ಜುಮ್ಮಿ ಶೃಂಗರಿಸಿಕೊಂಡು ಬಂದರು. ಅವರು ಬರುವುದನ್ನೆ ಕಾಯುತ್ತಿದ್ದಂತೆ ಸೀರ,

"ದ್ಯಾವೇಗೌಡ ಮಗನಿಗೆ ಲಟ್ರು ಬರದವುನಂತೆ. ಏನು ಬರದವುನ್ನ ಉಗ್ರಿ?" ಎಂದ.

"ದ್ಯಾವೇಗೌಡ ಮಗನಿಗೂ ಲಟ್ರು ಬರದಿದ್ದನೆ?" ಎಂದ ಕಾಳಮಾವ ಆಚ್ಚರಿಯಿಂದ.

"ಊ ಕಣ ಮಾವ."

"ಅದ್ಯಾಕ್ ಬರದಾ? ಮನಿಗೆ ಬಂದಾಗ್ಲೆ ಅದೇನು ಅಂತ ಹೇಳಿದ್ರಾಯ್ತಿರಲಿಲ್ವೆ?"

"ಅವುನು ಆಗಿನಿಂದ ಲಟ್ರು ಬರದು ಬರದು ಅದ್ನೆ ಒಂದು ಚಟ ಮಾಡಿಕಂಡವುನೆ ಕಣಮಾವ. ಕಲ್ತಿದ್ದ ಬುಡೆ ಕಲಕೇತಿ ಅಂದ್ರೆ ಮದ್ಯದಲ್ಲಿ ಬುಟ್ಟು ಮಣ್ಣುಯ್ಮಕೈ ಅಂದ್ಲಂತೆ ಯಾವಳೊ, ಅಂಗೆ ದ್ಯಾವೇಗೌಡ". ಎಂದ ಉಗ್ರಿ.

"ಕೆಲುವು ಮಾತ ಎದುರಾ ಬೆದುರ ಹೇಳಕ್ಕೆ ಬರದಿಲ್ಲ ಕಂಡ್ಯ, ಅದ್ಕೆ ಎಲ್ಲೊ ಕಾಗದ ಬರದವುನೆ" ಎಂದ ಸೀರ.

"ಅದೇನು ಬರದವುನ್ನ?" ಎಂದಳು ಜುಮ್ಮಿ.

"ಅವುನಿನ್ನೇನು ಬರದನೂ, ಚಿರಂಜೀವಿ ಕುಮಾರನಿಗೆ ನಿಮ್ಮ ತಂದೆ ಆಶೀರ್ವಾದಗಳು. ಇಲ್ಲಿ ನಾವು ಕ್ಷೇಮ. ಅಲ್ಲಿ ನಿನ್ನ ಕ್ಷೇಮಕ್ಕೆ ಆಗಿಂದಾಗ್ಗೆ ತಿಳಿಸು. 'ಸಾಂಪ್ರತ.' ವಿಧಿನಿಯಮದಂತೆ ನೀನು ಮುಖ್ಯಮಂತ್ರಿಯಾದ ನಂತರ ನಾವೆಲ್ಲಾ ಸಂತೋಷವಾಗಿದ್ದೇವೆ. ನಿಮ್ಮವ್ವ ತುಂಬ ಗೆಲುವಾಗಿದ್ದಾಳೆ. ರೇವಣ್ಣನ ಹೆಂಡತಿ ಕೊಂಕು ಮಾತನ್ನಾಡುವುದನ್ನು ಇನ್ನೂ ಬಿಟ್ಟಿಲ್ಲ. ಬಾಲಕೃಷ್ಣನ ಹೆಂಡತಿಯೂ ಬಿಗುಮಾನದಿಂದ ಇದ್ದಾಳೆ. ನನ್ನ ಸೊಸೆಯರನ್ನೆಲ್ಲಾ ಸಂತೋಷವಾಗಿಡತಕ್ಕಂತಹ ಭಾಗ್ಯವನ್ನು ನಾನು ಪಡೆದಿಲ್ಲ, ರೇವಣ್ಣನ ಹೆಂಡತಿಯನ್ನು ಸಮಾಧಾನ ಮಾಡಲೋಸ್ಕರವೇ ಅವನನ್ನು ಎರಡು ಮೂರು ಮಂಡಳಿಗೆ ಅಧ್ಯಕ್ಷನನ್ನಾಗಿ ಮಾಡಿದೆ. ಇದಕ್ಕಿಂತ ಹೆಚ್ಚಿಗೆ ಮಾಡಿದರೆ ನಿನಗೆ ತೊಂದರೆಯಾಗಬಹುದೆಂದು ಸುಮ್ಮನಿದ್ದೇನೆ. ನಿನ್ನ ಹಿತಶತ್ರುಗಳಿಂದ ಉಷಾರಾಗಿರು, ನಿನ್ನ ಆಡಳಿತಕ್ಕೆ ಯಾರಾದರೂ ತೊಂದರೆ ಕೊಟ್ಟರೆ ನನಗೆ ಹೇಳು, ನಾನು ವಿಚಾರಿಸಿಕೊಳ್ಳುತ್ತೇನೆ, ಇತಿ ನಿನ್ನ ತಂದೆ ದೇವೇಗೌಡ ಅಂತ ಬರದಿದ್ದನಂತೆ ಕಣೆ" ಎಂದು ಉಗ್ರಿ ಒಳಗೇ ನಗು ತುಂಬಿಕೊಂಡು ಜುಮ್ಮಿಯತ್ತ ನೋಡಿದ.

"ಆಹಹ ಯಾರಾರ ನಿಜ ಅನ್ನಬೇಕು ಕಂಡ್ಯ, ಅಂಗ್ಯಾಕೆ ಬರಿಯಕ್ಕೋದನವುನು, ನೀನೆ ಹುಟ್ಟಿಸಿಗಂಡೇಳ ತಯಿದ್ದಿ" ಎಂದಳು ಜುಮ್ಮಿ.

"ಅದೇನು ಬರದವುನೆ ಅಂತ ಸರಿಯಾಗೇಳ್ಳ?" ಎಂದ ಕಾಳಮಾವ.

"ರೈತರಿಗೆ ಸರಿಯಾಗಿ ಸಾಲ ಕೊಡು. ಅಂಗೆ ಬೀಜನು ಗ್ವಬ್ಬರನೂ ಕೊಡು ಅಂತ ಬರದಿದ್ದನಂತೆ ಕಣಮಾವ."

"ಅಂಗನ್ನು ಮತ್ತೆ. ಏಟೇ ಆಗ್ಲಿ ರೈತರ ಕಷ್ಟ ಕಂಡೋನ ಲವೆ. ಮಗ ಮರತು ಬುಟ್ಟನೂ ಅಂತ ಗ್ನಾಪಿಸ್ಯವುನೆ."

"ಸಾಲ, ಬೀಜ, ಗ್ವಬ್ಬರ ಸಿಕ್ಕಿದ ಮ್ಯಾಲೆ ಇನ್ನೇನು ಬೇಕು ನಮಿಗೇ" ಎಂದ ಸೀರ.

"ಅಲ್ಲವೆ? ಮುದ್ದೆ, ಸಾರು, ಅನ್ನ ಒಟ್ಟಿಗೆ ಸಿಕ್ಕಿದಂಗಾಯ್ತದೆ. ಮೂರು ಮನೆತಕ್ಕೆ ಬತ್ತವೆ ಕಾಯ್ಕಂಡಿರು" ಎಂದ ಉಗ್ರಿ.

"ಅಂಗರೆ ಸುಳ್ಳೆನ್ನ?"

"ಹೋಗಿ ಹೋಗಿ ದ್ಯಾವೇಗೌಡನ ಲ್ಯಟ್ರುನೂ ನಂಬಿಕಂಡು ಕೂತಗತಿಯಲ್ಲೊ ನೀನು. ಸುಮ್ಮನೆ ಜನ ನಂಬುಸಕ್ಕೆ ಬರಿತನೆ, ಕೇವೇನೀಗವುನಿಗೆ. ಅದ್ನೆ ನೀನು ನಿಜ ಅಂತ ನಂಬಿಕಂಡ್ಯಲ್ಲ ಹೇಳು."

"ಅಂಗಲ್ಲ ಕಂಡ್ಯ, ಮಗನಿಗೆ ಏನು ಗೊತ್ತಿಲ್ಲ ಈತರಕೀತರ ಮಾಡು ಅನ್ನದು ತಪ್ಪೆ? ಅಂಗೆ ಅವುನು ಲಟ್ರು ಬರದಿರಬವುದು" ಎಂದ ಕಾಳಮಾವ.

"ಮಾವ ಸಾಲ ಕೊಡೊ ಬ್ಯಾಂಕು ದ್ಯಾವೇಗೌಡನ ಕಾಗದ ಕಾಯ್ಕಂಡು ಕುಂತಿರದಿಲ್ಲ, ಆವಷ್ಟಕವು ಕ್ಯಲಸ ಮಾಡ್ತವೆ. ಕುಮಾರಸ್ವಾಮಿನೂ ಅವನಷ್ಟಕ್ಕೆ ಏನೇನೊ ಮಾಡ್ತ ಕುಂತವುನೆ. ಈ ದ್ಯಾವೇಗೌಡನೂ ಲಟ್ರು ಕ್ಯರಿತ ಕುಂತವುನೆ. ಅನ್ನದ ಒಪ್ಪಿಗತಿಯಾ?" ಎಂದ ಉಗ್ರಿ.

"ಅದೇನಾರ ಆಗ್ಲಿ ಅಪ್ಪನ ನುಭವ ಮಗನಿಗೇಳದು ತಪ್ಪೆ? ಅವುನೇನು ಮಾಡಿದ್ರು ಆಣಕುಸ್ತಿರಲ್ಲ ಯಾಕೇ?" ಎಂದ ಕಾಳ ಮಾವನ ದನಿಯಲ್ಲಿ ಒಗರಿತ್ತು.

"ಆಯ್ತಪ್ಪ ದ್ಯಾವೇಗೌಡ ಲಟ್ರು ಬರದವುನಂತಲ್ಲ ಸಾಲ ಕೊಡಿ ಅಂತ ಪಿ.ಎಲ್.ಡಿ. ಬ್ಯಾಂಕತ್ರುಕೋಗು ಗೊತ್ತಾಯ್ತದೆ."

"ನಾನಾಗ್ಲೆ ಹೋಗಿದ್ದೆ ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ಸಾಲ ಕೊಟ್ರೇನ್ನ?" ಎಂದಳು ಜುಮ್ಮಿ.

"ತ್ರೂದಿ ಸೊಸೈಟಿ ಕಣಕ್ಕ. ಲ್ಯಾಂಡಿದ್ರೆ ಪ್ಲಡ್ಜ ಮಾಡಬೇಕು. ಅಂತು ಸಾಲ ಕೈಗೆ ಬರದ್ವಳಗಡೆ ಆದರಷ್ಟೇ ಸಾಲನೂ ಆಯ್ತದೆ. ಎನಿಹೌ ದ್ಯಾವೇಗೌಡ್ರು ಲ್ಯಟರಿಂದ ನಮ್ಮ ಜನಗಳ್ಗಲ್ಲ ಬ್ಯಾಂಕತ್ರ ಕ್ಯೂ ನಿಂತಗಳಕ್ಕೆ ರಡಿಯಾಗ್ಯವುರೆ. ಆದ್ರೆ ಡಿಸಿಸಿ ಬ್ಯಾಂಕು ಪಿಎಲ್‌ಡಿ ಬ್ಯಾಂಕಲ್ಲಿದ್ದ ದುಡ್ಡನ್ಯಲ್ಲ ದ್ವಡ್ಡೋರು ಇಸ್ವಡಕಂಡವುರೆ ಕಣಕ್ಕ."

"ಅಂಗರೆ ನಮಿಗ್ಯಲ್ಲ ಸಿಗದಿಲ್ಲ ಅನ್ನು?"


"ಸಿಗಲಿ ಬುಡ್ಯ ದ್ಯಾವೇಗೌಡ ಲೆಟರ್ ಬರಿಯದ ಬುಡದಿಲ್ಲ, ಅಂಗೆ ಎಡೂರಪ್ಪನ ಮ್ಯಾಲೆ ಬಿಜೆಪಿಗಳು ಮೂಗರ್ಜಿ ಬರಿಯದ್ನು ಬುಡದಿಲ್ಲ."

"ಅವುನ್ಯಾರೊ ಯತ್ತನಾಳು ಅನ್ನೊನು ಎಡೂರಪ್ಪನ ರಾಜೀನಾಮೆ ಕೇಳ್ತ ಕುಂತವುನಂತಲ್ಲ ಅವನ್ಯಾರ್ಲ?"

"ಅವುನು ಬಸನಗೌಡ ಪಾಟೀಲ್ ಅಂತ. ಬಿಜಾಪುರದೋನು. ಬಿಜಾಪುರದಲ್ಲಿ ಇಜಾರದೋರು ಹಜಾರ ಮಂದಿ ಅಂತ ಬಾಳ ಜನವ ಗೆಲ್ಲಿಸಿ ಕೊಟ್ಟವುನೆ. ನೋಡಕ್ಕಂಗೆ ವೀರಸಿಂಧೂರ ಲಕ್ಷ್ಮಣನಂಗೆ ಕಾಣ್ತನೆ. ಅವುನು ತಿರಿಗಿ ಬಿದ್ದವುನೆ."

"ಅದ್ಯಾಕ್ ತಿರಗಿ ಬಿದ್ದಿದ್ದನೂ?"

"ಅವುನು ಎಡೂರಪ್ಪನ್ನ ನೋಡಕ್ಕೆ ಅಂತ ಬಂದಾಗ, ಈ ಎಡೂರಪ್ಪ ಮೂರುಗಂಟೆ ಬಾಗಲಲ್ಲೇ



ಕಾಯಿಸಿದನಂತೆ."

"ಅದ್ಯಾಕಂಗೆ ಕಾಯಿಸ್ತಾ?"

"ಯಾರೊ ಜಮೀನು ಮಾರೋರು ಬಂದಿದ್ರಂತೆ. ಅವುರ ಜ್ವತೆ ವ್ಯವಾರ ಮಾತಾಡ್ತಯಿರುವಾಗ ಯತ್ನಾಳ್ ಇದ್ರೆ ಸರಿಯಾದತೆ? ಅದ್ಕೆ ಕಾಯಿಸ್ತ."

"ಥೂ ಅಂಗಲವಂತೆ ಕಣೊ ವಾಟಿಸ್ಸೆ, ಎಡೂರಪ್ಪ ವಳಗಡೆ ಸೋಬನ ಜ್ವತೆ ಮಾತಾಡ್ತ ಕುಂತಿದ್ನಂತೆ. ಆಗ ಯತ್ನಾಳು ಎಷ್ಟೊತ್ತು ಅಂತ ಕಾದನೂ?"

"ಗಂಡುಸ್ರು ಹೆಂಗಸರ ಜ್ವತೆ ಮಾತಿಗೆ ಕುಂತ್ರೆ ವಸಿ ಮಾತಾಡ್ಯರೆ?" ಎಂದಳು ಜುಮ್ಮಿ.

"ಆದರಲ್ಲೂ ಇಷ್ಟವಾದೋರ ಜ್ವತೆ ದಿನವ್ಯಲ್ಲ ಮಾತಾಡ್ತರೆ. ಪಾಪ ಎಡೂರಪ್ಪನಿಗೆ ಹೆಂಡತಿಯಿಲ್ಲ, ಮನೆಲು ಯಾರಿಲ್ಲ, ಅಂತ ಟೇಮಲ್ಲಿ ಈ ಯತ್ನಾಳು ಮನೆತಕ್ಕೋದ್ರೆ ಕಾಯ್ದೆ ಇನ್ನೇನು ಮಾಡಕ್ಕಾಯ್ತದೆ?"

"ಮಿಸ್ಟರ್ ಉಗ್ರಿ, ಪಾಲಿಟಿಕ್ಸಲ್ಲಿ ಪರಸನಲ್ ವಿಷಯನ ಪಾರ್ಟಿಯಿಂದ ದೂರ ಇಡಬೇಕು. ಆದ್ರೆ ಎಡೂರಪ್ಪ ಯರುಡ್ನು ಮಿಕ್ಸ್ ಮಾಡಿಕಂಡಿರದ್ರಿಂದ ಯತ್ನಾಳು ರಾಜಿನಾಮೆ ಕೇಳ್ತ ಕುಂತವುನೆ. ಅಂತೂ ಎಡೂರಪ್ಪನಿಗೆ ಶನಿಯುಗಲೇರದೆ" ಎಂದ ವಾಟಿಸ್ಸೆ.

"ಯತ್ತನಾಳು ಎಡೂರಪ್ಪನ ರಾಜೀನಾಮೆ ಕೇಳಬೇಕಾದ್ರೆ ದ್ಯಾವೇಗೌಡ್ರುದೇ ಕಿತಾಪತಿ ಅನ್ನಂಗೆ ಕಾಣ್ತದೆ" ಎಂದ ಉಗ್ರಿ.

"ಯಾಕ್ಲ ಅಂತ ಅನ್ಯಾಯದ ಮಾತಾಡಿ, ಅವುನ್ಯಾಕಂತ ಕ್ಯಲಸ ಮಾಡ್ಯನೂ?" ಎಂದ ಕಾಳಮಾವ.

"ಉಗ್ರಿ ಹೇಳಿದ್ರಲ್ಲೂ ತಗಳೊ ಅಂತೆದದೆ ದ್ವಡಪ್ಪ, ಈ ದ್ಯಾವೇಗೌಡ್ರು ಮುಂದಿರೊ ಸಮಸ್ಯೆ ಏನಪ್ಪ ಅಂದ್ರೆ, ನಲವತ್ತು ತಿಂಗಳೂ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿರಂಗೆ ನೋಡಿಕಳದು. ಅಂಗಾಗಬೇಕಾದ್ರೆ, ಎಡೂರನ ಟೀಮು ಅಗಚಿಗಂಡು ಇತ್ತಗಿ ಬರಬೇಕು. ಅದಕೇನೇನು ಬೇಕೊ ಅದಾಗ್ಲೆ ಶುರುವಾಗಿರಂಗೆ ಕಾಣ್ತಾ ಅದೆ. ಈಗ ಯಾರ್ಯಾರು ಮದಿವಿಗೆ ಬತ್ತಿರಪ್ಪ?"

"ಮದಿವಿಗೆ ಬರಕ್ಕೆ ಹೆದ್ರಿಕಾಯ್ತದೆ ಕಂಡ್ಯ."

"ಯಾಕಕ್ಕ?"

"ವಳೆನರಸಿಪುರತ್ತ ಓಡೆನಳ್ಳಿಲಿ ತಿರಗ ಪಾಯ್ಸ ಬುಡ್ಸಿಲ್ಲ ಅಂತ ಮದಿವಿಗೆ ಬಂದಿದ್ದ ಹುಡುಗುನ್ನೆ ವಡದಾಕ್ಯವುರೆ ಕಂಡ್ಯ."

"ಅದು ನನಿಗೂ ಗೊತ್ತಾಯ್ತು ಕಣಕ್ಕ. ಇನ್ನ ಬಾಡಿನೂಟಾಗಿದ್ರೆ ಎಷ್ಟು ಜನ ಸಾಯ್ತಿದ್ರು ಅಂತ ಹೇಳಕ್ಕೆ ಬರದಿಲ್ಲ ಕಣಕ್ಕ."

"ಅಲ್ಲಿಗಂಟ ಯಾಕೋದಿಲ. ಇಲ್ಲೆ ದ್ವಡ್ಡಬಾಲದಲ್ಲಿ ಆ ಬಕ್ಕನುಡುಗ ಲಕ್ಕ, ಅವುರ ಮಾವುನಿಗೆ ಅಪ್ಪಳ ಹಾಕಲಿಲ್ಲ ಅಂತ ಹತ್ತಿಗಂಡಿದ್ದು ದಂಡ ಹಾಕೊವರಿಗೂ ಹೋಯ್ತು. ನಮ್ಮ ಕಾಳಣ್ಣನೆ ದಂಡ ಹಾಕಿ ಸಮಾಧಾನ ಮಾಡಿದ. ಇಲ್ಲ ಅಂದ್ರೆ ಅವತ್ತು ಹ್ಯಣ ಬದ್ದೊಗವು" ಎಂದು ಸೀರ ಮದುವೆಗಳ ಬಗ್ಗೆ ಇನ್ನೂ ಹೆದರಿಸಿದ.

-ಬಿ. ಚಂದ್ರೇಗೌಡ

Zero Hour ಮುನ್ನಿ

1. "ಬಜೆಟ್‌ನಲ್ಲಿ ಘೋಷಿಸಿದ ಯೋಜನೆಗಳಿಗೆ ಶೇ. 25 ರಷ್ಟು ಹಣ ನೀಡಲೂ ಆಗುತ್ತಿಲ್ಲ. ಟ್ರೆಜರಿ ಖಾಲಿ ಖಾಲಿ...." ಹಣಕಾಸು ಸಚಿವ ಯಡ್ಡಿಯ ಈ ಹೇಳಿಕೆ ಏನನ್ನು ತೋರಿಸುತ್ತದೆ?

a) ಯಡ್ಡಿಯ ಗೋಮೂತ್ರದ ಬಜೆಟ್ ಬೆತ್ತಲೆಯಾಯ್ತು
b) ಯಡ್ಡಿಯ ಅಪ್ರಾಮಾಣಿಕ ಹೇಳಿಕೆ
c) ಖಾಲಿ ತಲೆಯ ಯಡ್ಡಿ.... ನಿಕಾಲಿ ಮಾಡಿದ ಟ್ರೆಜರಿ....
d) a ಮತ್ತು c ಸರಿ

2. "ಕಾಲೇಜು ಹುಡುಗಿಯರಿಗೆ ಡ್ರೆಸ್ ಕೋಡ್ ಅವಶ್ಯ. ಭಾನುವಾರ ರಜಾ ದಿನ ಮಾತ್ರ ಅವರು ಹೇಗಾದರೂ ಇರಲಿ...." ಎಂಬ ತಾರಾಳ ಅಣಿಮುತ್ತಿನ ಅರ್ಥ ಏನು?

a) ಎಲ್ಲರನ್ನೂ ಕಾನೂರು ಸುಬ್ಬಮ್ಮ ಹೆಗ್ಗಡಿತಿಯರನ್ನಾಗಿಸುವ ಬಯಕೆ ತಾರಕ್ಕನಿಗೆ
b) ಭಾನುವಾರ ರಜೆ ದಿನವಾದ್ದರಿಂದ ಬಟ್ಟೆಗೂ ರಜೆ ನೀಡಬೇಕು
c) ವಯಸ್ಸಲ್ಲದ ವಯಸ್ಸಲ್ಲಿ ಮದುವೆಯಾದ್ರೆ ಹಿಂಗೇ ಮಾತಾಡ್ತಾರೇನೋ?
d) ಈ ತಾರಾಮ್ಮನಿಗೆ ಬುದ್ಧಿ ಇರಬೇಕೆಂದು ಭಾವಿಸಿದ್ದೇ ತಪ್ಪು

3. ಬಾಳೆಹಣ್ಣು ಮಾರುತ್ತಿರುವ ಮೀಸಲಾತಿ ವಿರೋಧಿಗಳ ಈ ಚಿತ್ರ ಏನನ್ನು ಸೂಚಿಸುತ್ತದೆ



a) ಇವರೆಲ್ಲ ಮೆಂಟಲ್ ಹಾಸ್ಪಿಟಲ್ ವೈದ್ಯರು
b) ಇವರೆಲ್ಲ ಮಹಾನ್ ಪಂಡಿತ ಪ್ರತಿಭೆಗಳು
c) ಈ ಬನಾನಾ ಕೇಸ್ (ಮೆಂಟಲ್ ಕೇಸ್)ಗಳನ್ನು ಮೊದಲು ಮೆಂಟಲ್ ಹಾಸ್ಪಿಟಲ್‌ಗೆ ಸೇರಿಸಬೇಕಾಗಿದೆ
d) ಸುಲಿದ ಬಾಳೆಹಣ್ಣು ತಿನ್ನಲಷ್ಟೇ ಸಮರ್ಥರು

4. 'ಹಾಡು ಮಾರುವ ಹುಡುಗಿ' ಎಂದರೆ

a) ಲೈವ್ ಬ್ಯಾಂಡ್ ಹುಡುಗಿ
b) ಬಾರ್‌ಗರ್ಲ್
c) ಹಾಡುಗಳನ್ನೂ ಮಾರುತ್ತಿರುವ ಮೊಬೈಲ್ ಕಂಪನಿ
d) ಸಿನಿಮಾ ಗೀತೆ ಹಾಡುವ ಗಾಯಕಿ


5. ಈ ಚಿತ್ರದ ಒಳಗುಟ್ಟೇನು?

a) ವ್ಯವಹಾರದಲ್ಲಿ ಫುಲ್ ಬ್ಯುಸಿ ಆಗಿರುವ ಇಬ್ಬರು ಲ್ಯಾಂಡ್ ಗ್ರ್ಯಾಬರ್ಸ್
b) ಟೋಪಿ ಹಾಕುವ ಕಲೆ
c) grounded on earth for 'lands!'
d) ಇವರೆಲ್ಲರೂ ಪ್ರತಿಭಟನೆಗೆ ಕುಳಿತಿದ್ದಾರೆಂದು ತಪ್ಪು ತಿಳಿಯಬಾರದು
e) ಮೇಲಿನೆಲ್ಲವೂ ಸರಿ



ಉತ್ತರಗಳು 1.d 2.b 3.c 4.c 5.e


"ಹಿಂದಾಡಿ ಕೊಂಬವರು..."



"ಇದು ಪುರಂದರದಾಸರ ಹಾಡಿನಲ್ಲಿದೆ. ಈತ ಕವಿಯಲ್ಲ, ಸಂಗೀತಗಾರ. ಪುರಂದರರನ್ನು ಸಂಗೀತಗಾರ ಎಂದು ಕರೆದರೂ ಅವರಿಗೆ ಬೇಸರವಾಗುತ್ತಿತ್ತು, ಮೂಲಭೂತವಾಗಿ ಇವರು ಹಾಡುಗಾರರೂ ಅಲ್ಲ, ಕೇವಲ ಸಂತ. ಅಂದರೆ ಇದೆಲ್ಲಕ್ಕಿಂತ ದೊಡ್ಡವರು. ಪುರಂದರರು ರಚಿಸಿದ ಹಾಡು, ರೂಪಿಸಿದ ಸಂಗೀತದ ಬಗ್ಗೆ ನನಗೆ ಅಷ್ಟಾಗಿ ಗೊತ್ತಿಲ್ಲ, ಆದರೆ ಶಿಶುನಾಳ ಶರೀಫರಂತೆಯೇ ಈ ದಾಸರು ಕನ್ನಡದ ಮರ್ಯಾದೆ, ಬನಿ ಅರಿತು ಬಳಸುವ ರೀತಿ ಅದ್ಭುತ. 'ಇದಿರು ಭಲೆ ಎಂದು ಹಿಂದಾಡಿ ಕೊಂಬವರ ಸಂಗ ಬೇಡ' ಎಂದು ಹೇಳುತ್ತಾರೆ. 'ಎಲ್ಲಾನು ಬಲ್ಲೆನು ಎಂಬುವಿರಲ್ಲ, ಅವಗುಣ ಬಿಡಲಿಲ್ಲ' ಅನ್ನುತ್ತಾರೆ. 'ಆಡಿಕೊಳ್ಳುವುದು' ಕನ್ನಡದ ನುಡಿಕಟ್ಟಿನ ಹಳೆಯ, ಮೋಹಕ ಸರಕು. 'ಅವಗುಣ' ಕೂಡ.

ಶರೀಫರಲ್ಲಿ ಅಷ್ಟಾಗಿ ಇಲ್ಲದ ನಸುಹಾಸ್ಯ, ಕಿಲಾಡಿತನ ಈ ದಾಸರಲ್ಲಿದೆ. ಹಾಸ್ಯ, ವಿನೋದ ಏನನ್ನು ತೋರುತ್ತವೆ? ಆತ್ಮಹತ್ಯೆ ಮಾಡಿಕೊಳ್ಳಲು ಹೊರಟವನಲ್ಲಿ, ಚಿತೆಗೆ ನೂಕಲ್ಪಡುವ ವ್ಯಕ್ತಿಯಲ್ಲಿ, ಹುತಾತ್ಮನಲ್ಲಿ ಹಾಸ್ಯ ಇರುವುದಿಲ್ಲ; ಬದುಕನ್ನು ಪ್ರೀತಿಸುವವನಲ್ಲಿ, ಇತರರ ದೋಷದ ಬಗ್ಗೆ ಸಹನೆ ಇರುವವನಲ್ಲಿ, ಆತ್ಮವಿಮರ್ಶೆ ಅರಿತವನಲ್ಲಿ, ಈ ಬದುಕಿನ ದ್ವಂದ್ವಗಳನ್ನು ಬಲ್ಲವನಲ್ಲಿ ಹಾಸ್ಯ ಇರುತ್ತದೆ.

ಹೀಗೆ ಹೇಳುವುದು ನಮ್ಮ ದಾಸರನ್ನು ಆಡಿಕೊಂಡಂತೆ ಆಗುವುದಿಲ್ಲ ಎಂದು ಭಾವಿಸಲೆ?



ಏಪ್ರಿಲ್ 3, 1988

ಊರಿಗೊಂದಿಷ್ಟು ಪುಸ್ತಕಗಳು

ಊರಿಗೊಂದು ಪುಟ್ಟ ಗ್ರಂಥಾಲಯ-ಐವತ್ತು ಪುಸ್ತಕಗಳಿದ್ದರೂ ಪರವಾಗಿಲ್ಲ, ಇದನ್ನು ನಂಬಿದವನು ನಾನು. ಯಾಕೆ ಗೊತ್ತೆ? ಹಳ್ಳಿಯ ಜನರಲ್ಲಿ ಇದ್ದ ಅಕ್ಷರತೆ ಮಾಯವಾಗುತ್ತಿದೆ. ಓದುವ ಅಭ್ಯಾಸ ಬೆಳೆಯುತ್ತಿಲ್ಲ. ಮಕ್ಕಳು ಚಿಕ್ಕವರಾಗಿದ್ದಾಗಲೇ ಓದುವ ಖುಷಿ ದೊರೆತರೆ ಅದು ಹೋಗುವುದೇ ಇಲ್ಲ. ಈ ಓದಿನ ಸುಖದ ಬಗ್ಗೆ ಆಮೇಲೆ ಬರೆಯುತ್ತೇನೆ.

ಈಗ ಯಾಕೆ ಹೇಳುತ್ತಿದ್ದೇನೆ ಅಂದರೆ, ನಾನು ತೀರಾ ಚಿಕ್ಕವನಾಗಿದ್ದಾಗ ನಮ್ಮೂರಿಗೆ ನೂರು ಪುಸ್ತಕಗಳ ಒಂದು ಲೈಬ್ರರಿ ಬಂತು. ವಯಸ್ಕರ ಶಿಕ್ಷಣ ಸಮಿತಿಯದು. ಅಲ್ಲಿ ಆಣೆ ಬೆಲೆಯ ಕೆಲವು ಪುಸ್ತಕಗಳಿದ್ದವು. ದಪ್ಪ ಅಕ್ಷರದಲ್ಲಿ ಸರಳವಾಗಿ, ಸುಂದರವಾಗಿ ಅಚ್ಚಾದ ಪುಸ್ತಕಗಳು. ಗೊರೂರು ರಾಮಸ್ವಾಮಿ ಅಯ್ಯಂಗಾರರು ಟಾಲ್‌ಸ್ಟಾಯ್ ಅವರ ಅದ್ಭುತ ಕತೆ, 'ನಮಗೆಷ್ಟು ಭೂಮಿ ಬೇಕು?' ಎಂಬ ಕತೆಯನ್ನು ಸರಳವಾಗಿ, ಸಂಗ್ರಹಿಸಿ ಬರೆದಿದ್ದರು. ಕತೆ ಏನು ಗೊತ್ತೆ? ಹಳ್ಳಿಯ ಬಡವನೊಬ್ಬ ಇರುತ್ತಾನೆ. ಈತನನ್ನು ಚುಮು ಚುಮು ಬೆಳಗ್ಗೆ ಆಗುಂತಕನೊಬ್ಬ ಭೇಟಿಯಾಗುತ್ತಾನೆ. ಹೇರಳ ಭೂಮಿ ಇರುವುದಾಗಿ, ಈ ಬಡವ ಹೊತ್ತು ಮುಳುಗುವುದರೊಳಗಾಗಿ ನಡೆದು ಗೊತ್ತಾದ ಸ್ಥಳ ಸೇರುವಷ್ಟು ಜಾಗವೆಲ್ಲ ಅವನದೇ ಆಗುವುದಾಗಿ ಹೇಳುತ್ತಾನೆ. ಬಡವ ಆಶೆಯಿಂದ ಹೊರಡುತ್ತಾನೆ. ಮನುಷ್ಯನ ಭೂಮಿಯ ಆಶೆಗೆ ಮಿತಿ ಇದೆಯೆ? ಇನ್ನಷ್ಟು ದೂರ, ಇನ್ನಷ್ಟು ಬಳಸಿ ಹೋಗುತ್ತಾನೆ. ಹೊತ್ತು ಮುಳುಗತೊಡಗಿದೆ. ಓಡಿ ಗೊತ್ತಾದ ಸ್ಥಳ ಸೇರಲು ಹೆಣಗುತ್ತಾನೆ. ಹುಚ್ಚು ಹಿಡಿದಂತೆ ಓಡುತ್ತಾನೆ. ದೂರ ಬಹಳ. ಎಷ್ಟು ಓಡಿದರೂ ಆಗುವುದಿಲ್ಲ ಕೊನೆಗೆ ಓಡುತ್ತಾ ಬಂದು ಗುರಿ ಮುಟ್ಟಿ ಬಿದ್ದು ಸಾಯುತ್ತಾನೆ.




ಅವನಿಗೆ ಬೇಕಾದ ಭೂಮಿ ಎಷ್ಟು? ಸಮಾಧಿಗೆ ಆರು ಅಡಿ ಮಾತ್ರ.

ಇವತ್ತಿಗೂ ಈ ಕತೆ ಮನಸ್ಸು ಕಲಕುತ್ತದೆ.

ಮನೆ ಹತ್ತಿ ಉರಿದರೆ

ಧರೆ ಹತ್ತಿ ಉರಿದರೆ ಏನು ಮಾಡುವುದು?

ಪನಾಮಾ ರಾಷ್ಟ್ರದ ಅಧ್ಯಕ್ಷ ನೊರೈಗಾ ಈತನ ಮುಖ ನೋಡಿದೆ, ಗಾಯಗಳಿಂದ ಒರಟಾಗಿದೆ. ಕ್ರೂರಿಯಾದ ಸರ್ವಾಧಿಕಾರಿ. ಇವನನ್ನು ಟೀಕಿಸಲಾಗುವುದಿಲ್ಲ, ಆದರೂ ತರುಣರು ಬೀದಿಗಳಲ್ಲಿ ಈತನ ವಿರುದ್ಧ ಪ್ರತಿಭಟಿಸುವಾಗ ಇವನ ಒರಟು ಮುಖವನ್ನು ಹೀಯಾಳಿಸುತ್ತಾ 'ಪೈನಾಪಲ್' ಎಂದು ಕೂಗುತ್ತಾರೆ. ಈತನ ಮೇಲಿನ ಆಪಾದನೆ ಹಲವಿವೆ.



ಅವುಗಳಲ್ಲೊಂದು ಈತನ ಹಿಂಸೆ-ತನ್ನನ್ನು ಟೀಕಿಸುತ್ತಿದ್ದ ವ್ಯಕ್ತಿಯನ್ನೀತ ಚಿತ್ರಹಿಂಸೆ ಮಾಡಿಸಿ, ಲೈಂಗಿಕ ಅಂಗಗಳನ್ನು ಹಿಸುಕಿಸಿ, ಕಣ್ಣುಗಳನ್ನು ಕೀಳಿಸಿ ಸಾಯಿಸಿದ. ಈ ಹಿಂಸೆಯ ದೃಶ್ಯಗಳನ್ನು ಕ್ಷಣಕ್ಷಣಕ್ಕೂ ಫೋನ್ ಮೂಲಕ ಯೂರೋಪಿನಲ್ಲಿದ್ದ ಈತ ಕೇಳಿ ಹಿಗ್ಗುತ್ತಿದ್ದ.

ಇತ್ತೀಚಿನ ಆಪಾದನೆ-ಕಳ್ಳರು, ದಗಾಕೋರರನ್ನು ಹಿಡಿಯಬೇಕಾದ ಈತನೇ ಖುದ್ದಾಗಿ ಗಾಂಜಾ, ಕ್ರಾಕ್ ಮುಂತಾದ ಮಾದಕ ವಸ್ತುಗಳ ವಿತರಣೆಯಲ್ಲಿ ತೊಡಗಿದ್ದಾನೆ. ಕಳ್ಳ ಸಾಗಾಣಿಕೆಯಿಂದ ಖದೀಮರು ಹಣ ಮಾಡುವುದಾದರೆ ಈ ಅಂತರರಾಷ್ಟ್ರೀಯ ಬಾನಗಡಿಗೆ ತಾನೇ ಸೇರಿಕೊಂಡರೆ ಲಾಭದಾಯಕ ವಲ್ಲವೆ?

ಹೇಗಿದೆ?

ಇದೇ ಬಗೆಯ ಜಾಲದಲ್ಲಿ ರೇಗನ್, ಥ್ಯಾಚರ್ ಸಿಕ್ಕಿ ಹಾಕಿಕೊಂಡಿಲ್ಲವೆಂದು ಹೇಳುವ ಎದೆ ಯಾರಿಗಿದೆ?

ವೀರಪ್ಪ ಮೊಯ್ಲಿ ಸುಳ್ಳಿನ ಸರದಾರ, ಎಚ್.ಡಿ. ಕುಮಾರಸ್ವಾಮಿ...?

ಮಂಚಾಲಿ. ಗುರುರಾಜಚಾರು. ಬಳ್ಳಾರಿ
ಕಣ್ಣಾಮುಚ್ಚಾಲೆಗೆ ಬರುವ ಪ್ರಶ್ನೆಗಳಿಗೆ ಕಣ್ಣು ಮುಚ್ಚಿ ಉತ್ತರ ಹೇಳುತ್ತೀರಾ?
* ಕಣ್ಣುಮುಚ್ಚಿಕೊಂಡು ಉತ್ತರ ಕೊಡೋಕೆ ನಾವೇನು ದೇವೇಗೌಡ ಕೆಟ್ಟೋದೆವಾ?

ಎಂ. ನಿಸರ್ಗ. ದಾವಣಗೆರೆ
ಬೇಲಿಯ ಮೇಲಿನ ಹೂವಿಗೂ, ತೋಟದಲ್ಲರಳಿದ ಹೂವಿಗೂ ಏನು ವ್ಯತ್ಯಾಸ?
* Public Sector ಗೂ, Private Sector ಗೂ ಇರುವ ವ್ಯತ್ಯಾಸ.

ಬಸವರಾಜ್ ಬೆಸ್ತರ್. ಹರಪನಹಳ್ಳಿ
ಬಿಸ್ಮಿಲ್ಲಾ ಖಾನ್‌ಗೂ, ಸಲ್ಮಾನ್‌ಖಾನ್‌ಗೂ ಇರುವ ವ್ಯತ್ಯಾಸ?
* ಒಬ್ಬ ಸಂತ, ಇನ್ನೊಬ್ಬ ಸೈತಾನ.

ರಾಗಿಣಿ. ದೇವದುರ್ಗ
"ನಾನು ಅವಿವಾಹಿತ ಅಲ್ಲ, ಬ್ರಹ್ಮಚಾರಿ" ಎಂದು ಅಬ್ದುಲ್ ಕಲಾಂ ಹೇಳಿದ್ದಾರಲ್ಲ?
* ತಾನು 'ಗಂಡಸು' ಎಂಬುದನ್ನು ದೃಢೀಕರಿಸೋದಕ್ಕೆ.

ಪಿ.ಎನ್. ಶ್ರೀವತ್ಸ. ಬೆಂಗಳೂರು
ಬಿಟಿಎಸ್‌ನ ವಾಲ್ವೋ ಬಸ್ಸುಗಳಲ್ಲಿ ಹೆಣ್ಣು ಇನ್ನೂ ಯಾಕೆ ಕಂಡಕ್ಟರ್ ಆಗಿಲ್ಲ...?!
* 'ಭಾರಾ'ದಲ್ಲ, ಅದಕ್ಕೆ.

ಪೂರ್ಣಿಮಾ. ಹಗರಿಬೊಮ್ಮನಹಳ್ಳಿ
'ಸೀಮಂತ ಸಮಾರಂಭ'ವನ್ನು ಇಲ್ಲೊಬ್ಬ 'ಸಾಧನಾ ಸಮಾವೇಶ' ಎಂದು ಬಣ್ಣಿಸುತ್ತಾನಲ್ಲ?
* ಸೋಬನವೇ ಜೀವನದ ಸಾಧನೆ ಅಂದುಕೊಂಡವರೆಲ್ಲಾ ಹಾಗೇನೇ!

ಜೆ.ಎ. ಖಲಂದರ್ ಅಜೀಜ್. ಜಾವಗಲ್
ಮಣ್ಣಿನ ಮಗ ಗೌಡ್ರ ಗದ್ದಲದಲ್ಲಿ ನಿಜವಾದ ಲಾಭ ಯಾರಿಗೆ?
* ಕೇಸರಿನ ಕಮಲೆ ಶೋಭಾ ತನಗೇ ಅಂದುಕೊಂಡಿದ್ದಾಳೆ



ಬಿ.ಎಂ. ಪರಶಿವಮೂರ್ತಿ. ಬೆಂಗಳೂರು
"ನಮ್ಮೆಜಮಾನ್ರು, ಮನೆಗೆ ಬಂದ ಕೂಡ್ಲೆ ಬಟ್ಟೆ ಬಿಚ್ಚಾಕ್ತಾರೆ" ಅಂತಾರೆ ಇಲ್ಲೊಬ್ಬ ಆಂಟಿ.... ಏನರ್ಥ?
* ಆಂಟಿ-ಅಂಕಲ್‌ನ ಆಂಟಿನ ನಂಟು ಬಲ್ಲವರಾರು ಪರಶಿವ್ರೂ?

ಜಿ.ಎನ್. ಪ್ರಸನ್ನಕುಮಾರ್. ತುಮಕೂರು
"ದಾಡಿ ಬಿಟ್ಟು, ನೈಂಟಿ ಹಾಕಿ, ಸಿಗರೇಟು ಸುಡುತ್ತಾ ಓಡಾಡುವುದನ್ನು ಅಮರ ಪ್ರೇಮಿಗಳ ಲಕ್ಷಣ ಅಂದ್ಕೋಬೇಕಾ?"
* ಅದು 60 ಮಾಡೆಲ್ 06 ಮಾಡೆಲ್ ಹೊಸ ಪ್ರೇಮಿಗಾಗಿ ಇಂಟರ್‌ನೆಟ್ ಸರ್ಫ್ ಮಾಡ್ತಿರುತ್ತೆ!

ಇಂದಿರಾ ಶ್ರೀಧರ್. ದಾವಣಗೆರೆ
ತಮಿಳುನಾಡಿನಂತೆ ಇಲ್ಲಿಯೂ ಕೆಳಜಾತಿಗರನ್ನು ಅರ್ಚಕರನ್ನಾಗಿ ನೇಮಿಸಿದರೆ ಪೇಜಾವರರು ಸುಮ್ಮನಿರ್‍ತಾರ?
* ಅವತ್ತು ಕನಕನನ್ನೇ ಬಿಡಲಿಲ್ಲ, ಇನ್ನು ಇವತ್ತು ಸರ್ಕಾರಿ ದಾಸರಿಗೆಲ್ಲಿ ಅವಕಾಶ?


ಉದಯಕೃಷ್ಣ. ವಿಟ್ಲ
ನಿಮ್ಮ ಹೆಸರಿನಲ್ಲಿ ಚಿತ್ರ ತಯಾರಿಸಿದರೆ ಅದು ಶತದಿನೋತ್ಸವ ಓಡಬಹುದೋ?
* ಅಂತ ಭ್ರಮೆ ನಮಗಂತೂ ಇಲ್ಲ.

ಕೆ. ಶ್ರೀನಿವಾಸ್. ಮಂಡ್ಯ
ಸೋನಿಯಾರಂಥಾ ಮಮ್ಮಿ, ದೇವೇಗೌಡ್ರಂತಾ ಡ್ಯಾಡಿ ಇದ್ರೆ ರಾಜಕೀಯದಲ್ಲಿ ಮಿಂಚಬಹುದಾ?
* ರಾಹುಲ್‌ಗಿರೋವಷ್ಟು ತಾಳ್ಮೆ ಕುಮಾರನಿಗಿಲ್ಲವಲ್ಲ.

ಕೆ.ಬಿ. ಸುಕನ್ಯಾ. ಕೆಂಕೆರೆ
ಪ್ರೀತಿಯನ್ನು ನದಿಗೆ ಹೋಲಿಸುತ್ತಾರಲ್ಲ?
* ಈಗಿನ ನದಿಗಳಂತೆ ಅದೂ ಬತ್ತಿ ಹೋಗುವುದರಿಂದ.

ಕಾಳೀಹುಂಡಿ ಶಿವಕುಮಾರ್. ಮೈಸೂರು
ಕಿರುತೆರೆಯಲ್ಲಿ ಕ್ರೈಂ(ಡೈರಿ)ಸ್ಟೋರಿಗಳ ಭರಾಟೆಗೆ ಕೊನೆ ಎಂದು?
* ಕ್ರೈಂ ನಿಂತಾಗ.

ಬಿ.ಚಂದ್ರೇಗೌಡ. ಬೆಂಗಳೂರು
ದೇವೇಗೌಡರು ಬರೆದ 'ಪ್ರೇಮಪತ್ರ'ಗಳನ್ನು ಬಿಡುಗಡೆ ಮಾಡುವುದಾಗಿ ಧರ್ಮಸಿಂಗ್ ಹೇಳಿದ್ದಾರಲ್ಲ?
* ಮಾಜಿ ಅರ್ಧಾಂಗಿಯ ಪ್ರಲಾಪ ಅಷ್ಟೇ.




ಬಹುಮಾನಿತ ಪ್ರಶ್ನೆ

ಟಿ.ಎಸ್. ಸ್ವಾಮಿ. ಬಳ್ಳಾರಿ
ವೀರಪ್ಪ ಮೊಯ್ಲಿ ಸುಳ್ಳಿನ ಸರದಾರ, ಎಚ್.ಡಿ. ಕುಮಾರಸ್ವಾಮಿ...?
* ಮುಳ್ಳಿನ ಹಾರ.

ಛೀ ತುಂಟಿ!

ತಾನು ಮಾಡುವ ವ್ಯಾಪಾರದಲ್ಲೆಲ್ಲಾ ಲಾಭ ಗಳಿಸುತ್ತಿದ್ದ ಶೆಟ್ಟಿಯೊಬ್ಬ ಪರಿಚಿತನಿಗೆ ಸಿಕ್ಕಿ, "ಓಯ್, ನನ್ನ ಹೆಂಡತಿ ಗರ್ಭಿಣಿ ಮಾರಾಯ, ಈಗಾಗಲೇ ಐದು ತಿಂಗಳಾಯ್ತು" ಎಂದ. ಅಚ್ಚರಿಗೊಂಡ ಸ್ನೇಹಿತ, "ಅದು ಹೇಗೆ ಮಾರಾಯ್ರೆ? ನೀವು ಮದುವೆಯಾಗಿ ನಾಲ್ಕು ತಿಂಗಳಾಯ್ತಲ್ಲ?" ಎಂದ.

ಶೆಟ್ಟಿ ಲಾಭ ಗಳಿಸಿದ ಗತ್ತಿನಲ್ಲಿ "ಹೌದು, ನನಗೆ ಇಲ್ಲೂ ಒಂದು ತಿಂಗಳು ಲಾಭ ಬಂತಲ್ಲ ಮಾರಾಯ್ರೆ?" ಎಂದ.



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಈ ವಾರದ ಪ್ರಶ್ನೆ:

ಪಾರ್ಟಿ ವಿತ್ ಡಿಫರೆನ್ಸ್ ಹಾಗೂ ಪಾರ್ಟಿ ಇನ್ ಡಿಫರೆನ್ಸ್ ವ್ಯತ್ಯಾಸವೇನು?

ಕಳೆದ ವಾರದ ಪ್ರಶ್ನೆ: ಅರ್ಜುನ, ಏಕಲವ್ಯರ ನಡುವೆ ಮೆರಿಟ್ ಸೀಟು ಯಾರದು, ಪೇಮೆಂಟ್ ಸೀಟು ಯಾರದು?

ಉತ್ತರ: ಅರ್ಜುನನಿಗೆ ಪೇಮೆಂಟ್ ಸೀಟು. ಏಕಲವ್ಯನಿಗೆ ಪನಿಶ್‌ಮೆಂಟ್ ಸೀಟು.


ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ. ಬಾಲಸ್ವಾಮಿ, ಬೆಂಗಳೂರು

ಬಿಜೆಪಿ Y2K ರಾದ್ಧಾಂತ

ಕರ್ನಾಟಕದ ಚಿಡ್ಡಿ ಚಿಂದಿಯಾಗುತ್ತಿದೆಯಾ? ಯಡಿಯೂರಪ್ಪ ಯತ್ನಾಳ್, ಕರಂದ್ಲಾಜೆ ಸುತ್ತ Y2K ರಾದ್ಧಾಂತವಂತೂ ನಡೆದಿದೆ.




ಅಧಿಕಾರವಿಲ್ಲದಿದ್ದಾಗ 'ಶೋಭಾಯಾತ್ರೆ' ಎಂದೆಲ್ಲ ಸಾರ್ವಜನಿಕ ನೆಮ್ಮದಿ ಕೆಡಿಸುತ್ತಲೇ ಬಂದಿರುವ ಈ ಬಿಜೆಪಿಗಳಿಗೆ ಅಧಿಕಾರ ಸಿಕ್ಕ ಮೇಲೆ ಯಡಿಯೂರಪ್ಪ ಆರಂಭಿಸಿದ ಹೊಸ 'ಶೋಭಾ'ಯಾತ್ರೆಯೇ ಪ್ರಮುಖ ಚರ್ಚೆಯ ವಿಷಯವಾಯ್ತೇ ವಿನಃ ಅವರು ಮಂಡಿಸಿದ ಸತ್ವರಹಿತ ಬಜೆಟ್ ಅಲ್ಲ! ವೃತ್ತಿ ಶಿಕ್ಷಣದ ಅವಕಾಶಗಳನ್ನೆಲ್ಲ ಮುಳುಗಿಸಿದ ಉನ್ನತ ಶಿಕ್ಷಣ ಸಚಿವ ಡಿ.ಎಚ್. ಶಂಕರಮೂರ್ತಿಯವರ ದೂರದೃಷ್ಟಿ ಇಲ್ಲದ, ಸಾಮಾಜಿಕ ಜವಾಬ್ದಾರಿಗಳಿಲ್ಲದ ಸಿಇಟಿ ಬಿಲ್ ಕುರಿತು ಅನಂತ್‌ಕುಮಾರ್ ಆಗಲಿ, ಸದ್ಯದ ಬಿಜಾಪುರದ ವೀರ ಯತ್ನಾಳರಾಗಲಿ ಮಾತಾಡಲೇ ಇಲ್ಲ.



"ನಿತ್ಯವೂ ಶಾಖಾ ಕಚೇರಿಗೆ ಬರುವ, ಸದಾ ಸಂಘದೊಂದಿಗೆ ಸಂಪರ್ಕದಲ್ಲಿರುವ ಸದಸ್ಯರೇ ನಿಜವಾದ ಸಂಘ ಪರಿವಾರದ ಸದಸ್ಯರು. ಸಂಘ ಪರಿವಾರದ ಸದಸ್ಯರೆಂದರೆ ಹಿತ್ತಾಳೆ ಪಾತ್ರೆ ಇದ್ದಂತೆ. ನಿತ್ಯ ಅದನ್ನು ತೊಳೆಯದಿದ್ದರೆ ಕಿಲುಬು ಹಿಡಿದುಬಿಡುತ್ತದೆ"

ಸಂಘ ಪರಿವಾರಿಗಳ ಪಾಲಿಗೆ ಆರಾಧ್ಯ ಗುರು. ಮಾನವಂತರ ಪಾಲಿಗೆ ವಿಷ ಜಂತು ಎನಿಸಿರುವ ಗುರೂಜಿ ಮೇಲಿನಂತೆ ನುಡಿದಿದ್ದನಂತೆ. ಬಹುಶಃ ಈ ಮಾತನ್ನು ಕಟ್ಟಾ ಸಂಘ ಪರಿವಾರಿಗಳು ಸದ್ಯದ ಬಿಜೆಪಿ ಕಿತ್ತಾಟವನ್ನು ಬಣ್ಣಿಸಲು ಬಳಸುತ್ತಾರೇನೋ? ಮೊದಲ ಬಾರಿಗೆ ರಾಜ್ಯದಲ್ಲಿ ಪವರ್ ಪಾಲಿಟಿಕ್ಸ್‌ನ ರುಚಿ ಕಂಡಿರುವ 'ಶಿಸ್ತಿನ' ಪಕ್ಷ ಬಿಜೆಪಿಯಲ್ಲೀಗ ಭಂಡ ಬಂಡಾಯ ಶುರುವಾಗಿದೆ.

ಉಪಮುಖ್ಯಮಂತ್ರಿಯಾಗಿ ಎಡವಟ್ಟುಗಳನ್ನು ಮಾಡುತ್ತಲೇ ಬಂದಿರುವ ಯಡಿಯೂರಪ್ಪರ ವಿರುದ್ಧ ಬಿಜಾಪುರದ ಸಂಸದ ಬಸನಗೌಡ ಪಾಟೀಲ್ ಯತ್ನಾಳ್ 'ಬಂಡಾಯ'ವೆದ್ದು ಬಿಜೆಪಿಯ ರಾಷ್ಟ್ರೀಯ ವರಿಷ್ಠರಿಗೆ ಸವಾಲು ಎಸೆಯುವ ಮೂಲಕ ರಾದ್ಧಾಂತ ಶುರುವಾಗಿದೆ. ಅನಂತ್‌ಕುಮಾರ್ ಬಣದವರಾಗಿ ಗುರುತಿಸಿಕೊಂಡು ಬಂದಿರುವ ಯತ್ನಾಳ್‌ರ ಬಂಡಾಯದ ಹಿಂದೆ ಅನಂತ್ ಗ್ಯಾಂಗ್‌ನ ಕೈವಾಡವಂತೂ ಇದ್ದೇ ಇದೆ. ಒಂದು ಕಡೆ ರಾಜ್ಯ ಬಿಜೆಪಿ ಯತ್ನಾಳ್ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಮಾತನ್ನಾಡುತ್ತಿದ್ದರೆ, ಇನ್ನೊಂದು ಕಡೆ ಅನಂತ್‌ಕುಮಾರ್ ಬಾಲ ಅರವಿಂದ ಲಿಂಬಾವಳಿ ಯಡಿಯೂರಪ್ಪನವರ ವಿರುದ್ಧ ದಾಳಿ ಮಾಡುತ್ತಲೇ ಇದ್ದಾರೆ. ಶಿಸ್ತಿನ ಅಧ್ಯಯನ, ದೂರದೃಷ್ಟಿ, ಆರ್ಥಿಕ ದೃಷ್ಟಿಕೋನಗಳಿಂದ ತುಂಬ ದೂರವೇ ಇರುವ ಅರ್ಥ ಮಂತ್ರಿ ಯಡಿಯೂರಪ್ಪ ಮಂಡಿಸಿದ ಅರ್ಥರಹಿತ ಬಜೆಟ್‌ಗೆ ಯಾವುದೇ ವಿರೋಧ ವ್ಯಕ್ತಪಡಿಸದೇ ತೆಪ್ಪಗಿದ್ದ ಬಿಜೆಪಿಯ ಬಂಡಾಯಗಾರರ ಸದ್ಯದ 'ಬಂಡಾಯ'ದ ಹಿಂದಿನ ಅಸಲಿ ಕಾರಣ ಅಧಿಕಾರಕ್ಕಾಗಿ ನಡೆಸುತ್ತಿರುವ ಕಿತ್ತಾಟವೇ ಹೌದು!



ಅನಂತ್‌ಕುಮಾರ್ ಮತ್ತು ಯಡಿಯೂರಪ್ಪ ಮಧ್ಯದ ಕಿತ್ತಾಟ ಆ ಕಾಲದಿಂದಲೂ ನಡೆದೇ ಇದೆ. ಇತ್ತೀಚಿನ ಎಲ್ಲ ಚುನಾವಣೆಗಳಲ್ಲೂ ತಾವೇ ಅಧಿಕಾರ ಹಿಡಿಯುತ್ತೇವೆ ಎಂಬ ಭ್ರಮೆಯಲ್ಲಿದ್ದ ಯಡಿಯೂರಪ್ಪ, ಅನಂತ್‌ಕುಮಾರ್‌ಗಳು ಕನಸಿನ ಮುಖ್ಯಮಂತ್ರಿ ಸ್ಥಾನಕ್ಕಾಗಿ ಆಂತರಿಕವಾಗಿ ಜಗಳಾಡಿಕೊಂಡೇ ಬಂದಿದ್ದಾರೆ. ಮೊದಲ ಬಾರಿ ಅರೆಬರೆ ಅಧಿಕಾರ ಸಿಕ್ಕು, ಯಡಿಯೂರಪ್ಪ ಉಪಮುಖ್ಯಮಂತ್ರಿ ಹುದ್ದೆಗೇರುವಾಗಲೇ ಅನಂತ್ ಬಣ ತನ್ನ ಕುತಂತ್ರ ಶುರು ಮಾಡಿಕೊಂಡು ಯಡಿಯೂರಪ್ಪನವರ ಬಹುದಿನದ ಕನಸಿಗೆ ಗ್ರಹಣ ಹಿಡಿಸಲು ಪ್ರಯತ್ನಿಸಿ ಸೋತಿತ್ತು. ಅಂದಿನಿಂದಲೇ ಸಚಿವ ಸ್ಥಾನಗಳಿಗಾಗಿ ಎರಡೂ ಬಣಗಳು ಪೈಪೋಟಿಗೆ ಬಿದ್ದಿದ್ದವು. ಒಟ್ಟಿನಲ್ಲಿ ಎಷ್ಟಾದರೂ ಅಧಿಕಾರ ಸಿಗಲಿ ಎಂದುಕೊಂಡ ಅನಂತ್ ಬಣ ಒಂದು ಮಟ್ಟದಲ್ಲಿ ರಾಜಿಯಾಗುತ್ತಲೇ ಬಂದಿತ್ತು.



ಕೇಸರಿಯ ಕಪ್ಪು ಬಾವುಟ!


ಮೇ 24 ರಂದು ತಮ್ಮ ಕರ್ಮ(ಕಾಂಡ) ಭೂಮಿ ಬಿಜಾಪುರದಿಂದಲೇ ಯಡಿಯೂರಪ್ಪನವರ 'ರಾಜಕೀಯ ಯಜಮಾನಿಕೆ' ವಿರುದ್ಧ 'ಬಂಡಾಯ'ವೆದ್ದ ಯತ್ನಾಳ್ "ಯಡಿಯೂರಪ್ಪನವರ ಸ್ವಾರ್ಥ ರಾಜಕಾರಣದಿಂದ ಪಕ್ಷ ಹಾಳಾಗುತ್ತಿದೆ. ಯಡಿಯೂರಪ್ಪ ಹಠಾವೋ ಚಳವಳಿ ಖಚಿತ. ಯಡಿಯೂರಪ್ಪ ಬಿಜಾಪುರಕ್ಕೆ ಬಂದರೆ ಕಪ್ಪು ಬಾವುಟ ಪ್ರದರ್ಶನ ಖಚಿತ" ಎಂದು ವೀರಾವೇಶದಿಂದ ಘೋಷಿಸಿದ ಕ್ಷಣದಿಂದ ನಮ್ಮ ದಿನಪತ್ರಿಕೆಗಳು ಇದೊಂದು ಮಹತ್ವದ ಘಟನೆ, ಸೈದ್ಧಾಂತಿಕ ಸಂಘರ್ಷವೆಂದು ಕಲ್ಪಿಸಿಕೊಂಡವರಂತೆ ದಿನಕ್ಕೊಂದು ಸುದ್ದಿಗಳನ್ನು ಪ್ಲಾಂಟ್ ಮಾಡುತ್ತಾ ಇನ್ನೇನು ಬಿಜೆಪಿ ಎರಡು ಹೋಳಾಯ್ತು ಎಂದು ಬರೆಯತೊಡಗಿಬಿಟ್ಟವೆ.

ಇದು ಎರಡೂ ಬಣಗಳ ನಡುವೆ ಅಧಿಕಾರಕ್ಕಾಗಿ ನಡೆದಿರುವ ಕಿತ್ತಾಟವೆಂಬುದು ಸ್ಪಷ್ಟವೇ ಇರುವುದರಿಂದ ಇಲ್ಲಿ ಯತ್ನಾಳರೂ ಹೀರೋ ಅಲ್ಲ, ಯಡಿಯೂರಪ್ಪನವರೂ ಹೀರೋ ಅಲ್ಲ... ಅನಂತ್‌ಕುಮಾರ್ ಹೀರೋ ಆಗಲು ಸಾಧ್ಯವೇ ಇಲ್ಲ ಅಲ್ಲವೇ?

ಪಿ.ಕೆ. ಮಲ್ಲನಗೌಡರ್

ಟಾರ್ಗೆಟ್ ಶೋಭಾ!

ಅಧಿಕಾರವಿಲ್ಲದಿದ್ದಾಗ 'ಶೋಭಾಯಾತ್ರೆ' ಎಂದೆಲ್ಲ ಸಾರ್ವಜನಿಕ ನೆಮ್ಮದಿ ಕೆಡಿಸುತ್ತಲೇ ಬಂದಿರುವ ಈ ಬಿಜೆಪಿಗಳಿಗೆ ಅಧಿಕಾರ ಸಿಕ್ಕ ಮೇಲೆ ಯಡಿಯೂರಪ್ಪ ಆರಂಭಿಸಿದ ಹೊಸ 'ಶೋಭಾ'ಯಾತ್ರೆಯೇ ಪ್ರಮುಖ ಚರ್ಚೆಯ ವಿಷಯವಾಯ್ತೇ ವಿನಃ ಅವರು ಮಂಡಿಸಿದ ಸತ್ವರಹಿತ ಬಜೆಟ್ ಅಲ್ಲ! ಹಾಗೆಯೇ ಕರ್ನಾಟಕದ ಯುವ ಜನತೆಯ ಕನಸಾದ ವೃತ್ತಿ ಶಿಕ್ಷಣದ ಅವಕಾಶಗಳನ್ನೆಲ್ಲ ಮುಳುಗಿಸಿ, ಖಾಸಗಿ ಕಾಲೇಜುಗಳ 'ಕಾಮೆಡ್-ಕೆ' ಕೂಟಕ್ಕೆ ಮಣೆ ಹಾಕಿದ ಉನ್ನತ ಶಿಕ್ಷಣ ಸಚಿವ ಡಿ.ಎಚ್. ಶಂಕರಮೂರ್ತಿಯವರ ದೂರದೃಷ್ಟಿ ಇಲ್ಲದ, ಸಾಮಾಜಿಕ ಜವಾಬ್ದಾರಿಗಳಿಲ್ಲದ ಸಿಇಟಿ ಬಿಲ್ ಕುರಿತು ಅನಂತ್‌ಕುಮಾರ್ ಆಗಲಿ, ಸದ್ಯದ ಬಿಜಾಪುರದ ವೀರ ಯತ್ನಾಳರಾಗಲಿ ಮಾತಾಡಲೇ ಇಲ್ಲ.




ಯಡಿಯೂರಪ್ಪ ಸೇರಿದಂತೆ ಯಾವ ಮಂತ್ರಿಯೂ ಒಂದಿಷ್ಟೂ ಕ್ರಿಯಾತ್ಮಕ ಯೋಚನೆ ಮಾಡದೇ, ಬರೀ ಪವರ್ ಪಾಲಿಟಿಕ್ಸ್‌ನ ರುಚಿ ಕಾಣುತ್ತಾ, ಅಧಿಕಾರ ಇದ್ದಷ್ಟು ದಿನ ಆಸ್ತಿ ಮಾಡಿಬಿಡೋಣ ಎಂದೇ ಎಣಿಸತೊಡಗಿದರು.

ಮೊದಲಿಂದ ಸಂಘ ಪರಿವಾರದ ಸಕ್ರಿಯ ಸದಸ್ಯಳಾಗಿದ್ದುಕೊಂಡು ಬಂದ ಹಿಂದುಳಿದ ವರ್ಗದ ಶೋಭಾ ಕರಂದ್ಲಾಜೆಯನ್ನು ಯಡಿಯೂರಪ್ಪ ಮಂತ್ರಿಣಿಯನ್ನಾಗಿ ಮಾಡುತ್ತಾರೆಂದು ಯಡಿಯೂರಪ್ಪ ವಿರುದ್ಧ ತಿರುಗಿ ಬಿದ್ದವರೆಲ್ಲರೂ ಯಡಿಯೂರಪ್ಪ, ಕರಂದ್ಲಾಜೆಯವರ ಸಂಬಂಧದ ಕುರಿತು ಮಾತಾಡಿ ಕೆಳಮಟ್ಟಕ್ಕಿಳಿದುಬಿಟ್ಟರು. ಪಕ್ಷಕ್ಕೆ ಮೊದಲಿಂದಲೂ ದುಡಿದವರನ್ನು ಕಡೆಗಣಿ... ತಮಗೆ ಆಪ್ತರಾದ ಕರಂದ್ಲಾಜೆಯವರಿಗೆ ಸಚಿವ ಸ್ಥಾ... ನೀಡುವ ಹುನ್ನಾರ ಮಾಡುತ್ತಿದ್ದಾರೆಂದು ಆರೋಪಿಸಿ... ಅನಂತ್ ಬಣ ಒಂದು ವಿಷಯವನ್ನು ಮರೆಮಾಚಿತು... ಈಗ ಸಚಿವರು, ಎಂಎಲ್‌ಸಿಗಳಾಗಿರುವವರ... ಬಹುತೇಕರು ಅಸಮರ್ಥರೇ ಆಗಿದ್ದಾರೆ ಎಂಬುದನ್ನು... ಸದಾ ಹಿಂಬಾಗಿಲ ಮೂಲಕವೇ ವಿಧಾನಸ... ಪ್ರವೇಶಿಸುತ್ತಾ ಬಂದು, ಈಗ ಸಚಿವರಾಗಿರುವ ವಿ.ಎಸ್... ಆಚಾರ್ಯ, ಡಿ.ಎಚ್. ಶಂಕರಮೂರ್ತಿ, ರಾಮಚಂದ್ರ... ಗೌಡರು ಎಂದೂ ತಳಮಟ್ಟದ ಕಾರ್ಯಕರ್ತರೊಂದಿ... ಬೆರೆತು ಪಾರ್ಟಿ ಕಟ್ಟುವ ಪ್ರಯತ್ನ ಮಾಡದೇ ಇರುವಾ... ಶೋಭಾ ಕರಂದ್ಲಾಜೆ ಮಹಿಳೆ ಎನ್ನುವ ಕಾರಣಕ್ಕೆ, ಯಡಿಯೂರಪ್ಪರಿಗೆ ಕ್ಲೋಸ್ ಎಂಬ ಕಾರಣಕ್ಕೆ ಸಂಬಂಧದ ಸುತ್ತ ಅಸಂಬದ್ಧವಾಗಿ ಮಾತಾಡುವ, ಶೋಭಾ ಕರಂದ್ಲಾಜೆ ಸಚಿವೆಯಾಗುವುದನ್ನು ವಿರೋಧಿಸುವ ನೈತಿಕ ಹಕ್ಕಾದರೂ ಯತ್ನಾಳರಂತಹ ಬಿಜೆಪಿಯ ಭಂಡರಿಗೆಲ್ಲಿದೆ? ಅಲ್ಪಾವಧಿಯಲ್ಲೇ ಎಂಎಲ್‌ಸಿಯಾಗಿ ಶೀಘ್ರ ಶ್ರೀಮಂತೆಯಾಗುವ ಕನಸಲ್ಲಿ ಆಸ್ತಿ, ಹಣ ಮಾಡುತ್ತಾ ನಡೆದಿರುವ ಶೋಭಾ ಕರಂದ್ಲಾಜೆ ಸಚಿವೆಯಾಗ... ವುದರಿಂದ ಕರ್ನಾಟಕಕ್ಕೇನೂ ಲಾಭವಾಗುವುದಿ... ಹಾಗೆಯೇ ಈಗಿರುವ ಬಿಜೆಪಿ ಮಂತ್ರಿಗಳಿಂದ ಜನರಿ... ಲಾಭವಾಗುವ ಮಾತಿರಲಿ, ನಷ್ಟವೇ ಹೆಚ್ಚಾಗುತ್ತಿದೆ...

ಅಂತ್ಯವೇ ಇಲ್ಲದ ಅನಂತನ ಅವಾಂತರ!

ಈಗ ಶೋಭಾ ಕರಂದ್ಲಾಜೆ ಪಕ್ಷಕ್ಕೇನು ಸೇವೆ ಸಲ್ಲಿಸಿದ್ದಾರೆ ಎನ್ನುವ ಅನಂತ್‌ಕುಮಾರರ ಬೆಂಬಲಿಗರು ಪಕ್ಷಕ್ಕೆ ಮಣ್ಣು ಹೊತ್ತವರ ಗತಿ ಏನಾಗಿದೆ ಎಂಬುದನ್ನು ಮರೆತವರಂತೆ ಆಡುತ್ತಿದ್ದಾರೆ.

ತನ್ನದೇ ಬ್ರಾಹ್ಮಣ ಕುಲದ ಸುರೇಶ್‌ಕುಮಾರರನ್ನು ಕುತಂತ್ರಗಳ ಮೂಲಕ ಹತ್ತಿಕ್ಕಿದ್ದು ಈ ಅನಂತಕುಮಾರರೇ. 1978 ರಲ್ಲೇ ಶಾಸಕರಾಗಿದ್ದ ಸುರೇಶ್‌ಕುಮಾರ್ ಒಟ್ಟು ಮೂರು ಬಾರಿ ಶಾಸಕರಾಗಿ ಆಯ್ಕೆಗೊಂಡು ಬಿಜೆಪಿಯಲ್ಲೂ ಸ್ವಲ್ಪ ಭಿನ್ನ ಕಾರ್ಯಶೈಲಿ ಅಳವಡಿಸಿಕೊಂಡಿದ್ದಾರಲ್ಲವೆ? ಈಗ ಸೋತಿರುವ ಅವರನ್ನು ಎಂಎಲ್‌ಸಿ ಮಾಡದಂತೆ ಅಡ್ಡಿ ಮಾಡುತ್ತಿರುವುದು ಇದೇ ಅನಂತ್‌ಕುಮಾರ್ ಎಂಬ ಸತ್ಯ ಬಿಜೆಪಿಗಳಿಗೆಲ್ಲ ಗೊತ್ತು. ಸಂಘ ಪರಿವಾರದ ಪ್ರಚಾರಕರಾಗಿ ಸೇವೆ ಸಲ್ಲಿಸುತ್ತಲೇ ಬೆಂಗಳೂರಿನಲ್ಲಿ ಬಿಜೆಪಿಯನ್ನು ಬೆಳೆಸಿದ ಸುರೇಶ್‌ಕುಮಾರ್‌ರನ್ನು ತುಳಿದ ಅನಂತ್ ಬಣದಲ್ಲಿರುವವರಾದರೂ ಎಂಥವರು? ಅನಂತ್‌ಕುಮಾರ್ ಪ್ರವಾಸೋದ್ಯಮ ಸಚಿವರಾಗಿದ್ದಾಗ ಫೈವ್‌ಸ್ಟಾರ್ ಅಶೋಕ ಹೋಟೆಲುಗಳಲ್ಲಿ ಪುಕ್ಕಟೆಯಾಗಿ ಐಷಾರಾಮಿ ಜೀವನ ಕಳೆದ ಅನಂತ್ ಬಣಕ್ಕೆ ವಕ್ತಾರನಂತಿರುವ ಅರವಿಂದ ಲಿಂಬಾವಳಿ ಪಕ್ಷಕ್ಕಾಗಿ ಮಾಡಿರುವುದೇನು? ಹಾಗೆಯೇ 'ಬ್ಲಾಕ್ ಬೆಲ್ಟ್' ಫಿನಾಯಿಲ್ ಸಿಂಪಡಿಸಿ, 'ಮಂಕಿಬ್ರಾಂಡಿ' ಪೊರಕೆ ಹಿಡಿದು ಹುಬ್ಬಳ್ಳಿಯನ್ನು ಗುಡಿಸಿ ಹಾಕಲು ಸಿದ್ಧನಾಗಿರುವ ಅನಂತ್ ಬಾಲ ಸಂಸದ ಪ್ರಹ್ಲಾದ ಜೋಷಿಯಂತವರೆಲ್ಲ ಮಿಂಚುವಂತಾಗಿ, ಸುರೇಶ್‌ಕುಮಾರ್ ತರಹದವರೆಲ್ಲ ಹಿಂದೆ ಕೂಡುವಂತಾಗಿದೆ.



ಅನಂತ್-ಯಡಿಯೂರಪ್ಪಗಳ ಅಧಿಕಾರ ದಾಹವೇ ಈಗಿನ ಈ ಟೆಂಪರರಿ ಕಿತ್ತಾಟಕ್ಕೆ ಕಾರಣವೆಂಬುದು ಜನಕ್ಕೆ ಗೊತ್ತಾಗಿ ಹೋಗಿಬಿಟ್ಟಿದೆ.

ಬಂಡಾಯವಲ್ಲ... ಸಂಧಾನವಷ್ಟೇ!

ಈಗ ಯತ್ನಾಳ್‌ರನ್ನು ಪಕ್ಷದಿಂದ ಹೊರಹಾಕುವ ಕುರಿತು ಚರ್ಚೆಯಾಗುತ್ತಿದೆ. ಖಂಡಿತ ಅದ್ಯಾವುದು ಆಗುವುದೇ ಇಲ್ಲ, ಏಕೆಂದ... ಇದು ಬಂಡಾಯವೇ ಅಲ್ಲ, ಅಧಿಕಾರವನ್ನು ಹಂಚ... ತಿನ್ನಲು ಸಂಧಾನವಷ್ಟೇ. ಅಧಿಕಾರಕ್ಕಾಗಿ ಯಡಿಯೂರಪ್ಪನವರೊಂದಿಗೆ ತಾತ್ಕಾಲಿಕ ರಾಜಿಯಾಗಿರುವ, ಎಂಎಲ್‌ಸಿ ಸ್ಥಾನಗಳಲ್ಲಿ ಫಿಫ್ಟಿ-ಫಿ... ಸೂತ್ರವನ್ನೇ ಒಪ್ಪಿಕೊಂಡಿರುವ ಅನಂತ್‌ಕುಮಾರ್ ಯತ್ನಾಳ್ ಮೂಲಕ ಒಂದು ಸಣ್ಣ ಬ್ಲ್ಯಾಕ್‌ಮೇಲ್ ಮಾಡಲು ಪ್ರಯತ್ನಿಸಿದ್ದಾರಷ್ಟೇ. ಯತ್ನಾಳ್ ಉಚ್ಚಾಟನೆಯಾಗದಂತೆ ಅನಂತ್‌ಕುಮಾರ್ ನೋಡಿಕೊಳ್ಳಲಿದ್ದಾರೆ ಎನ್ನುವುದ... ಅಷ್ಟೇ ಸತ್ಯ.

ಈ ಜನಕಂಟಕ ಸರ್ಕಾರದಲ್ಲಿ ಪಾಲುದಾರರಾಗಿರುವ ಬಿಜೆಪಿ-ಜೆಡಿಎಸ್‌ಗಳಲ್ಲಿ ಎಲ್ಲರೂ ಸಿಕ್ಕಷ್ಟು ಅಧಿಕಾರ ಅನುಭವಿಸಲು ಕಾಯುತ್ತಿದ್ದಾರಷ್ಟೇ.

ಜೆಡಿಎಸ್ ಗೂಂಡಾಗಳು!

ಖುದ್ದು ದೇವೇಗೌಡ, ಎಂ.ಪಿ. ಪ್ರಕಾಶರೇ ಹೋಗಿ ವರ್ತೂರು ಕ್ಷೇತ್ರದಲ್ಲಿನ, ಎಚ್‌ಎಎಲ್‌ಗೆ ಹತ್ತಿಕೊಂಡೇ ಇರುವ ಇಸ್ಲಾಂಪುರದ ಜೆಡಿ(ಎಸ್)ನ ಹೊಸ ಕಚೇರಿ ಉದ್ಘಾಟಿಸಿ ಬಂದಿದ್ದಾರೆ. ಆ ಕಚೇರಿಯೇ ಅಕ್ರಮ ಕಟ್ಟಡ ಎಂದು ಎಂ.ಪಿ. ಪ್ರಕಾಶ್‌ಗೆ ನೊಂದವರು ಪತ್ರ ಬರೆದರೂ, ರಾಜ್ಯಾಧ್ಯಕ್ಷ ಪ್ರಕಾಶ್ ಉದ್ಘಾಟನೆ ಮಾಡಿಯೇ ಬಂದಿದ್ದಾರೆ. ಇಸ್ಲಾಂಪುರದ ಜೆಡಿಎಸ್ ತುಂಬಾ ಬರೀ ರೌಡಿಗಳೇ ತುಂಬಿರುವಾಗ ಇನ್ನೆಲ್ಲಿಯ ನ್ಯಾಯದ ಮಾತು?



ಸಯ್ಯದ್ ಸಿರಾಜ್ ಪಾಷಾ

ಇಲ್ಲಿ ಜೆಡಿಎಸ್‌ನ ಗೂಂಡಾಗಳನ್ನು ಪ್ರಶ್ನಿಸಿದರೆ ಒದೆ ಬೀಳುತ್ತವೆ. ತನ್ನ ಜಾಗವನ್ನು ಯಾವನೋ ಆಕ್ರಮಿಸಿಕೊಂಡು ಕಟ್ಟಡ ಕಟ್ಟಿದ್ದನ್ನು ಎಚ್‌ಎಎಲ್ ಸುಮ್ಮನೆ ನೋಡುತ್ತಾ ಕುಳಿತುಕೊಂಡಿದೆ. ಎಚ್‌ಎಎಲ್‌ನಿಂದ ಆ ಜಾಗವನ್ನು ಬಾಡಿಗೆಗೆ ಪಡೆದು ಅಲ್ಲಿ ಸೌದೆ ವ್ಯಾಪಾರ ಮಾಡುತ್ತಿದ್ದ ಸಯ್ಯದ್ ಸಿರಾಜ್ ಪಾಷಾ ಜೆಡಿಎಸ್‌ನ ಗೂಂಡಾಗಳನ್ನು ಪ್ರಶ್ನಿಸಿದ್ದಕ್ಕೆ ಮಾರಣಾಂತಿಕ ಪೆಟ್ಟುಗಳಿಂದ ನರಳಬೇಕಾಗಿದೆ. ಇಷ್ಟಕ್ಕೆಲ್ಲ ಕಾರಣನಾಗಿರುವ ಜೆಡಿಎಸ್ ರೌಡಿಯ ಹೆಸರು ಫಯಾಜ್! ಇವನ ಮಹಾಗೂಂಡಾ ಸಹೋದರ ಫೈರೋಜ್ ಹಾವಳಿಗೆ ಇಡೀ ಇಸ್ಲಾಂಪುರವೇ ತತ್ತರಿಸಿ ಹೋಗುತ್ತಿದೆ. ಜೆಡಿಎಸ್‌ಗೆ ಅಂಟಿಕೊಂಡಿರುವ ಫಯಾಜ್‌ನಿಗೆ ಗಿರಿಜಮ್ಮ, ಸಯ್ಯದ್ ಜಿನ್ನಾ ಎಂಬ ದಳವಾಯಿಗಳ ಭೀಕರ ಸಪೋರ್ಟು ಉಂಟು.

1993 ರಲ್ಲಿ ಎಚ್.ಎ.ಎಲ್.ನವರು ಪಕ್ಕದ ತಮ್ಮ ಜಾಗವನ್ನು ಹಲವಾರು ಜನರಿಗೆ ಬಾಡಿಗೆ ಆಧಾರದ ಮೇಲೆ ನೀಡಿ ಅಲ್ಲಿ ತಾತ್ಕಾಲಿಕ ಶಾಪ್‌ಗಳನ್ನು ತೆರೆಯಲು ಬಿಟ್ಟಿದ್ದರು. ಸಯ್ಯದ್ ಅಮೀರ್ ಎಂಬುವವರಿಗೂ ಅಲ್ಲಿ ಸೌದೆ ವ್ಯಾಪಾರಕ್ಕೆ ಅನುಮತಿ ನೀಡಲಾಗಿತ್ತು, **1999** ರಲ್ಲಿ ಸಯ್ಯದ್ ಅಮೀರ್ ತೀರಿಕೊಂಡ ಮೇಲೆ ಮಕ್ಕಳಾದ ಸಯ್ಯದ್ ಸಿರಾಜ್ ಪಾಷಾ, ಸಯ್ಯದ್ ರಹಮಾನ್ ಪಾಷಾಗಳು ಸೌದೆ ವ್ಯವಹಾರವನ್ನು ಮುಂದುವರೆಸಿಕೊಂಡು ಬಂದರು. ಕಳೆದ ವರ್ಷ ಆ ಜಾಗದ ಮೇಲೆ ಫೈರೋಜ್ ಕಣ್ಣು ಬಿದ್ದಿದ್ದೇ ತಡ, ಸಿರಾಜ್ ಕುಟುಂಬಕ್ಕೆ ತೊಂದರೆ ಕೊಡಲಾರಂಭಿಸಿದ. ಇತ್ತೀಚೆಗೆ ಈ ಗೂಂಡಾಗಳ ಕಾಟ ಅತಿಯಾದಾಗ, ಏರಿಯಾದ ನಗರಸಭೆ ಸದಸ್ಯೆ ಹಸೀನಾಬೇಗಂ ಸಹಾಯದಿಂದ ಕೋರ್ಟ್‌ಗೆ ಹೋದ ಸಿರಾಜ್ ಕುಟುಂಬಕ್ಕೆ ಕೋರ್ಟ್‌ನಿಂದ ಒಂದಿಷ್ಟು ನೆಮ್ಮದಿ ಸಿಕ್ಕಿತ್ತು. ಆದರೆ ಕೋರ್ಟ್ ಆದೇಶ ಪಾಲಿಸದ ಪೋಲೀಸ್ ಇನ್ಸ್‌ಪೆಕ್ಟರ್ ಉಮೇಶ್ ಮಾತ್ರ ಫೈರೋಜ್, ಫಯಾಜ್‌ಗಳ ಜೊತೆ ನಿಂತುಬಿಟ್ಟ.



ಇಸ್ಲಾಂಪುರದ ಜೆಡಿಎಸ್ ಕಚೇರಿ ಉದ್ಘಾಟನೆಯಲ್ಲಿ ದೇವೇಗೌಡರು

ಅಲ್ಲಿ ಯಾವ ಪರ್ಮನೆಂಟ್ ಕಟ್ಟಡ ಕಟ್ಟದಂತೆ ತಡೆಯಬೇಕಾಗಿದ್ದ ಪೋಲೀಸರು, ಎಚ್.ಎ.ಎಲ್.ನವರು ಸುಮ್ಮನೆ ಕುಳಿತಿದ್ದರಿಂದ, ಫೈರೋಜ್, ಫಯಾಜ್‌ಗಳು ಆ ಜಾಗದಲ್ಲಿ ಒಂದು ಕಟ್ಟಡ ಎಬ್ಬಿಸಿ ಟೋಪಿ ಸ್ಕೀಂ ವ್ಯವಹಾರಗಳನ್ನು ಆರಂಭಿಸಿಬಿಟ್ಟರು. ಪ್ರತಿಭಟಿಸಿದ ಸಿರಾಜ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಫೈರೋಜ್, ಫಯಾಜ್‌ಗಳು ಸಿರಾಜ್ ಅಕ್ಕ ಸಲೀಮಾಜಾನ್ ಮೇಲೂ ಹಲ್ಲೆ ನಡೆಸಿದರು. ದೂರು ಸ್ವೀಕರಿಸಿದ ಪೋಲೀಸರು ಫೈರೋಜ್, ಫಯಾಜ್‌ಗಳ ಪರವೇ ನಿಲ್ಲುತ್ತಿದ್ದಾರೆ. ಜೆಡಿಎಸ್‌ನ ಆಡಳಿತವೇ ಇರುವಾಗ ಈ ಗೂಂಡಾಗಳಿಗೆ ಭಯ ಇಲ್ಲ.

ಎಚ್.ಎ.ಎಲ್.ನಲ್ಲಿ ಡ್ರೈವರ್ ಆಗಿರುವ ಫಯಾಜ್‌ಖಾನ್ ಕೆಲಸ ಮಾಡದೇ ಸಂಬಳ ಪಡೆಯುತ್ತಾ ಜೆಡಿಎಸ್ ಹೆಸರಲ್ಲಿ ಜನಸಾಮಾನ್ಯರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾನೆ. ಹಿಂದೊಮ್ಮೆ ಈ ಫೈರೋಜ್, ಫಯಾಜ್‌ಗಳು ಗಂಧದ ಎಣ್ಣೆಯ ಅಕ್ರಮ ಮಾರಾಟದ ಕೇಸಲ್ಲಿ ಸಿಕ್ಕು ಪಾರಾಗಿದ್ದಾರೆ. ನೋಬೆಲ್ ಸಮಾಜ ಸುಧಾರಕ ಸಂಘದ ಹೆಸರಲ್ಲಿ ಜನರ ದರೋಡೆ ನಡೆಸಿರುವ ಈ ಸಹೋದರರು ಹಿಂದೊಮ್ಮೆ ಖುರ್ಷಿದ್ ಅಲಾಂ ಎಂಬುವವರ ಜಾಗ ಹೊಡೆದು ಅವರ ಮೇಲೂ ಹಲ್ಲೆ ಮಾಡಿ, ಅವರನ್ನೇ ಜೈಲಿಗೆ ಹಾಕಿಸಿದ್ದರು. ಬಾಂಬ್ ನಾಗ, ಮಾರಿಮುತ್ತು, ಚಕ್ರಪಾಣಿಗಳಂತಹ ಕ್ರಿಮಿಗಳನ್ನು ಬೆಳೆಸಿದ ದೇವೇಗೌಡರಿಗೆ ಫೈರೋಜ್, ಫಯಾಜ್‌ಗಳಂತಹವರೆಲ್ಲ ಬೇಕೆ ಬೇಕಲ್ಲವೆ? ಹೋಗಲಿ ಎಂ.ಪಿ. ಪ್ರಕಾಶ್‌ಗಾದರೂ ಬುದ್ಧಿ ಬೇಡವಾ? ಕುಮಾರಸ್ವಾಮಿ ಬಿಡಿ, ಆತನ ಹಿಂದಿರುವವರೆಲ್ಲಾ ರೌಡಿ ಕುಲದವರೇ.... ದೇವೇಗೌಡರು ಈಗಲಾದರೂ ಬಡ ಸಿರಾಜ್ ಕುಟುಂಬದ ನೆರವಿಗೆ ಬರಲಾರರೆ? ಅಥವಾ ಚೆಡ್ಡಿಗಳ ಸಂಘ ಈ ಅಸಹಾಯಕ ಮುಸ್ಲಿಮನ ವ್ಯಥೆಗೆ ಕುರುಡಾಗಿಸಿದೆಯೇ?

-ವರದಿಗಾರ

ಪತ್ರಿಕೋದ್ಯಮ ಬ್ಯುಸಿನೆಸ್ ಅಲ್ಲ...

(3ನೇ ಪುಟದಿಂದ)



ಪ್ರಮುಖ ವಿಷಯದ ಬಗ್ಗೆ ಅಭಿಪ್ರಾಯ, ಅಧ್ಯಯನ, ಅನುಭವವನ್ನು ವಿನಿಮಯ ಮಾಡಿಕೊಳ್ಳಲು ಬಂದಿದ್ದರು.

ಜಾಫೆಟ್‌ರವರು 'ಖಾಸಗಿ ವಲಯದಲ್ಲಿ ಮೀಸಲಾತಿ', ಹೊನ್ನಾಪುರವವರು 'ಮೆರಿಟ್ ಎಂಬ ಮಿಥ್ಯೆ' ಮತ್ತು ಶಿವಸುಂದರ್‌ರವರು 'ಮೀಸಲಾತಿ ಮತ್ತು ರಾಜಕೀಯ' ಕುರಿತು ಮಾತನಾಡಿದ ನಂತರ ಮರುಳಸಿದ್ಧಪ್ಪ, ಕಿ.ರಂ, ರಾಜಪ್ಪ ದಳವಾಯಿ, ಶಿವಲಿಂಗಮ್, ನಮ್ಮ ಮಲ್ಲನಗೌಡರ್ ಎಲ್ಲರೂ ವಿಷಯದ ವಿವಿಧ ಆಯಾಮಗಳ ಬಗ್ಗೆ ಮಾತನಾಡಿದರು. ಇದನ್ನು ಕುರಿತು ಈ ಸಂಚಿಕೆಯಲ್ಲಿ ನಮ್ಮ ಹುಲಿಕುಂಟೆ ಮೂರ್ತಿಯವರು ಪ್ರತ್ಯೇಕವಾಗಿ ಬರೆದಿದ್ದಾರೆ.

ಅಪ್ಪನ 'ಸಂವೇದನೆ'ಗೆ ಮರುಚಾಲನೆ ಕೊಟ್ಟ ಎಲ್ಲರಿಗೂ ಧನ್ಯವಾದಗಳು. ಈ ಚರ್ಚಾ ಕಾರ್ಯಕ್ರಮವನ್ನು ಹೀಗೇ ಮುಂದುವರಿಸುವ ಆಶಯ ಹೊಂದಿರುವ ನಮಗೆ ನಿಮ್ಮ ಪ್ರೋತ್ಸಾಹ, ಬೆಂಬಲ ಇದ್ದೇ ಇರುತ್ತದೆ ಎಂದು ನಂಬಿದ್ದೇನೆ.

ಯಾಕೆಂದರೆ 'ಪತ್ರಿಕೆ' ಎಂಬುದು ಒಂದು ಸ್ಥಾವರ ಸಂಸ್ಥೆ ಆಗಕೂಡದು. ಅದು ಸದಾ ತನ್ನ ಓದುಗರೊಂದಿಗೆ, ಹಿತೈಷಿಗಳೊಂದಿಗೆ, ಸಮಾನ ಮನಸ್ಕರೊಂದಿಗೆ ಜೀವಂತ ಒಡನಾಟ ಇಟ್ಟುಕೊಂಡಾಗಲೇ 'ಪತ್ರಿಕೆ' ಮತ್ತು ಸಮಾಜ ಪ್ರಗತಿಯನ್ನು ಕಾಣಲು ಸಾಧ್ಯ.

'ಸಂವೇದನೆ' ಆ ದಿಕ್ಕಿನತ್ತ ಒಂದು ಹೆಜ್ಜೆ...

-ಗೌರಿ ಲಂಕೇಶ್

ನಾನು ಪಾಪಿ ಇರಬಹುದು ಆದರೆ ನನಗಾಗಿ ಪಾಪ ಮಾಡಿಲ್ಲ...



ಈ ಭವ್ಯ ಭಾರತದ ಭಾವಿ ಪ್ರಧಾನಿಯಾಗಿದ್ದ ಪ್ರಮೋದ್ ಮಹಾಜನ್ ನಮ್ಮ ಎಡೂರಪ್ಪನ ಭಾಗಕ್ಕೆ ತೊಣಚಿಯಾಗಿರುವ ಅನಂತಕುಮಾರನ ಆಪ್ತರಲ್ಲಿ ಆಪ್ತನಾಗಿದ್ದನಂತಲ್ಲಾ, ಈ ಇಬ್ಬರೂ ಪ್ರಥಮವಾಗಿ ಲೋಕಸಭೆಗೆ ಆರಿಸಿ ಹೋದ ಖುಷಿಯಲ್ಲಿ ಸಂಸತ್ ಭವನದ ಹೊರಗೆ ನಿಂತು, "ಈ ದೇಶದ ಪ್ರಜಾಪ್ರಭುತ್ವದ ಮಹಾಮಂದಿರ ವಿದು. ಇದರೊಳಕ್ಕೆ ಪ್ರವೇಶ ಪಡೆದಿರುವ ನಾವು ನಮ್ಮನ್ನು ನಂಬಿ ಕಳಿಸಿರುವ ಸಾಮಾನ್ಯ ಮತದಾರನಿಗೆ ವಂಚನೆ ಎಸಗದೆ ಕಾಯಾವಾಚಾ ಮನಸಾ ಶ್ರಮಿಸಬೇಕು" ಎಂದು ಶಪಥ ಮಾಡಿದ್ದರಂತಲ್ಲಾ, ಇಂತಹ ಪ್ರಜಾಸೇವಕರು ಒಂದೇ ಅವಧಿ ಮಂತ್ರಿಗಿರಿಗೆ ಮಾಡಿಕೊಂಡಿದ್ದ ಹಣವೆಷ್ಟು ಗೊತ್ತೆ? ಶಿಕ್ಷಕನಾಗಿ ಲಾಟ ಬೀಸುತ್ತಿದ್ದ ಪ್ರಮೋದ್ ಮಹಾಜನ್ ಕೇವಲ ಎರಡು ಸಾವಿರ ಕೋಟಿ. ಇನ್ನು ಸೈಕಲ್ ತುಳಿಯುತ್ತಿದ್ದ ಅನಂತಕುಮಾರ್ **14,500** ಕೋಟಿ, ರೂ.ಗಳ ಅನಧಿಕೃತ ಸಾಲ ಬಿಡುಗಡೆ ಮಾಡಿದ್ದಕ್ಕಾಗಿ ನೋಟೀಸ್ ಪಡೆದಿದ್ದರಂತಲ್ಲಾ, "ಇಂತಹ ಮಹಾನ್ ದೇಶಭಕ್ತರು ಇನ್ನೇನಾದರೂ ಕಾಂಗ್ರೆಗಳಂತೆ ಹದಿನೈದು ಇಪ್ಪತ್ತು ವರ್ಷಗಳ ಕಾಲ ಮಂತ್ರಿಯಾಗಿದ್ದರೆ ಗತಿಯೇನು?" ಎಂದು ಸದ್ಯಕ್ಕೆ ಸಿಕ್ಕಸಿಕ್ಕ ಖಾಲಿ ಸೈಟುಗಳನ್ನು ಕೊಳ್ಳುತ್ತಿರುವ ಎಡೂರಪ್ಪನ ಕಡೆಯ ಚಿಲ್ಲರೆ ರಾಜಕಾರಣಿಗಳು ಅದಿಕೊಂಡು ಅಂದುಬದಿದುಕೊಳ್ಳುತ್ತಿವೆಯಂತಲ್ಲಾ, ಥೂತ್ತೇರಿ!


* * * * * * * * * * * *

ನೋಡಿದ ಕೂಡಲೇ ಬುದ್ಧಿಮಾಂದ್ಯನಂತೆ ಗೋಚರಿಸುವ ರವಿಶಂಕರ್ ಎಂಬ ಗುರೂಜಿ ಮೀಸಲಾತಿ ವಿಷಯದಲ್ಲಿ ಮೂತಿ ತೂರಿಸಿದೆಯಂತಲ್ಲಾ, ಕೆಳಜಾತಿಯಲ್ಲಿ ಹುಟ್ಟುವುದು ಶಾಪವಲ್ಲ ಎಂಬ ದಿವ್ಯಜ್ಞಾನದ ಸಂದೇಶ ನೀಡಿರುವ ಈತ, "ಜಾತಿ ಆಧಾರದಲ್ಲಿ ಮೀಸಲು ಬೇಡ. ದೇಶವೇ ವಿಭಜನೆಯಾಗುತ್ತದೆ" ಎಂದು ಹೆದರಿ ಕುಳಿತಿದ್ದಾನಂತಲ್ಲಾ, ಈತನಿಗೆ ಮೀಸಲಾತಿ ಎಂದರೆ ಏನು, ಅದು ಸಂಭವಿಸಲು ಕಾರಣವೇನು, ಸಮಾಜದಲ್ಲಿ ಸಮಾನತೆ ಸೃಷ್ಟಿಸಲು ಏನು ಮಾಡಬೇಕು, ಐವತ್ತಾರು ವರ್ಷಗಳ ಕಾಲ ಮೀಸಲು ನೀಡಿದರೂ ಮೀಸಲಿಗೆ ಒಳಪಡುವ ಪಕ್ಷ, ಜಾತಿಗಳನ್ನು ಬದುಕಿವೆ ಎಂಬುದು ಈತನಿಗೆ ಗೊತ್ತೆ? ಗೊತ್ತಿಲ್ಲದಿದ್ದರೆ, ಒಳ್ಳೆ ಮೀಸಲಾತಿ ಕುರಿತು ಮಾತನಾಡುವವರು ಈತನಿಗೂ ಒಂದು ಪತ್ರ ಬರೆದರೆ ಒಳ್ಳೆಯದೆಂದು ಅಹಿಂದ ಸಂಘಟಕರು ದೇವೇಗೌಡರಿಗೆ ಸೂಚಿಸಲಿದ್ದಾರಂತಲ್ಲಾ. "ದೇವೇಗೌಡರಿಗೇ ಏಕೆ ಹೇಳಬೇಕು, ನೀವೆ ಹೇಳಿದರಾಗದೆ?" ಎಂದು ಕೇಳಿದರೆ "ರವಿಶಂಕರನಂಥವರನ್ನು ನೋಡಿದ ಕೂಡಲೇ ದೇವೇಗೌಡರ ಕೈಗಳು ಅವರ ಪಾದ ಹುಡುಕುವುದರಿಂದ ಅವರೇ ಸೂಕ್ತ" ಎಂದು ಅಣಕಿಸಿದವಂತಲ್ಲಾ, ಥೂತ್ತೇರಿ!!

* * * * * * * * * * * *

ಶಿವಮೊಗ್ಗ ಪ್ರಾಂತ್ಯದ ರಾಮಚಂದ್ರಾಪುರ ಮಠದ ರಾಘವೇಶ್ವರನೆಂಬ ಒನಪು ಒಯ್ಯಾರದ ಸ್ವಾಮಿಗಾಗಲೇ ತಾನು ಯಜ್ಞಕುಂಡಕ್ಕೆ ಸುರಿದ ತುಪ್ಪದ ರಿಜಲ್ಟು ಸಿಕ್ಕಿದೆಯಂತಲ್ಲಾ. ಕ್ವಿಂಟಾಲ್ ಗಟ್ಟಲೆ ಬೆಂಕಿಗೆ ಸುರಿದ ತುಪ್ಪದ ಹೊಗೆಯಿಂದ ಈಗಾಗಲೇ ಅಲ್ಲಿನ ರೋಗಿಗಳ ಮುಖದಲ್ಲಿ ಮಂದಹಾಸ ಕಂಡಿದೆಯಂತೆ. ಹೈ ಬಿ.ಪಿ.ಯಿದ್ದವರಿಗೆ ನಾರ್ಮಲ್ಲಾಗಿದೆಯಂತೆ. ಶುಗರ್ ಪೇಷಂಟುಗಳಂತೂ ಅಲ್ಲಿಗೆ ಬಂದು ಅಲ್ಲಲ್ಲೇ ಕುಸಿಯುತ್ತಿದ್ದಾರಂತೆ. ಇನ್ನ ಒಣ ಮರಕ್ಕೆ ಗರಗಸ ಹಿಡಿದ ಶಬ್ದ ಮಾಡುತ್ತಿದ್ದ ಗೂರ್ಲು ಜನ ಸೌಂಡ್‌ಲೆಸ್ ಆಗಿದ್ದಾರಂತೆ. ಪಶು, ಪಕ್ಷಿ, ಪ್ರಾಣಿಗಳೆಲ್ಲಾ ತಮ್ಮ ಎಂದಿನ ಚಟುವಟಿಕೆ ನಿಲ್ಲಿಸಿ ಮನುಷ್ಯರೊಡನೆ ಸ್ನೇಹ ಬೆಳೆಸಲು ಹಾತೊರೆಯುತ್ತಿವೆಯಂತೆ. ದನಗಳು ಮಾತ್ರ ಸಾಬರನ್ನು ಕಂಡರೆ ದ್ವೇಷದಿಂದ ನೋಡುವುದನ್ನು ಬಿಟ್ಟರೆ, ರಾಮಚಂದ್ರಾಪುರದ ಮಠದ ಏರಿಯ ಇಂದ್ರನ ವನದಂತೆ ಅನಿರ್ವಚನೀಯ ಅನುಭವ ನೀಡುತ್ತಿದೆಯಂತೆ ಎಂದು ಹವ್ಯಕರಲ್ಲದವರೇ ಕೊಂಡಾಡುತ್ತಿದ್ದಾರಂತಲ್ಲಾ, ಸದರೀ ಸ್ವಾಮಿಯ ಕ್ರಾಂತಿಕಾರಿ ಚಟುವಟಿಕೆ ದೆಸೆಯಿಂದ ಆಸ್ಪತ್ರೆಗಳು, ಖಾಸಗಿ ಶಾಪುಗಳು ನೊಣ ಹೊಡೆಯುವಂ ತಾದರೆ ಗತಿಯೇನೆಂದು ವೈದ್ಯಕೀಯ ಲೋಕದ ಧನ್ವಂತರಿಗಳು ಚಿಂತಾಕ್ರಾಂತರಾಗಿದ್ದಾರಂತಲ್ಲಾ, ಥೂತ್ತೇರಿ!!

* * * * * * * * * * * * *



ಕನ್ನಡ ಚಿತ್ರರಂಗ ಪ್ರಣಯ ದೃಶ್ಯಗಳ ಬರದಿಂದ ತತ್ತರಿಸುತ್ತಿದ್ದಾಗ, ದಿಢೀರನೆ ತಲೆಗೆ ವಿಗ್ ಏರಿಸಿಕೊಂಡು, ಸೊಂಟವಿಲ್ಲದ ಸೊಂಟದ ಮೇಲೆ ನಿಲ್ಲದ ಪ್ಯಾಂಟ್ ಎಳೆಯುತ್ತಾ, ಹೊಸದಾಗಿ ನಡಿಗೆ ಕಲಿತವನಂತೆ ಬಂದ ಶ್ರೀನಾಥನನ್ನು ನೋಡಿದ ಗತಿಗೆಟ್ಟ ಪ್ರೇಕ್ಷಕರು, "ವಾಹ್ ಇವ್ರನಪ್ಪ ಪ್ರಣಯ ರಾಜ" ಎಂಬ ಬಿರುದನ್ನು ಕೊಟ್ಟೇಬಿಟ್ಟರಂತಲ್ಲಾ, ಈ ಪ್ರಣಯರಾಜ ಯಾವ ಚಿತ್ರದಲ್ಲಿ ಪ್ರಣಯಭರಿತನಾಗಿ ನಟಿಸಿದ್ದಾನೆ ಎಂದು ನೋಡಿದರೆ, ಇಡೀ ದೇಹದಲ್ಲಿ ಪ್ರಣಯ ಭರ್ತಿಯಾಗಿತ್ತೆ ಹೊರತು ಅದು ಪ್ರಕಟವಾಗದೆ ಏದುಸಿರು ಬಿಡುತ್ತಿರುವ ಚಿತ್ರಗಳೇ ಸಾಲುಗಟ್ಟಿ ಬಂದವಂತಲ್ಲಾ, ಆದರೂ ನಿರಾಶೆಗೊಳ್ಳದ ಪ್ರಣಯಪಂಡಿತರು "ನಮ್ಮ ಶ್ರೀನಾಥ್ ಪ್ರಣಯಿಯು ಆಗಿರಬಹುದು. ಆದರೂ ಪ್ರಣಯ ದೃಶ್ಯಗಳಲ್ಲಾತ ಗಜಗಾಂಭೀರ್ಯದಿಂದ ನಟಿಸುತ್ತಾನಾದ್ದರಿಂದ ಆ ಬಿರುದು ಸಾರ್ಥಕವಾಗಿದೆ" ಎಂದು ಕೊಂಡಾಡಿದ ಚೆಡ್ಡಿಗಳು, ಕಡೆಗೂ ಆತನನ್ನು ತಮ್ಮ ಪಾರ್ಟಿಗೆ ಸೇರಿಸಿಕೊಂಡು, ದೊಡ್ಡದಾದ ಚೆಡ್ಡಿ ಹೊಲಿಸಿ, ಒನಕೆ ಗಾತ್ರದ ಲಾಟಿ ಕೊಟ್ಟಿದ್ದರಂತಲ್ಲಾ, ಶ್ರೀನಾಥ್ ಸದರಿ ಸಾಮಗ್ರಿಯನ್ನು ತುಂಬ ಗೌರವಯುತವಾಗಿ ಕಾಪಾಡಿಕೊಂಡು ಬಂದ ಫಲವಾಗಿ ಈಗ ವಿಧಾನ ಪರಿಷತ್ತಿಗೂ ನಾಮಕರಣ ಮಾಡಿ ಕೃತಾರ್ಥಗೊಂಡವಂತಲ್ಲಾ, ಥೂತ್ತೇರಿ!!

* * * * * * * * * * * *

ಈ ನಡುವೆ ನಾಡಗೌಡನ ಮನೆಯ ನಾಯಿಗೂ ಬೆಲೆ ಬರುವಂತೆ ದೇವೇಗೌಡರ ಮನೆಬಾಗಿಲಲ್ಲಿದ್ದ ದತ್ತನಿಗೂ ಒಂದು ಪೀಠ ಪ್ರಾಪ್ತಿಯಾಯ್ತಂತಲ್ಲಾ. ಸಡನ್ನಂತ ನೋಡಿದರೆ ಪ್ರಮೋದ್ ಮಹಾಜನ್‌ನ ತಮ್ಮನಂತೆ ಕಾಣುವ ದತ್ತ ತನಗೆ ಪ್ರಾಪ್ತಿಯಾದ ಪರಿಷತ್ ಪೀಠದಿಂದ ಪುಲಕಿತನಾಗಿ "ನನ್ನ ಆಯ್ಕೆಯಿಂದ ನಾಡಿನ ಮೂಲೆಮೂಲೆಯಲ್ಲಿರುವ ನಮ್ಮವರೆಲ್ಲಾ ಖುಷಿಯಾಗಿದ್ದಾರೆ. ಆದರೆ ನಮ್ಮವರಲ್ಲದವರು ಅಸೂಯೆಗೊಂಡು ಆರೋಪಗಳನ್ನು ಮಾಡುತ್ತಿದ್ದಾರೆ" ಎಂದು ಭಾವುಕನಾದನಂತಲ್ಲಾ, "ಪ್ರತಿಯೊಬ್ಬ ಸಂತನಿಗೂ ಒಂದು ಹಿನ್ನೆಲೆಯಿರುತ್ತದೆ. ಹಾಗೆಯೇ ಪಾಪಿಗೂ ಸಹ ಒಂದು ಹಿನ್ನೆಲೆಯಿರುತ್ತದೆ. ಸಂತನಿಗೆ ಮುಕ್ತಿ ಸಿಕ್ಕರೆ, ಪಾಪಿಗೆ ಸ್ಥಾನ ಸಿಗುತ್ತದೆ. ಹಾಗೆಯೇ ನನಗೂ ಒಂದು ಸ್ಥಾನ ಪ್ರಾಪ್ತಿಯಾಗಿದೆ. ನಾನು ಪಾಪಿಯಿರಬಹುದು, ಪಾಪದ ಕೆಲಸಗಳನ್ನು ಮಾಡಿರಬಹುದು, ಆದರೆ ಅದ್ಯಾವುದೂ ನನಗಾಗಿ ಮಾಡಿದ ಕೃತ್ಯಗಳಲ್ಲ, ಅದಕ್ಕಾಗಿಯೇ ಈ ಸ್ಥಾನ ಸಿಕ್ಕಿರುವುದು" ಎನ್ನಲಿಲ್ಲವಂತಲ್ಲಾ.


ಈ ನಡುವೆ ಇದ್ದಕ್ಕಿದ್ದಂತೆ ತಿಪ್ಪೇ ಸೇರಿ ನಾರತೊಡಗಿದ್ದ ತಿಪ್ಪಣ್ಣನಿಗೂ ಪರಿಷತ್ ಪೀಠ ಪ್ರಾಪ್ತವಾಗಿ ಯಾರಿಗೂ ಗೊತ್ತಿರದಿದ್ದ ಬಯೋಡೇಟಾವನ್ನು ಪುಂಖಾನುಪುಂಖವಾಗಿ ಬಿತ್ತರಿಸಿಕೊಂಡು ಇನ್ನೆಲ್ಲಾ ಹಿನ್ನೆಲೆ ಇದ್ದ ನೀನು ಹೀಗೇಕಾಗಿದ್ದೆ ಎನ್ನುವಂತೆ ಮಾಡಿಕೊಂಡರಂತಲ್ಲಾ, ಥೂತ್ತೇರಿ!!!

-[illegible]

ಪ್ರೇಮವಿಲ್ಲದ ನರನು [illegible] -ಕುಲಿಕುತುಬ್ ಷಾ

168 ವರ್ಷಗಳ ಇತಿಹಾಸವಿರುವ ಟೈಮ್ಸ್ ಆಫ್ ಇಂಡಿಯಾ ಕೇವಲ 75 ತಿಂಗಳ ಪಡ್ಡೆ ವಿಜಯ ಕರ್ನಾಟಕ ಜೊತೆ ಕೂಡಿಕೆ ಮಾಡಿಕೊಳ್ಳುತ್ತಿರುವ ಹಿಂದೆ ನಾನಾ ತರ್ಕಗಳಿವೆ. ಈ Old lady of Boribunder ನಿತ್ರಾಣಗೊಂಡಿರುವ ಹುಬ್ಬಳ್ಳಿಯಾಂವನ ಜೊತೆ ಕುದುರಿಸಿರುವ ಡೀಲ್‌ನಲ್ಲಿ ಲಾಭ-ನಷ್ಟ, ದುರಾಶೆ-ನಿರಾಶೆಗಳ ಕತೆಯಿದೆ. ಮನಾಪಲಿಯ ಆಕಾಂಕ್ಷೆ, ಖಾಲಿ ನಿಖಾಲಿಯಾದ ಕ್ಷೋಭೆಯ ಘಟನಾವಳಿಗಳಿವೆ.

171 ಕೋಟಿಗೆ ವಿಜಯ ಕರ್ನಾಟಕ ಹರಾಜ್



ಈ ಪತ್ರಿಕೆ ಈಗ ಟೈಮ್ಸ್ ಆಫ್ ಇಂಡಿಯಾ ಪಾಲು!

ಕನ್ನಡದ ನಂಬರ್ ಒನ್ ಡೈಲಿ ವಿಜಯ ಕರ್ನಾಟಕ 171 ಕೋಟಿ ರೂ.ಗಳಿಗೆ ಬಿಕರಿಯಾಗಿ ಹೋಗಿದೆ. ಈ ನಂಬರ್ ಒನ್ ವಿಕದೊಂದಿಗೆ ನಂಬರ್ ಲಾಸ್ಟ್ ಉಷಾ ಕಿರಣ ಹಾಗೂ ಪ್ಯಾರಾಸೈಟ್ ವಿಜಯ ಟೈಮ್ಸ್ ಅನ್ನು ಸೇರಿಸಿ ಹೋಲ್‌ಸೇಲಾಗಿ ಖರೀದಿ ಮಾಡಿರುವುದು ಟೈಮ್ಸ್ ಆಫ್ ಇಂಡಿಯಾದ ಮಾರ್ವಾಡಿಗಳು. ಮೊನ್ನೆ ಮೇ 24ನೇ ತಾರೀಖು ವಿಜಯ ಸಂಕೇಶ್ವರ್ ಹಾಗೂ ಆನಂದ್ ಸಂಕೇಶ್ವರ್ ಖುದ್ದಾಗಿ ದೆಹಲಿಯಲ್ಲಿ ಟೈಮ್ಸ್ ಧಣಿಗಳೊಂದಿಗೆ ಕುಳಿತು ಈ ಡೀಲ್ ಮುಗಿಸಿದ್ದಾರೆ. ಅದರಂತೆ ಜೂನ್ 14ನೇ ತಾರೀಖು ಅಂತಿಮ ಒಪ್ಪಂದಕ್ಕೆ ಇಬ್ಬರೂ ಸಹಿ ಹಾಕುತ್ತಿದ್ದಾರೆ. ಜೂನ್ 15ರಂದು ಇಬ್ಬರೂ ಒಂದು ಜಂಟಿ ಪತ್ರಿಕಾ ಹೇಳಿಕೆ ಕೊಡಲಿದ್ದಾರೆ. ಇವೆಲ್ಲಾ ಫಾರ್ಮಾಲಿಟಿಗಳು, ಮಾಲೀಕರ ಲೆವೆಲ್‌ನಲ್ಲಿ ಬಾಕಿ ಇರುವ ವಿಚಾರಗಳು. ಆದರೆ functional level ನಲ್ಲಿ ಟೈಮ್ಸ್ ಪ್ರತಿನಿಧಿಗಳು ನಾಳಿದ್ದು ಜೂನ್ 1 ರಿಂದಲೇ ವಿಕ, ಉಷಾಕಿರಣ, ವಿಜಯ ಟೈಮ್ಸ್ ಕಚೇರಿ ಪ್ರವೇಶಿಸುತ್ತಿದ್ದಾರೆ. ಖರ್ಚು-ಆದಾಯಗಳೆಲ್ಲಾ ಅವತ್ತಿನಿಂದಲೇ ಟೈಮ್ಸ್ ಆಫ್ ಇಂಡಿಯಾ ಲೆಕ್ಕಕ್ಕೆ ಜಮೆಯಾಗಲು ಶುರುವಾಗುತ್ತವೆ. ಸಂಕೇಶ್ವರ್ ಲೆಕ್ಕಾ ಚುಕ್ತಾ ಆಗಲಿದೆ. ಆದರೆ ವಿಕ ಬಳಗದಲ್ಲಿ ಒಂದೂವರೆ ಸಾವಿರದಷ್ಟಿರುವ ವರದಿಗಾರರು, ಕಂಪೋಜಿಟರ್‌ಗಳು, ಫೋಟೋಗ್ರಾಫರ್‌ಗಳು, ಪ್ರೂಫ್ ತಿದ್ದುವವರು, ಲೋಕಲ್ ಸ್ಟ್ರಿಂಜರ್‌ಗಳಿಗೆ ತಾವೆಲ್ಲಿ ಚುಕ್ತಾ ಆಗಿ ಬಿಡುತ್ತೇವೋ ಎಂಬ ಆತಂಕ.

ಇದು ಸಹಜ ಕೂಡ.

ಬಹುಶಃ ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲೇ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಪತ್ರಕರ್ತರು ಗಾಬರಿ ಬಿದ್ದ ಉದಾಹರಣೆಯೇ ಇಲ್ಲ. ಇಂತಾದ್ದೊಂದು ದೊಡ್ಡ ಡೀಲ್ ನಡೆದಿರಲೂ ಇಲ್ಲ.



ಆನಂದ್ ಸಂಕೇಶ್ವರ್

ಓಲ್ಡ್ ಲೇಡಿ ತೆಕ್ಕೆಗೆ ವಿಕ

ಸಂಕೇಶ್ವರ್ ಈ ಮೂರು ಪತ್ರಿಕೆಗಳನ್ನು ಮಾರಿಬಿಡಲು ಕಳೆದ ಒಂದು ವರ್ಷದಿಂದಲೂ ಯತ್ನಿಸುತ್ತಿದ್ದ ಸಂಗತಿ ಬಹುತೇಕರಿಗೆ ಗೊತ್ತಿಲ್ಲ. ಕೇರಳದ ಮಲೆಯಾಳಿ ಮನೋರಮಾ ಗ್ರೂಪ್‌ನೊಂದಿಗೆ, ಕಲ್ಕತ್ತಾದ ಆನಂದ ಬಜಾರ್ ಸಂಸ್ಥೆಯೊಂದಿಗೆ, ದೆಹಲಿಯ ದೈನಿಕ್ ಜಾಗರಣ್ ಧಣಿಗಳೊಂದಿಗೂ ವ್ಯಾಪಾರ ಕುದುರಿಸಲು ನೋಡಿದ್ದರು. ಇವರೆಲ್ಲರಿಗೂ ಕರ್ನಾಟಕದಲ್ಲಿ ತಮ್ಮ ವ್ಯವಹಾರ ವಿಸ್ತರಿಸುವ ಯೋಚನೆ ಇತ್ತಾದರೂ ಯಾಕೋ ಏನೋ ವ್ಯಾಪಾರ ಕುದುರಿರಲಿಲ್ಲ. ತೀರಾ ಇತ್ತೀಚಿಗೆ ಸಂಕೇಶ್ವರ್ ಹೋಗಿ ಕಂಡಿದ್ದು ದೆಹಲಿಯ ಹಿಂದೂಸ್ತಾನ್ ಟೈಮ್ಸ್‌ನವರನ್ನು. VRL ಗ್ರೂಪ್ 270 ಕೋಟಿ ಕೇಳಿದರೆ ಹಿಂದೂಸ್ತಾನ್‌ನವರು ಚೌಕಾಸಿ ನಡೆಸುತ್ತಾ ಕೆಲ ಕಾಲ ತಳ್ಳಿದ್ದರು. ಆದರೆ

ಬೆಳಿದಾಳೆ ಈತ

ಹಿಂದೂಸ್ತಾನ್ ಟೈಮ್ಸ್ ಈ ಪತ್ರಿಕೆಗಳ ಮೂಲಕ ದಕ್ಷಿಣ ಭಾರತವನ್ನು ಪ್ರವೇಶಿಸಿದರೆ ತನಗೆಲ್ಲಿ ಏಟು ಬೀಳುತ್ತದೋ ಎಂದು ಗಾಬರಿಯಾದ ಟೈಮ್ಸ್ ಆಫ್ ಇಂಡಿಯಾ ತಾನೇ ಮುನ್ನುಗ್ಗಿ 171 ಕೋಟಿಗೆ ಖರೀದಿ ವ್ಯವಹಾರ ಮುಗಿಸಿಕೊಂಡಿದೆ. ಇದರಲ್ಲಿ ಟೈಮ್ಸ್‌ಗೆ 70% ಸಂಕೇಶ್ವರಗೆ 30% ಷೇರು ಹಂಚಿಕೊಳ್ಳುತ್ತಾರಂತೆ ಎಂಬ ಪುಕಾರೂ ಇದೆ. ಹಾಗಾದರೆ ವಿಜಯಾನಂದ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಬೋರ್ಡಿನಲ್ಲಿ ಪಬ್ಲಿಷರ್

ವಿ.ಭಟ್ಟ ಕಂಗಾಲು, ವೆಂಕಟರಮಣ ಭಟ್ ಆಹವಾಲು...

ಪತ್ರಿಕೆಯೊಂದರ ಮಾಲೀಕತ್ವ ಬದಲಾಗುತ್ತದೆ ಎಂದಾದಾಗ ಸಹಜವಾಗೇ ಅದರ ಸಿಬ್ಬಂದಿ ಕಂಗಾಲಾಗುತ್ತಾರೆ. ಯಾರ ಕೆಲಸ ಹೋಗುತ್ತೋ, ಇನ್ಯಾರದ್ದು ಉಳಿಯುತ್ತೋ ಎಂಬ ಟೆನ್ಷನ್ ಅದು.

ವಿಆರ್‌ಎಲ್ ಗ್ರೂಪಿನ ಎರಡು ಡೈಲಿಗಳ ಪೈಕಿ ವಿಜಯ ಕರ್ನಾಟಕದ ಎಕ್ಸಿಕ್ಯೂಟಿ ಮ್ಯಾನೇಜಿಂಗ್ ಎಡಿಟರ್ (ಕ್ಷಮಿಸಿ, ಇದರ ಅರ್ಥಪೂರ್ಣ ಕನ್ನಡಾನುವಾದ ಅಸಾಧ್ಯ) ಆಗಿರುವ ವಿಶ್ವೇಶ್ವರ ಭಟ್‌ಗೆ ವಿಕ ನಂ. 1 ಆಗಿದ್ದೇ ತಮ್ಮ ಪ್ರತಿಭೆಯಿಂದ ಎಂಬ ಭ್ರಮೆಯಿದೆ. ಇದರಲ್ಲಿ ನಾಲ್ಕಾಣೆ ಸತ್ಯಾಂಶವಿದೆಯಾದರೂ ಸಂಕೇಶ್ವರ್ ರೂಪಿಸಿದ್ದ ಮಾರ್ಕೆಟಿಂಗ್ ತಂತ್ರಗಳೇ ವಿಕ ಸರ್ಕುಲೇಷನ್ ಏರಲು ಕಾರಣವಾಗಿದ್ದವು. ಹಿಂದುತ್ವವಾದಿ RSS ನ ಲಾಠಿ ಬೀಸುತ್ತಲೇ ಬಂದ ವಿ.ಭಟ್ಟರ ಕೃಪೆಯಿಂದ ವಿಕಗೆ ಸಿಕ್ಕಿದ್ದು ಚೆಡ್ಡಿ ಪತ್ರಿಕೆಯೆಂಬ ಬ್ರ್ಯಾಂಡ್ ನೇಮ್ ಒಂದೆ.

ಹಿರಿಯ ಪತ್ರಕರ್ತ ವಿ.ಎನ್. ಸುಬ್ಬರಾವ್‌ರ 'ಚೆಡ್ಡಿ ದೋಸ್ತ್' ಆಗಿ ಬೆಳಕಿಗೆ ಬಂದ ಈ ಪ್ರತಿಭೆ ಕೆಲವೊಮ್ಮೆ ಹಾಸ್ಯಾಸ್ಪದ 'ಸಂಪಾದಕ'ರಾಗಿ ಕಂಗೊಳಿಸಿದ್ದಾರೆ.

ಉದಾಹರಣೆಗೆ ಇಲ್ಲಿರುವ ಈ ಎರಡು ಫೋಟೋಗಳನ್ನೇ ನೋಡಿ. ಮೇ 2ನೇ ತಾರೀಖಿನ 'ವಿಜಯ ಕರ್ನಾಟಕ' ಹಾಗೂ 'ದಿ ಹಿಂದು' ಪತ್ರಿಕೆಗಳೆರಡರಲ್ಲೂ ಪ್ರಕಟವಾಗಿರುವ ಮೇಧಾ ಪಾಟ್ಕರ್‌ರ ಒಂದೇ ಕಾರ್ಯಕ್ರಮದ ಈ ಫೋಟೋಗಳಿಗೆ ತೀರಾ ವಿರುದ್ಧಾರ್ಥದ ಶೀರ್ಷಿಕೆ ನೀಡಲಾಗಿದೆ. 'ದಿ ಹಿಂದು' 'ಸ್ಲಂವಾಸಿಗಳ ಎತ್ತಂಗಡಿ ವಿರೋಧಿಸಿ ಮೇಧಾ ಪಾಟ್ಕರ್ ದನಿಗೂಡಿಸಿದ್ದಾರೆ' ಎಂದು ಶೀರ್ಷಿಕೆ ನೀಡಿತ್ತು. ಆದರೆ ವಿಭಟ್ಟರು ಅದನ್ನೇ ತಿರುಚಿ 'ಮೇಧಾ ಪಾಟ್ಕರ್ ಮೀಸಲಾತಿ ವಿರೋಧಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು' ಎಂದು ಬರೆದು ತನ್ನ ಮೇಲ್ಜಾತಿ ಮೆರಿಟ್ ಬುದ್ಧಿ ತೋರಿದ್ದಾರೆ.



'ಹಿಂದೂ' ಪತ್ರಿಕೆಯ ಫೋಟೋ



'ವಿಜಯ ಕರ್ನಾಟಕ' ಫೋಟೋ


ಮೇಧಾ ಬಗ್ಗೆ ಗೊತ್ತಿರುವ ಜನಕ್ಕೆ ಆಕೆ ಮೀಸಲಾತಿ ವಿರೋಧಿಸಲಾರಳೆಂಬುದಂತೂ ಗೊತ್ತಿರುತ್ತದೆ. ಆದರೆ ಕರ್ನಾಟಕ ನಂ. 1 ಡೈಲಿಯ ಸಂಪಾದಕರಾದ ವಿಭಟ್ಟರಿಗೆ ಕನಿಷ್ಠ ಆ ಎಚ್ಚರವೂ ಇಲ್ಲ. ಓದುಗ ಅಂದರೆ ಕತ್ತೆಗೆ ಸಮಾನ ಎಂದು ಅವರು ಭಾವಿಸಿದಂತಿದೆ. ಹಾಗಾಗೇ ಈಶ್ವರ ದೈತೋಟ, ಮಹದೇವಪ್ಪನವರು ಇದ್ದಾಗ ಮರ್ಯಾದೆಯ ಪೋಷಾಕಿನೊಳಗಿದ್ದ ವಿಕ ವಿಭಟ್ಟರು ಕಾಲಿಟ್ಟ ನಂತರ ಪೂರಾ ಚೆಡ್ಡಿಯಲ್ಲಿ ದರುಶನ ನೀಡಲು ಶುರು ಮಾಡಿತ್ತು. ಅದರ ಪ್ರತೀ ಪುಟದಲ್ಲೂ ಜಾತಿಯ ಗಬ್ಬು ವಾಸನೆ; ಪ್ರತಿ ವರದಿ, ಅಂಕಣಗಳಲ್ಲೂ ಕೋಮುವಾದದ ಕೊಳಕುನಾತ ರಾಚುತ್ತಿತ್ತು. ಪ್ರತಾಪಸಿಂಹ ಎಂಬ ಬಾಲಕನ ಚೀರಾಟಗಳಂತೂ ಮೂರನೇ ದರ್ಜೆ ಮನರಂಜನೆಯ ಲೆವೆಲ್‌ಗೆ ಹೋಗಿತ್ತು. ಇದರ ಜೊತೆಗೆ ವಿಕದಲ್ಲಿದ್ದ ಮಹದೇವಪ್ಪ, ಚೀಫ್ ರಿಪೋರ್ಟರ್ ರುದ್ರಪ್ಪ, ವರದಿಗಾರ ಮಮ್ತಾಜ್ ಆಲೀರಂತ ಉತ್ತಮರನ್ನು ಹೊರ ಹೋಗುವಂತೆ ಮಾಡಿದ್ದ ವಿಭಟ್ಟರು ತಮ್ಮ ಸುತ್ತಾ ಒಂದೋ ಬ್ರಾಹ್ಮಣರು ಅಥವಾ ಚೆಡ್ಡಿ ಚತುರರ ಪಡೆಯನ್ನೇ ಕಟ್ಟಿಕೊಂಡಿದ್ದರು. ವಿಕ ಈ ಗುಂಪಿನ ಖಾಸಗಿ ಆಸ್ತಿ ಎಂಬಂತಾಗಿ ಹೋಗಿತ್ತು.

ಸುಧಾಶರ್ಮ ಚವತ್ತಿ ಎಂಬಾಕೆಯ ಲೇಖನಗಳು ಒಂದೇ ಸಾರಿ ಮಹಿಳಾ ವಿಜಯ ಮತ್ತು ಮಕ್ಕಳ ವಿಜಯದಲ್ಲಿ ಪ್ರಿಂಟಾಗುವ ಪ್ರಿವಿಲೇಜ್ ಪಡೆಯುತ್ತಿದ್ದವು. ಮಣಿಕಂಠ ಎಂಬುವರ ಮಗಳ ಆರಾರು ಫೋಟೋಗಳು ಸಿಟಿ ವಿಜಯದಲ್ಲಿ ಪ್ರಿಂಟಾಗಿದ್ದವು. 2002 ರಲ್ಲಿ ಒಮ್ಮೆ ಶಿರಸಿಯಲ್ಲಿ ಹವ್ಯಕ ಬ್ರಾಹ್ಮಣ ಸಮ್ಮೇಳನ ನಡೆದಾಗ ಭಟ್ಟರು ಅದನ್ನು ಪ್ರತಿ ದಿನ ದೊಡ್ಡದಾಗಿ ಪ್ರಕಟಿಸಿದ್ದರು. ಆದರೆ ಅದೇ ವೇಳೆ ಮಂಗಳೂರಿನಲ್ಲಿ ಮೀನುಗಾರರ ಸಮಾವೇಶ ನಡೆದರೂ ವಿಕ ಒಂದಕ್ಷರವನ್ನೂ ಬರೆಯಲಿಲ್ಲ. ಇನ್ನೊಮ್ಮೆ ಶಿವಮೊಗ್ಗಾದ ರಾಘವೇಶ್ವರ ಸ್ವಾಮಿ ಎಂಬುವನು ವಿಕದಲ್ಲಿ 'ಕೈ ತುತ್ತು' ಎಂಬ ಚಿಲ್ಲರೆ ಕಾಲಂನಲ್ಲಿ ಕ್ಷೌರಿಕ ಜನಾಂಗದವರ ಅವಹೇಳನ

[illegible] ಹೋಗಿ ಕೇವಲ ಫೀಚರ್, ಎಂಬುದು ಮಾತ್ರ [illegible]

[illegible] ಇರಲಿ.

168 ವರ್ಷಗಳ ಇತಿಹಾಸವಿರುವ ಟೈಮ್ಸ್ ಆಫ್ ಇಂಡಿಯಾ ಕೇವಲ 75 ತಿಂಗಳ ಹಳ್ಳೆ ವಿಜಯ ಕರ್ನಾಟಕ, 36 ತಿಂಗಳ ಹುಡುಗೂಸು ವಿಜಯ ಟೈಮ್ಸ್ ಹಾಗೂ 15 ತಿಂಗಳ ಕೈಗೂಸು ಉಷಾ ಕಿರಣಗಳ ಜೊತೆ ಕೂಡಿಕೆ ಮಾಡಿಕೊಳ್ಳುತ್ತಿರುವ ಹಿಂದೆ ನಾನಾ [illegible]ಗಳಿವೆ. ಈ Old lady of Boribunder (ಟೈಮ್ಸ್‌ನ ಅಡ್ಡ ಹೆಸರು) ನಿತ್ರಾಣಗೊಂಡಿರುವ [illegible]ಬ್ಬಳ್ಳಿಯಾಂವನ ಜೊತೆ ಕುದುರಿಸಿರುವ ಡೀಲ್‌ನಲ್ಲಿ ಲಾಭ-ನಷ್ಟ, ದುರಾಶೆ-ನಿರಾಶೆಗಳ ಕತೆಯಿದೆ. ಮನಾ[illegible]ಲಿಯ ಆಕಾಂಕ್ಷೆ, ಖಾಲಿ ನಿಖಾಲಿಯಾದ ಕ್ಲೋಭೆಯ [illegible]ಟನಾವಳಿಗಳಿವೆ.


ಸಮೀರ್ ಜೈನ್

ಆಡಿ ಬಾ ನನ ಕಂದ....

1999 ರಲ್ಲಿ ಸಂಕೇಶ್ವರ್ ವಿಜಯ ಕರ್ನಾಟಕ ಚಾಲೂ ಮಾಡಿದಾಗ "ಪೇಪರ್ [illegible]ಸೋದು ಲಾರಿ ಓಡಿಸಿದಷ್ಟು ಸುಲಭ ಅಲ್ಲ" ಎಂದು ಗೇಲಿ ಮಾಡಿದವರು ಬಹಳ. ಆದರೆ [illegible]ಸ್ವರಲ್ಲಿ ರಾಜ್ಯದ ಪ್ರಮುಖ ಪತ್ರಿಕಾ ಕಚೇರಿಗಳಿಗೆ ಖುದ್ದಾಗಿ ಹೋಗಿ ಅವರ ತಾಕತ್ತು, ಸಂಪತ್ತು, ಸಿಬ್ಬಂದಿ ಬಲ, ಟೆಕ್ನಾಲಜಿಗಳ ಆಳ [illegible]ಗಲ ಸ್ಟಡಿ ಮಾಡಿ ಬಂದಿದ್ದ ಸಂಕೇಶ್ವರ್ ತಾನೇ ಪ್ರತ್ಯೇಕವಾಗಿ ಸರ್ವೆ ಸಹ ಮಾಡಿಸಿ ಒಂದು ಪಕ್ಕಾ ಪ್ಲಾನ್ ರೆಡಿ ಮಾಡಿಕೊಂಡಿದ್ದರು. ಯಾರ ಛೋದನೆ, ಗೇಲಿಗೂ [illegible]ರ್ ಮಾಡದೆ ಮುನ್ನುಗ್ಗಿದ್ದರು. ಆದರೆ ವಿಕದೊಂದಿಗೇ [illegible]ರುವಾಗಿದ್ದ


ವಿನೀತ್ ಜೈನ್

ದಾಂಧಲೆ ಎಬ್ಬಿಸಿತ್ತು. ಕರ್ನಾಟಕದ ಮೂಲೆ ಮೂಲೆಗೂ ತಲುಪುತ್ತಾ ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಉದಯವಾಣಿ, ಕನ್ನಡ ಪ್ರಭಗಳ ತಟ್ಟೆಗೆ ಕೈಹಾಕಿ ಪಾಲು ಕಿತ್ತು, ಹೊಸ ಓದುಗರನ್ನು ಸೇರಿಸಿಕೊಂಡು 7 ಲಕ್ಷ ಪ್ರಸಾರ ತಲುಪಿತ್ತು. "ಆಡಿ ಬಾ ನನ ಕಂದ, ಅಂಗಾಲ ತೊಳೆದೇನು". ಎಂದು ವಿಕವನ್ನು ಪ್ರೋತ್ಸಾಹಿಸಿ ಛೂ ಬಿಟ್ಟಿದ್ದ ಸಂಕೇಶ್ವರ್ ತಮ್ಮ ಗುರಿ ಬೇಗನೆ ಸಾಧಿಸಿದ್ದರು. ಆದರೆ ವಿಕ ಬರಿ ಛಾಲ ಚೇಷ್ಟೆ ಮಾಡಿ ನಂಬರ್ 1 ಆಗಿರಲಿಲ್ಲ, ಡಂಪಿಂಗ್ ಪಾಲಿಸಿಯ ತುಂಟಾಟ, ಬೇರೆ ಡೈಲಿಗಳ ಪಾರ್ಸೆಲ್ ಕದಿಯುವ ಪುಂಡಾಟಗಳನ್ನೆಲ್ಲಾ ಮಾಡಿ ಬೆಳೆದಿತ್ತು. ಈ ಕಾದಾಟದಲ್ಲೇ ವಿಕಗೆ ಮೈಕೈ ಎಲ್ಲಾ ಗಾಯಗಳಾಗಿದ್ದವು. ಹೆವಿ ಸರ್ಕುಲೇಷನ್ ಎಂಬ ದುರ್ಮಾಂಸವೂ ಬೆಳೆದಿತ್ತು.

THE TIMES OF INDIA

ನೂತನ, ಭಾವನಗಳೆಂಬ ತಮ್ಮ-ತಂಗಿಯರು ಬೇಗನೆ ದಿವಂಗತರಾದರೆ, ವಿಕ ಮಾರ್ಕೆಟ್‌ನಲ್ಲಿ ಕಚ್ಚಿಕೊಂಡಿತ್ತು, ಅಲ್ಲಿಂದಾಚೆಗೆ ಬೆಲೆ ಸಮರ, ಬೇರೆ ಬೇರೆ ಎಡಿಷನ್ ವ್ಯವಹಾರ, VRL ಲಾರಿಗೆ ನೆಟ್‌ವರ್ಕ್‌ನ ಸಹಕಾರ... ಇವೆಲ್ಲಾ ಸೇರಿ ವಿಕ ರೇಸ್ ಕುದುರೆಯಂತೆ ಮುನ್ನುಗ್ಗಿ ನಂಬರ್ 1 ಆಗಿತ್ತು. ಅವತ್ತಿನ ನಂ. 1 ಆಗಿದ್ದ ಪ್ರಜಾವಾಣಿ ಮಾರ್ಕೆಟ್‌ನಲ್ಲಿ ಏನಾಗುತ್ತಿದೆ ಎಂದು ಅರ್ಥ ಮಾಡಿಕೊಳ್ಳುವಷ್ಟರಲ್ಲಿ ವಿಕ 1 ರೂಪಾಯಿಗೆ ಮಾರಾಟವಾಗುತ್ತಾ ಮಾರ್ಕೆಟ್‌ನಲ್ಲಿ

ಸರ್ಕುಲೇಷನ್ ಅಶ್ವಮೇಧ ಸಕ್ಸಸ್ ಜಾಹಿರಾತು ಕಪ್ಪ ಕಾಣಿಕೆ ಲಾಸ್

ವಿಕ ಶುರುವಾದ ನಂತರ ತನ್ನ ಪ್ರಸಾರ ಹೆಚ್ಚಿಸಿಕೊಳ್ಳುವ ತಂತ್ರ, ಪ್ರಜಾವಾಣಿಯ ಪ್ರಸಾರ ಬೀಳಿಸಲು ನಾನಾ ಕುತಂತ್ರ ಎರಡನ್ನೂ ಒಟ್ಟಿಗೆ ಮಾಡಿಕೊಂಡು ಬಂದಿತ್ತು. ಒಮ್ಮೆ ಪ್ರಜಾವಾಣಿಯ ಪ್ರಿಂಟಿಂಗ್ ಸಿಬ್ಬಂದಿಯ ಮುಷ್ಕರಕ್ಕೂ ಕುಮ್ಮಕ್ಕು ಕೊಟ್ಟಿದ್ದ ವಿಕ ಬೆಂಗಳೂರಿನ ಕೆಲ ಏರಿಯಾಗಳಲ್ಲಿ ಪ್ರಜಾವಾಣಿಯ ವೆಹಿಕಲ್‌ಗಳು

(ಮುಂದಿನ ಪುಟಕ್ಕೆ)

[illegible] ಕರ್ನಾಟಕ V/s ಪ್ರಜಾವಾಣಿ [illegible] ನಡುವಿನ 1999-2006 ರ ನಡುವಿನ 7 ವರ್ಷಗಳ ಕದನದಲ್ಲಿ ಈಗ ಪ್ರಜಾವಾಣಿ ಜಯ ಗಳಿಸಿದೆ.


ವಿಕ ಹತಾಶವಾಗಿದೆ!

ಇದನ್ನು ಇಂಡಿಯಾ ದೇಶದ ಮಾಧ್ಯಮ ಜಗತ್ತಿನ ಅತಿ ದೊಡ್ಡ ಡೀಲ್ ಎಂದು ಹೇಳಲಾಗುತ್ತಿದೆ. ಒಂದು ಪತ್ರಿಕೆ ಇನ್ನೊಂದನ್ನು ಖರೀದಿಸುವುದು, ಒಂದು ಸಂಸ್ಥೆಯೇ ಇನ್ನೊಂದರೊಳಗೆ ವಿಲೀನವಾಗಿಬಿಡುವ ಹಲವೆಂಟು ಘಟನೆಗಳು ಈ ಹಿಂದೆ ನಡೆದಿವೆ. ಆದರೆ ಈ 171 ಕೋಟಿಯಷ್ಟು ದೊಡ್ಡ ಮೊತ್ತದ ಡೀಲ್ ನಡೆದಿರುವುದು ಇದೇ ಪ್ರಥಮ ಅಂತಾ ಬಲ್ಲವರು ಹೇಳುತ್ತಿದ್ದಾರೆ. ಟೈಮ್ಸ್ ಆಫ್ ಇಂಡಿಯಾ ಇದರಿಂದ ಮುಂದೆ ಎಷ್ಟು ಲಾಭ ಮಾಡುತ್ತದೆಂಬುದು ಸದ್ಯಕ್ಕೆ ಊಹೆಯ ವಿಷಯ. ಸಂಕೇಶ್ವರ್‌ಗೆ ಈಗ ಎಷ್ಟು ಗಿಟ್ಟಿತೆಂಬುದೂ ಊಹೆಗೆ ಬಿಟ್ಟ ವಿಚಾರವೆ.

ಪ್ರಜಾವಾಣಿ - ಟೈಮ್ಸ್ ಆಫ್ ಇಂಡಿಯಾ ಯುದ್ಧ ಶುರು!

ಪ್ರಜಾವಾಣಿಗೆ ಇದೊಂದು ರೀತಿ ಅಳಿವು-ಉಳಿವಿನ ಹೋರಾಟದಲ್ಲಿನ ಸೆಮಿ ಫೈನಲ್‌ನಂತಿತ್ತು. ಈ ದೈತ್ಯರ ಕದನದಲ್ಲಿ ಬೆಲೆ ಇಳಿಕೆ, ಲಾಸು, ಸಣ್ಣ ಪತ್ರಿಕೆಗಳ ಹತ್ಯೆಗಳನ್ನೆಲ್ಲಾ ಪರಿಗಣಿಸಿದರೆ ಕನಿಷ್ಠ 200 ಕೋಟಿ ರೂಪಾಯಿ ಸವೆದು ಹೋಗಿರಬಹುದು.

ಇದೇನೆ ಇದ್ದರು ಜಗಳವಾಡುತ್ತಿದ್ದ ಈ ಪತ್ರಿಕೆಗಳೆಲ್ಲಾ ಕನ್ನಡಿಗರದ್ದೇ ಆಗಿದ್ದವು. ಅವರಿಗೆ ಈ ನೆಲದ ಮಿಡಿತ, ಜನ ಜೀವನ, ಕಲೆ, ಸಾಹಿತ್ಯ ಸಂಗೀತ ಎಲ್ಲಾ ಗೊತ್ತಿತ್ತು. ಆದರೆ ಈಗ ವಿಕ ಖರೀದಿಸಿರುವ ಟೈಮ್ಸ್ ಆಫ್ ಇಂಡಿಯಾ ನಮ್ಮ ನೆಲದ ಜನರದ್ದಲ್ಲ, ಫ್ಯಾಷನ್ನು, ಲೈಫ್ ಸ್ಟೈಲು, ನಾಯಿಮರಿ, ಮೇಕಪ್ಪು ಮುಂತಾದ ಬರೀ ಬೂಸಾ ತುಂಬಿಕೊಡುವ ಸಮೂಹ ಅದು. ವಾರ್ಷಿಕ 1300 ಕೋಟಿ ವಹಿವಾಟಿರುವ ದೈತ್ಯ ಮಾಧ್ಯಮ ಸಂಸ್ಥೆ ಅದು. ಪತ್ರಿಕೆ ಜೊತೆಗೆ ZOOM ಮತ್ತು Times Now ಎಂಬ ಟೀವಿ ಚಾನಲ್‌ಗಳು ಅವರಿಗಿದೆ. ಸದ್ಯದಲ್ಲೇ ಆಧ್ಯಾತ್ಮ ಚಾನೆಲ್, ಬ್ಯುಸಿನೆಸ್ ಟಿವಿ ಶುರು ಮಾಡುತ್ತಿದ್ದಾರೆ ಅವರು. ಈ ಮಧ್ಯೆ ಚಿತ್ರ ನಿರ್ಮಾಣಕ್ಕೂ ಕೈಹಾಕಿದ್ದಾರೆ. ಇಂಡಿಯಾದಲ್ಲಿ price war ಶುರು ಮಾಡಿದ್ದೂ ಈ ಜನರೇ.


ಶಾಂತಕುಮಾರ್

ಪ್ರಜಾವಾಣಿ ಫೈನಲ್‌ನಲ್ಲಿ ಬಡಿದಾಡಬೇಕಿರುವುದು ಈ ದೈತ್ಯರೊಂದಿಗೆ. ಇಲ್ಲಿ ಗೆಲ್ಲಬೇಕೆಂದರೆ ಸಾಕಷ್ಟು ಹಣ, ಶಿಸ್ತು, ಫೈಟಿಂಗ್ ಸ್ಪಿರಿಟ್ ಎಲ್ಲಾ ಬೇಕಾಗುತ್ತದೆ. ಲಾಸು ಅಟ್ಟಿಸಿಕೊಂಡು ಬಂದಾಗ ಕೆಲಕಾಲ ತಡೆದುಕೊಳ್ಳುವ ತಾಕತ್ತಿರಬೇಕಾಗುತ್ತದೆ. ಕನ್ನಡ ಡೈಲಿಗಳ ಇವತ್ತಿನ ಪರಿಸ್ಥಿತಿ ಹೇಗಿದೆಯೆಂದರೆ ವಿಜಯ ಕರ್ನಾಟಕ ವೇನೋ ಟೈಮ್ಸ್ ಮುಷ್ಠಿಗೆ ಹೋಗಿದೆ. ಅವರದಕ್ಕೆ ಸಾಕಷ್ಟು ದುಡ್ಡು ಪಂಪ್ ಮಾಡಿ ಮತ್ತೆ ಉಳಿದೆಲ್ಲಾ ಕನ್ನಡ ಡೈಲಿಗಳ [illegible] ಕದನಕ್ಕೆ [illegible] ಕನ್ನಡ [illegible] ಇರುವುದರಿಂದ ಅದು [illegible]. [illegible] ಉದಯವಾಣಿ ಎಡಿಷನ್ [illegible] ದೇಕುವುದು ಕಷ್ಟವಾಗಬಹುದು, ಆದರೆ [illegible] ಎಡಿಷನ್ [illegible] 'ಓದುಗ' [illegible] ಬದುಕುಳಿಯಬಹುದು. ಸಂಯುಕ್ತ ಕರ್ನಾಟಕ [illegible] ಬರದೇ [illegible] ಬಂದದ್ದು [illegible] ಮೂಲೆಯಲ್ಲಿರಲು [illegible]

ಆದರೆ ಪ್ರಜಾವಾಣಿಯ ಪರಿಸ್ಥಿತಿ ಬೇರೆ. ಅದಕ್ಕೆ ಟೈಮ್ಸ್ ತರ ಆಲ್ ಇಂಡಿಯಾ ಮಾರ್ಕೆಟ್ಟು, ಸಾವಿರಾರು ಕೋಟಿ ಬಂಡವಾಳ ಇಲ್ಲ, ವಿದೇಶಿ ಹಣ ಬರುತ್ತಿಲ್ಲ. ಹಾಗಿದ್ದರೂ ಟೈಮ್ಸ್ ಮೊದಲು ಟಾರ್ಗೆಟ್ ಮಾಡುವುದೇ ಕನ್ನಡಿಗರ ಪತ್ರಿಕೆ ಪ್ರಜಾವಾಣಿ-ಹೆರಾಲ್ಡ್‌ಗಳನ್ನು.

ಪ್ರಜಾವಾಣಿಯಲ್ಲಿ ವಿದೇಶಿ ಸುದ್ದಿಗಳು ಏನೇನೂ ಸಾಲದಂತಿವೆ. ಅಕ್ಷರ ದೋಷಗಳು ಕಾಣಿಸಿಕೊಳ್ಳುತ್ತಿವೆ. ಯಾರೂ ಹಠ ಮಾಡಿರದಿದ್ದರೂ ವಾಸ್ತು-ಜಾತಕ ಪ್ರಕಟವಾಗುತ್ತಿದೆ. ಇದನ್ನೆಲ್ಲಾ ಅವರು ಸರಿಮಾಡಿಕೊಂಡಿದ್ದೇ ಆದಲ್ಲಿ ಕನ್ನಡಿಗರು ಇದೇ ನೆಲದಲ್ಲಿ ಅರಳಿರುವ ಪ್ರಜಾವಾಣಿಯಿಂದ ದೂರ ಹೋಗಲಾರರು.

ಆದರೆ ಇದು ಜಾಗತೀಕರಣದ ಯುಗ. ನೂರು ರೂಪಾಯಿ ಲಾಭ ಸಿಕ್ಕರೆ ಲಕ್ಷ ರೂಪಾಯಿ ಹೂಡುವಂತ ಜನ ಇದ್ದಾರೆ. ಲಾಭಕ್ಕಾಗಿ ಕುತ್ತಿಗೆ ಕುಯ್ಯುವ ಸ್ಪರ್ಧೆ ಎಲ್ಲೆಡೆ ಇದೆ. ಇದುವರೆಗೂ ಕೇವಲ ಕರ್ನಾಟಕ ಮಾರ್ಕೆಟ್‌ನಲ್ಲೇ ಚಿಕ್ಕ ಮೀನನ್ನು ದೊಡ್ಡ ಮೀನು ನುಂಗುವಂತೆ ಪೈಪೋಟಿ ನಡೆಸುತ್ತಿದ್ದ ಕನ್ನಡ ಡೈಲಿಗಳ ವಿರುದ್ಧ ಈಗ ರಾಷ್ಟ್ರ ಪತ್ರಿಕೆಯಾದ ದೈತ್ಯ ಟೈಮ್ಸ್ ಸವಾಲೊಡ್ಡಿ ನಿಲ್ಲಲು ಬರುತ್ತಿದೆ.

ಇದುವರೆಗೂ ತೆಳ್ಳಗೆ-ಬೆಳ್ಳಗೆ ಬರೆದುಕೊಂಡಿರುತ್ತಿದ್ದ ಟೈಮ್ಸ್ ಇತ್ತೀಚೆಗೆ ಗಂಭೀರ ಸಂಪಾದಕೀಯ ಹಾಗೂ ಉತ್ತಮ ಲೇಖನಗಳನ್ನು ಪ್ರಕಟಿಸಲು ಶುರು ಮಾಡಿದೆ. ಒಂದು ವಿನ್ಯಾಸ saturation point ಗೆ ತಲುಪಿದ ನಂತರ ಟೈಮ್ಸ್ ಇರಲಿ ಬೇರೆಯವರೂ ಸಹ ಹಳಸಲು ಅವತಾರದಲ್ಲಿ ಮುಂದುವರೆಯಲಾರರು. ಅದೇ ರೀತಿ ಈಗ ಟೈಮ್ಸ್ ಕೂಡ ಬದಲಾಗುತ್ತಿದೆ.

ಇದು ಪ್ರಜಾವಾಣಿಯ ಶಾಂತಕುಮಾರ್ ಗಮನದಲ್ಲಿರಲಿ.

[illegible]ಮಾಡಿ ಬರೆದಿದ್ದನ್ನೂ ವಿಭಟ್ಟರು [illegible]ಮಹಾಪ್ರಸಾದವೆಂಬಂತೆ ಪ್ರಕಟಿಸಿದ್ದರು. ನಂತರ ಆ ಬಗ್ಗೆ [illegible]ಗಲಾಟೆಗಳಾಗಿ 'ವಿಕ'ಗೆ ಶೂದ್ರ ವಿರೋಧಿ ಕಿರೀಟ ದಕ್ಕಿತ್ತು. ನಾವಡ ಎಂಬ ಇನ್ನೊಬ್ಬ ರವೀಂದ್ರ ಕಲಾಕ್ಷೇತ್ರದ ಕ್ಯಾಂಟೀನ್ ಗುತ್ತಿಗೆ ವಿಚಾರದಲ್ಲಿ ಡಿ. ಪ್ರಕಾಶ್ ಎಂಬಾತನ ಜೊತೆ ಜಗಳ ತೆಗೆದು ಪತ್ರಿಕೆಯನ್ನೂ ಈ [illegible]ವಾದದಲ್ಲಿ ಬಳಸಿಕೊಂಡು [illegible]ಕ್ಕುಬಿದ್ದಿದ್ದ. ಇನ್ನು ರಾಜು ಅಡಕಳ್ಳಿ, ಎಲ್. ಪ್ರಕಾಶ್ ಎಂಬ ಆರ್‌ಎಸ್‌ಎಸ್ ಹೈದರ ಜರ್ನಲಿಸಂ [illegible] ಲೆವೆಲ್ ದಾಟ ಮೇಲೇಳಲೇ [illegible]ಲ್ಲ, ಒಟ್ಟಾರೆ ಇದರಿಂದ ವಿಕಗೆ 'ಅದೊಂದು ಕೋಮುವಾದಿ ಪತ್ರಿಕೆ' ಎಂಬ ಲೇಬಲ್ ಖಾಯಂ ಆಗಿ [illegible]ಕ್ಕಿತ್ತು.

ಓದುಗ ದೊರೆ ಒಂದು ಸಾರಿ [illegible] ಲದ್ದಿ ತಿಂದರೂ ಮತ್ತೆ [illegible] ದಿನ ಅದೇ ಲದ್ದಿಯನ್ನೇ [illegible] ಎಂದು ಕೊಟ್ಟರೆ [illegible] [illegible]. ವಿಕ ಅದನ್ನು ಅರ್ಥ [illegible] ಒಂದಷ್ಟು ಸರ್ಕುಲೇಷನ್ [illegible], ಆಗಲೇ ಶಾಂತಕುಮಾರ್ [illegible] ಪ್ರಜಾವಾಣಿ ಇನ್ನಷ್ಟು [illegible] ರಂಗನಾಥ್ [illegible] ಬಂದ ಮೇಲೆ ಕನ್ನಡ [illegible] ಬೆಳೆಯಿತು.

[illegible] ಮಾಲೀಕರಿಗೆ ಇದೆಲ್ಲವರ


ನಾವಡ


ಪ್ರಕಾಶ್



ಅಸೆಸ್‌ಮೆಂಟ್ ಸ್ವಲ್ಪ ಮಟ್ಟಿಗಿದೆ. ಅವರಿಗೆ ತಮ್ಮ ಮಾಲೀಕತ್ವದ ಪತ್ರಿಕೆಯೊಂದು ಹಸೀ ಕೋಮುವಾದಿ ಕರಪತ್ರ ಎಂಬ ಲೇಬಲ್ ಉಳಿಸಿಕೊಳ್ಳುವುದುಬೇಕಿಲ್ಲ. ಹಾಗಾಗಿ ಮುಂದೆ ವಿಕಗೆ ಕನ್ನಡಪ್ರಭದ ರಂಗನಾಥ್ ಸಂಪಾದಕರಾಗುವ ಒಂದು ಸಾಧ್ಯತೆ ಕಂಡುಬರುತ್ತಿದೆ.

ಮತ್ತೊಂದೆಡೆ ಉಪಾಕಿರಣದ ಸಮಸ್ತ ಸಿಬ್ಬಂದಿ ಈ ಆತಂಕದ ಸನ್ನಿವೇಶದಲ್ಲೂ ವೃತ್ತಿಪರ ಘನತೆ ತೋರುತ್ತಾ ಕೆಲಸ ಮಾಡಿಕೊಂಡು ಹೋಗುತ್ತಿರುವುದು ಮೆಚ್ಚಬೇಕಾಗಿದೆ. ಅದರ ಸಂಪಾದಕ ವೆಂಕಟರಮ್ ಭಟ್ "ಮುಂದೆ ಏನಾದರೂ ಆಗಲಿ, ಆದರೆ ನಾವು ನಮ್ಮ ಕೆಲಸವನ್ನು ಮಾಡಿಕೊಂಡು ಹೋಗೋಣ" ಎಂದು ಸಿಬ್ಬಂದಿಗೆ ಸಾಂತ್ವಾನ ಹೇಳಿ ಹುರಿದುಂಬಿಸಿದ್ದಾರೆ.

ಮುಳುಗುತ್ತಿರುವ ಹಡಗಿನ ಕ್ಯಾಪ್ಟನ್‌ನಂತೆ, ಬೇರೆಲ್ಲರ ರಕ್ಷಣೆಗೂ ವ್ಯವಸ್ಥೆ ಮಾಡುತ್ತಾ, ಹೊರಬೀಳುವ ಕೊನೆ ವ್ಯಕ್ತಿಯಂತೆ ವೆಂಕಟರಾಮ್ ಭಟ್ ಪ್ರತಿಕ್ರಿಯಿಸಿದ್ದಾರೆ.


ಹ್ಯಾಟ್ಸ್ ಆಫ್ ಟು ಹಿಮ್.

ಪತ್ರಿಕೋದ್ಯಮದ ಘನತೆ ಎಂದರೆ ಇದೇನೆ.

ದೇವೇಗೌಡ್ರಿಗಂತೂ ಲಾಸು

ವಿಜಯ ಸಂಕೇಶ್ವರ್ ಕಳೆದ ವರ್ಷ ದೇವೇಗೌಡರ ಪಾರ್ಟಿ ಸೇರಿಕೊಂಡಾಗ ಜೆಡಿಎಸ್ ಹೈದರೆಲ್ಲಾ ತೀರಾ ಖುಷಿಯಾಗಿ ಹೋಗಿದ್ದರು. ಮಧ್ಯ ಕರ್ನಾಟಕದ ಲಿಂಗಾಯತ ಲೀಡರ್, ಮಾಜಿ ಎಂಪಿ, ಎರಡು ಸಾವಿರ ಲಾರಿ-ಬಸ್ಸು, ಕೈಲಿ ಮೂರು ಪ್ರಭಾವಿ ಪೇಪರ್‌ಗಳಿರುವ ಸಂಕೇಶ್ವರ್ ಪಾರ್ಟಿಗೆ ಬರೋದ್ರಿಂದ ಜೆಡಿಎಸ್‌ಗೆ ಸಿಕ್ಕಾಪಟ್ಟೆ ಅನುಕೂಲ ಎಂಬುದು ಅವರ ಲೆಕ್ಕಾಚಾರವಾಗಿತ್ತು. ಆಮೇಲೆ ಜೆಡಿಎಸ್-ಬಜೆಪಿಗಳು ಮಿಲಾಕತ್ತಾಗಿ ಕೋ-ಜಾ ಸರ್ಕಾರ ಹುಟ್ಟಿದ ಮೇಲಂತೂ VRL ನಿಂದ ಗೌಡರು ಜಾಸ್ತಿನೇ ನಿರೀಕ್ಷೆ ಮಾಡಿದ್ದರು. ಆದರೆ ಸಂಕೇಶ್ವರ್ ಒಬ್ಬ ಪಕ್ಕಾ ವ್ಯಾಪಾರಿ. ಅವರು ಜೆಡಿಎಸ್ ರ್‍ಯಾಲಿಗಳಿಗೆ VRL ಲಾರಿ-ಬಸ್ಸು ಕೊಡಲಿಲ್ಲ, ತಮ್ಮ ಪತ್ರಿಕೆಯಲ್ಲೂ ಸರ್ಕಾರದ ಪರ ನಿಲುವು ತಳೆಯಲಿಲ್ಲ, ಬದಲಾಗಿ ಸ್ವಲ್ಪ ಚುರುಕಾಗಿ ಓಡಾಡಿ ಕೋಟಿಗಟ್ಟಲೆ ಜಾಹಿರಾತು ದುಡ್ಡು ಗೆಬರಿಕೊಳ್ಳುವತ್ತ ಮಾತ್ರ ಗಮನಕೊಟ್ಟರು. ಧರಂಸಿಂಗ್ ಇದ್ದಾಗಲಂತೂ ಒಂದೇ ಸಮ ಕಾಂಗ್ರೆಸ್ ವಿರುದ್ಧ ಬರೆಯುತ್ತಾ ಕೊನೆಗೆ ಖುದ್ದಾಗಿ ಧರಂಸಿಂಗ್ ಕಂಡು ಜಾಹಿರಾತು ಡೀಲ್ ಕುದುರಿಸಿಕೊಂಡು [illegible] ಸಂಕೇಶ್ವರ್. ಬಜೆಪಿಯಲ್ಲಿದ್ದಾಗ ಅನಂತಕುಮಾರ್ ಸಂಕೇಶ್ವರ್ ವಿರುದ್ಧವಿದ್ದರೂ ವಿಜಯ ಕರ್ನಾಟಕ [illegible] ಮಾತ್ರ ಯಡಿಯೂರಪ್ಪನವರ ಮೇಲೆ ಕತ್ತಿ ಬೀಸುತ್ತಿತ್ತು. ವಿಕ ಸಂಪಾದಕ ವಿಭಟ್ಟರು [illegible] ಹುಡುಗನಾಗಿದ್ದುದೇ ಇದಕ್ಕೆ ಕಾರಣ.

ಇಂತಿಪ್ಪ ವಿಕ ಈಗ ಟೈಮ್ಸ್ ತೆಕ್ಕೆಗೆ ಹೋಗಿದೆ. [illegible] ಗಮಾರ ಎಂಬಂತೆ ಬಂಬಸುತ್ತಾ ಬಂದಿರುವ ಪೈಕಿ. ಈಗ [illegible] ಆದ್ದರಿಂದ ದೇವೇಗೌಡರು ಅವರಿಗೆ ಮಣೆ ಹಾಕಲಾರರು.



[illegible] ಪುಟದಿಂದ)

ತಂದಿಳಿಸಿ ಹೋಗುತ್ತಿದ್ದ ಬಂಡಲ್‌ಗಳ ಕಳ್ಳತನವನ್ನೂ ಮಾಡಿಸಿತ್ತು. ಪ್ರಜಾವಾಣಿ ಈ ಕಿರುಕುಳಗಳನ್ನು ಬೇಗನೆ ಮೆಟ್ಟಿ ನಿಂತಿತಾದರೂ ಅವರ ಕೆಲ ಓದುಗರು ವಿಕಗೆ ಶಿಫ್ಟ್ ಆಗುವುದನ್ನು ತಡೆಯಲಾಗಿರಲಿಲ್ಲ. ಅತ್ತ ಸಂಕೇಶ್ವರ್ 1 ರೂಪಾಯಿಯ invitation rate ಇಟ್ಟು price war ಮುಂದುವರೆಸುತ್ತಲೇ ಹೊಸ ಎಡಿಷನ್‌ಗಳನ್ನು ಶುರು ಮಾಡುತ್ತಲೇ ಹೋದರು.

ನೋಡನೋಡುತ್ತಿದ್ದಂತೆಯೇ ವಿಕದ ಹುಬ್ಬಳ್ಳಿ, ಮೈಸೂರು, ಬಾಗಲಕೋಟೆ, ಶಿವಮೊಗ್ಗ, ಗಂಗಾವತಿ, ಗುಲ್ಬರ್ಗಾ, ಹಾಸನ, ಮಂಗಳೂರು, ಚಿತ್ರದುರ್ಗ ಎಡಿಷನ್‌ಗಳು ಶುರುವಾದವು. ಎಲ್ಲಾ ಕಡೆ 2 ಕೋಟಿಯೊಳಗಿನ ಓರಿಯಂಟಲ್ ಪ್ರಿಂಟಿಂಗ್ ಮೆಷಿನುಗಳೂ ಬಂದು ಕುಳಿತವು. ರಾಜ್ಯದ ಪ್ರತಿ ಜಿಲ್ಲೆ ಟೌನು, ಹಳ್ಳಿಗಳಿಗೂ ವಿಕ ತಲುಪಿಸಲು VRL ಟ್ರಾನ್ಸ್‌ಪೋರ್ಟು ಇದ್ದೇ ಇತ್ತು.

ಹೀಗೆ ಸತತ 5 ವರ್ಷಗಳ ಓಟದಲ್ಲಿ ವಿಕ ಎಂಬ ಕುದುರೆಯ 'ಅಶ್ವಮೇಧ ಯಾತ್ರೆ' ಯಶಸ್ವಿಯಾಗಿ ಮುಗಿದಿತ್ತು. ಈ ದಂಡಯಾತ್ರೆಯಲ್ಲಿ ಪ್ರಜಾವಾಣಿಯಂತ ದೊಡ್ಡ ಸಾಮ್ರಾಜ್ಯದಿಂದ ಆರಂಭಿಸಿ ಮೈಸೂರಿನ ಆಂದೋಲನದಂತ ಸ್ವತಂತ್ರ ರಾಜರು, ಶಿವಮೊಗ್ಗದ ಲೋಕಲ್ ಡೈಲಿ 'ನಮ್ಮ ನಾಡು' ತರದ ಪುಟ್ಟ ಸಂಸ್ಥಾನವನ್ನೂ ಬಿಡದೆ ವಿಕದ ರಾಜಕುದುರೆ ದಂಡೆತ್ತಿ ಹೋಗಿತ್ತು. ಈ ಸಂಘರ್ಷದಲ್ಲಿ ಎಷ್ಟೋ ಸಣ್ಣಪುಟ್ಟ ಪತ್ರಿಕೆಗಳು ಹತವಾದವು.

ಆದರೆ ಅಸಲಿ ಕತೆ ಶುರುವಾಗಿದ್ದೇ ಆಗ

ಹೀಗೆ ಯಶಸ್ವಿಯಾಗಿ ದಂಡಯಾತ್ರೆ ಮುಗಿಸಿ ನಂಬರ್ 1 ಎನಿಸಿಕೊಂಡು ಪಟ್ಟಾಭಿಷೇಕ ಮಾಡಿಸಿಕೊಂಡ ವಿಕಗೆ ನಿರೀಕ್ಷಿಸಿದಷ್ಟು ಜಾಹಿರಾತಿನ ಕಪ್ಪ ಕಾಣಿಕೆಗಳು ಬರಲೇ ಇಲ್ಲ. ವಿಕದ ಗಬ್ಬು ಚೆಡ್ಡಿ ಬುದ್ಧಿ ನೋಡಿದ ಎಲ್ಲಾ ಗಂಭೀರ ಓದುಗರು ಪ್ರಜಾವಾಣಿ, ಆಂದೋಲನ, ನಮ್ಮ ನಾಡುಗೆ ಇನ್ನಷ್ಟು ಅಂಟಿಕೊಂಡರೇ ವಿನಃ ವಿಕವನ್ನು ಮೂಸಿಯೂ ನೋಡಲಿಲ್ಲ. ಇದರಿಂದೇನಾಯಿತೆಂದರೆ ಈ ಪತ್ರಿಕೆಗಳ ಸರ್ಕುಲೇಷನ್ನೂ ಅದೇ ರೀತಿ ಜಾಹಿರಾತು ಆದಾಯ ಕಡಿಮೆಯಾಗದೆ ಅವು ಗಟ್ಟಿಯಾಗಿ ನಿಂತವು. ವಿಕಗೆ ಕೇವಲ ಬೇರೆಯವರ ಸರ್ಕುಲೇಷನ್ ಮಾತ್ರವಲ್ಲ; ಜಾಹಿರಾತು ಆದಾಯವನ್ನೂ ಕಿತ್ತುಕೊಂಡಿದ್ದರೆ ಅದಕ್ಕೆ ಇವತ್ತಿನ ಹರಾಜು ಸ್ಥಿತಿ ಬರುತ್ತಿರಲಿಲ್ಲವೇನೋ.

ವಿಕ ಬೇರೆ ಪತ್ರಿಕೆಗಳ ಪ್ರಸಾರ ಟ್ರಿಮ್ ಮಾಡಿ ತನ್ನ ಪ್ರಸಾರವನ್ನು ಬೆಟ್ಟದಷ್ಟು ಹೆಚ್ಚಿಸಿಕೊಂಡಿತ್ತು. ಆದರೆ ಜಾಹಿರಾತು ಆದಾಯ ಮೊದಲಿನಂತೆ ಎಲ್ಲರಲ್ಲೂ ಹಂಚಿಕೆಯಾಗುತ್ತಲೇ ಹೋಯಿತು. ವಿಕ ನಿತ್ರಾಣಗೊಳ್ಳಲು ಶುರುವಾಗಿದ್ದೇ ಆಗ.

ಈ ಸ್ಥಗಿತ ಸ್ಥಿತಿಯಿಂದ ಪಾರಾಗಲು ಸಂಕೇಶ್ವರ್ unpredictable ಆದ ನಿರ್ಧಾರ ಮಾಡಿಬಿಟ್ಟರು. ವಿಜಯ ಟೈಮ್ಸ್ ಹಾಗೂ ಉಷಾ ಕಿರಣಗಳೆಂಬ ಇನ್ನೆರಡು ಬಂಡೆಗಳನ್ನು ಸೃಷ್ಟಿಸಿ VRL ಲಾರಿಗೇರಿಸಿದರು. ಅವೂ ಸಹ ಒಂಭತ್ತು ಎಡಿಷನ್ನು, ಲಕ್ಷಾಂತರ ಸಂಬಳದ ಖರ್ಚು ತಂದವೇ ವಿನಃ ಲಾಭ ತರಲಿಲ್ಲ.

ಈ crisisನಿಂದ ಒಂದೇ ಏಟಿಗೆ ಪಾರಾಗಬೇಕೆಂದರೆ ಬಹುಶಃ ಸಂಕೇಶ್ವರ್‌ಗೆ ಈ ಮೂರು ಪತ್ರಿಕೆಗಳನ್ನು ಮಾರದೇ ಅನ್ಯ ದಾರಿ ಇರಲಿಲ್ಲ ಎಂದು ಕಾಣುತ್ತದೆ. ಹಾಗಾಗಿ ಇವೆಲ್ಲಾ ಓಲ್ಡ್ ಲೇಡಿ ಆಫ್ ಬೋರಿಬಂದರ್ ಟೈಮ್ಸ್‌ನ ವಶವಾಗಿ ಹೋಗಿವೆ.

ಈಗ ಕೆಲವು ಕುಹುಕಿಗಳು ಉಷಾಕಿರಣವೇ ಈ ಅನಾಹುತಕ್ಕೆಲ್ಲಾ ಕಾರಣ ಎಂದು ಗೂಬೆ ಕೂರಿಸುತ್ತಿದ್ದಾರೆ. ಆದರೆ VRL ಗ್ರೂಪ್‌ನಲ್ಲಿ ಸ್ವಲ್ಪವಾದರೂ ಕ್ಯಾರೆಕ್ಟರ್ ಅಂತ ಇದ್ದ ಪತ್ರಿಕೆ ಉಷಾ ಕಿರಣ ಮಾತ್ರ. ಸಂಕೇಶ್ವರ್‌ಗೆ ಆರ್ಥಿಕ ಬಿಕ್ಕಟ್ಟು ಸೃಷ್ಟಿಯಾದದ್ದು ವಿಜಯ ಕರ್ನಾಟಕ ಎಂಬ ಬಕಾಸುರ ಹಸಿವಿನ ಪತ್ರಿಕೆಯಿಂದ.

ದಿಢೀರ್ ಯಶಸ್ಸು, ಹಣ ಎಲ್ಲಾ ಬೇಕು ಎಂದು ಹೊರಡುವವರಿಗೆ ಈ ವಿದ್ಯಾಮಾನಗಳೆಲ್ಲಾ ನಿಜಕ್ಕೂ ಒಂದು ಪಾಠ ಕಲಿಸಿದೆ. ಉಳಿದವರಿಗೆ ಇದೇ ಎಚ್ಚರಿಕೆಯಾಗಲಿ. ■

ಸಂಕೇಶ್ವರ್ Thums down!

ಇದು ಜಾಗತೀಕರಣದ ಯುಗ. ದೊಡ್ಡ ತಿಮಿಂಗಿಲಗಳು ಚಿಕ್ಕ ಮೀನುಗಳನ್ನು ನುಂಗಿ ಹಾಕುತ್ತವೆ. ನಿಮಗೆ ನೆನಪಿರಬಹುದು: ಬಹುರಾಷ್ಟ್ರೀಯ ಪೆಪ್ಸಿ ಕಂಪನಿ ಭಾರತಕ್ಕೆ ಕಾಲಿಟ್ಟಾಗ ಭಾರತೀಯರದ್ದೇ ಆದ Thums up ಜನಪ್ರಿಯವಾಗಿತ್ತು. ಆದರೆ ದೈತ್ಯ ಪೆಪ್ಸಿ ವಿರುದ್ಧ Thums up ಗೆ ಹೋರಾಡಲಾಗಲಿಲ್ಲ. ಕೊನೆಗೆ Thums up ಅನ್ನು ಪೆಪ್ಸಿಗೆ ಮಾರಿದ ಅದರ ಮಾಲೀಕ ಏನಾದ ಗೊತ್ತೆ? ತನ್ನ ಕಂಪನಿಯನ್ನು ಗುಲಾಮ ಮಾಡಿದ ಪೆಪ್ಸಿ ಬಾಟಲಿಗಳನ್ನು ತೊಳೆಯುವ ಗುತ್ತಿಗೆ ಪಡೆದ. ಈಗ ಸಂಕೇಶ್ವರರೂ ಕೂಡಾ ತಮ್ಮ ಸಂಸ್ಥೆಯನ್ನು ನುಂಗಿದ ಟೈಮ್ಸ್‌ನ ಪತ್ರಿಕೆಗಳನ್ನು ಮುದ್ರಿಸಿ ಕೊಡುವ ಹಂತಕ್ಕೆ ಬಂದಿದ್ದಾರೆ. ಆದರ ಇಲ್ಲೊಂದು ಸೋಜಿಗವೂ ಇದೆ. ಅದೇನೆಂದರೆ ಇವತ್ತಿನ ಆರ್ಥಿಕ ಪರಿಸ್ಥಿತಿಯಲ್ಲಿ ಪತ್ರಿಕೆ ನಡೆಸುವುದಕ್ಕಿಂತ ಅದನ್ನು ಮುದ್ರಿಸುವುದರಲ್ಲೇ ಹೆಚ್ಚು ಲಾಭ ಮತ್ತು ಭದ್ರತೆಯೂ ಇದೆ!

****

ಇವತ್ತು ವಿಜಯಾ ಟೈಮ್ಸ್ ಎಂಬ ಆರಕ್ಕೇರದ ಮೂರಕ್ಕಿಳಿಯದ ಪತ್ರಿಕೆಯು ರಾಜ್ಯದಲ್ಲಿ ನಂ.2 ಆಗಿರುವುದರಿಂದ ಟ ಟೈಮ್ಸ್‌ನವರು ಅದನ್ನು ಮುಚ್ಚುವುದಿಲ್ಲ ಎಂದು ಹಲವರು ಭಾವಿಸಿದ್ದಾರೆ. ಆದರೆ ಅವರಿಗೆಲ್ಲ ಟೈಮ್ಸ್ ಸಂಸ್ಥೆಯ ವ್ಯಾಪಾರಿ ಬುದ್ಧಿ ಇತಿಹಾಸ ಗೊತ್ತಿಲ್ಲ. 150 ವರ್ಷಗಳಿಂದ ಮುಂಬೈನಲ್ಲಿ No.1 ಆಗಿ ಮೆರೆದಿದ್ದ ಟೈಮ್ಸ್‌ಗೆ 80ರ ದಶಕದಲ್ಲಿ ಸೆಡ್ಡು ಹೊಡೆದು ಸವಾಲಾಗಿ ನಿಂತಿದ್ದು ವಿನೋದ್ ಮೆಹ್ತಾ ಸಂಪಾದಕತ್ವದ ಇಂಡಿಪೆಂಡೆಂಟ್ ಎಂಬ ದೈನಿಕ. ಮೂರೇ ತಿಂಗಳಲ್ಲಿ ಇದು ಎಷ್ಟು ಜನಪ್ರಿಯವಾಯಿತೆಂದರೆ ಟೈಮ್ಸ್ ನಡುಗಲಾರಂಭಿಸಿತು. ತಕ್ಷಣವೇ ಕಾರ್ಯಾಚರಣೆಗಿಳಿದ ಟೈಮ್ಸ್ ಮಾಲೀಕರು ಇಂಡಿಪೆಂಡೆಂಟ್ ಪತ್ರಿಕೆಯನ್ನು ಖರೀದಿಸಿದರು. ಒಂದೇ ಸಂಸ್ಥೆ ಹೇಗೆ ಎರಡು ಇಂಗ್ಲಿಷ್ ಪತ್ರಿಕೆಗಳನ್ನು ನಡೆಸಲು ಸಾಧ್ಯ ಎಂದವರಿಗೆ "ಯಾಕೆ ಸಾಧ್ಯವಿಲ್ಲ, ಗೋದ್ರೆಜ್ ಕಂಪನಿ ಮೂರ್ನಾಲ್ಕು ಸೋಪ್‌ಗಳನ್ನು ಮಾರುವುದಿಲ್ಲವೇ? ಇದು ಅಂತಹದ್ದೇ ವ್ಯಾಪಾರ" ಅಂದಿದ್ದರು ಟೈಮ್ಸ್ ಮಾಲೀಕ ಸಮೀರ್ ಜೈನ್. ಆದರೆ ಆತ ಕೊನೆಗೆ ಮಾಡಿದ್ದೇನೆಂದರೆ ವಿನೋದ್ ಮೆಹ್ತಾರವರನ್ನು ಓಡಿಸಿದ್ದು ಮತ್ತು ಇಂಡಿಪೆಂಡೆಂಟ್ ಕತ್ತು ಹಿಸುಕಿ ಕೊಂದುಹಾಕಿದ್ದು. ಇಂತಹ ಟೈಮ್ಸ್ ವಿಜಯ ಟೈಮ್ಸ್‌ನಂತಹ ಪತ್ರಿಕೆಯನ್ನು ನುಂಗಿ ಹಾಕದೇ ಇರುತ್ತದೆಯೇ?

****

ಎರಡು ವರ್ಷಗಳವರೆಗೂ ಸಂಕೇಶ್ವರ್ ಮುಟ್ಟಿದ್ದೆಲ್ಲಾ ಚಿನ್ನವಾಗಿತ್ತು. ವಿಜಯ ಕರ್ನಾಟಕ ಪತ್ರಿಕೆಯೂ ಚಿನ್ನದ ಮೊಟ್ಟೆ ಇಡುವ ಕೋಳಿಯಾಗೇ ಉಳಿಯುತ್ತಿತ್ತೇನೋ. ಆದರೆ ಸಂಕೇಶ್ವರ್ ಬೇರೆ ಪತ್ರಿಕೆಗಳನ್ನು ಹೆಣೆದು, ಹೈರಾಣಾಗಿಸಿ ನಾನೊಬ್ಬನೆ ಉಳಿಯಬೇಕೆಂದು ಹೊರಟರು. ಅವರು ಉಷಾ ಕಿರಣ, ವಿಜಯ್ ಟೈಮ್ಸ್ ಮಾಡಬೇಕಿರಲಿಲ್ಲ. ಹಾಗೆ ನೋಡಿದರೆ ಅವರು ಕನ್ನಡ ನಾಡು ಲಾಂಚ್ ಮಾಡಬಾರದಿತ್ತು. ವಿಕದ ಏರು ಹೊತ್ತಿನ ಆವೃತ್ತಿ, ತೇರು ಹೊತ್ತಿನ ಆವೃತ್ತಿ ಎಂದೆಲ್ಲಾ ಶುರು ಮಾಡಿ ಕೈ ಸುಟ್ಟುಕೊಂಡರು. ಸಂಜೆ ವಿಜಯ ತರ್ತೀನೆಂದು ಧಮಕಿ ಕೊಟ್ಟರಲ್ಲದೆ, ಮುಂಬೈ ಆವೃತ್ತಿ, ದುಬೈ ಆವೃತ್ತಿ ಮಾಡುತ್ತೇನೆಂದು ಹೇಳಿದರು. ಆದರೆ ಇದ್ಯಾವುದೂ ಗೆಟಾನ್ ಆಗಲಿಲ್ಲ.

* * * * * * * * *

ಟೈಮ್ಸ್‌ನ ವರಿಂದ 171 ಕೋಟಿ ತಗೊಂಡು ಸಂಕೇಶ್ವರ್ ವಿಮಾನಯಾನ ಸಂಸ್ಥೆ ಹಾಗೂ ಗಾಳಿ ವಿದ್ಯುತ್ ಯಂತ್ರ ತಯಾರಿಕಾ ಕಾರ್ಖಾನೆ ಮಾಡಲು ಬಯಸಿದ್ದಾರೆ. ಮಲ್ಯನ ಯುಬಿ, ಜೆಟ್ ಏರ್‌ವೇಸ್‌ಗಳಂತ ಶಕ್ತಿಶಾಲಿಗಳಿರುವ, ಗದ್ದೆ ಹೊಲಗಳಲ್ಲೆಲ್ಲಾ ಲ್ಯಾಂಡ್ ಆಗುತ್ತಿರುವ ಏರ್ ಡೆಕ್ಕನ್‌ನಂತ ತಮಾಷೆ ಕಂಪನಿಗಳಿರುವ Civil Aviation ಕೂಡ ಸುಲಭದ ವ್ಯವಹಾರವೇನಲ್ಲ. ನೂರಾರು ಕೋಟಿ ರೂ. ಬಂಡ ವಾಳ ಕೇಳುವ ದಂಧೆ ಅದು.

ಇನ್ನು ಹುಬ್ಬಳ್ಳಿಯ ವೆರೂರಿ ನಲ್ಲಿ ಸಂಕೇಶ್ವರ್ ಒಂದು wind mill project ಶುರು ಮಾಡಿ ದ್ದಾರೆ. ಕಳೆದ 6 ತಿಂಗಳಲ್ಲಿ ಅಲ್ಲಿರುವ 100 ಮಂದಿ ಟೆಕ್ನೀಷಿಯನ್‌ಗಳು ಕೇವಲ 4 ಗಾಳಿ ವಿದ್ಯುತ್ ಯಂತ್ರಗಳನ್ನು ಅಸೆಂಬಲ್ ಮಾಡಿ ಸ್ಯಾಂಪಲ್ ಎಂದು ಯಾರಿಗೋ ಮಾರಿದ್ದಾರೆ ಅಷ್ಟೇ. ಈ ವ್ಯವಹಾರ ಕೈಗೆ ಹತ್ತಬೇಕೆಂದರೆ ಸಂಕೇಶ್ವರ್ ತಾವೇ ಬಹಳ ಗಾಳಿ ಬೀಸಿಕೊಳ್ಳಬೇಕಾಗುತ್ತದೆ.

ಕೊನೆಯದಾಗಿ, ಕುಮಾರಸ್ವಾಮಿಯ ಕನ್ನಡ ಕಸ್ತೂರಿ ಟಿವಿ ಚಾನೆಲ್‌ಗೆ ಸಂಕೇಶ್ವರ್ ಕೂಡ ದುಡ್ಡು ಹಾಕುತ್ತಿದ್ದಾರೆಂಬ ಸುದ್ದಿಗಳಿವೆ. ಕನಿಷ್ಠ ಅದಾದರೂ ಗೆಲ್ಲಲಿ ಎಂದು ಆಶಿಸೋಣ. ●

ರಂಗನ ಮುಂದೆ ಸಿಂಗನೆ?

ಕನ್ನಡ ಪ್ರಭದ ಸಂಪಾದಕ ರಂಗನಾಥ್ ವಿಜಯ ಕರ್ನಾಟಕದ ಹೊಸ ಸಂಪಾದಕರಾಗಲಿದ್ದಾರಾ? ಹಾಗಂತಾ ಒಂದು ರೂಮರ್ ಅಂತೂ ಹಬ್ಬಿದೆ.

ರಂಗನಾಥ್ ಕ್ಯಾಪ್ಟನ್ ಆದ ಮೇಲೆ ಕನ್ನಡ ಪ್ರಭಾಕ್ಕೊಂದು ಖದರ್, ಫೋರ್ಸು, ಲವಲವಿಕೆ ಬಂದಿರುವುದಂತೂ ನಿಜ. ಮೊದಮೊದಲು 'ಆಶ್ ಟ್ರೇ' ಕಳ್ಳತನದಂತ ಸಾಧಾರಣ ಸುದ್ದಿಗಳನ್ನೇ ಸಂಭ್ರಮಿಸಿ ಪ್ರಕಟಿಸುತ್ತಿದ್ದ ರಂಗ ನಂತರ ಬೇಗನೆ, ಪತ್ರಿಕೋದ್ಯಮದ ನಿಜವಾದ ಚಾಲೆಂಜ್ ಎದುರಿಸಲು gear up ಆದರು. ಟೀಂ ಅನ್ನೂ ಸಜ್ಜುಗೊಳಿಸಿದರು.

ಈಗ ಈ ಟೀಂ ಎಷ್ಟು ಪ್ರೊಫೆಷನಲ್ ಆಗಿದೆಯೆಂದರೆ ಒಂದು ಸುದ್ದಿಯ ಬೆನ್ನು ಹತ್ತಿ ಹೊರಟಿತೆಂದರೆ ಯಾವ ಮುಲಾಜು ಇಲ್ಲದೆ ಅದರ ಎಲ್ಲಾ ಆ್ಯಂಗಲ್‌ಗಳನ್ನೂ ಹೊರತೆಗೆದು ಓದುಗರಿಗೆ ಕೊಡುತ್ತಿದೆ. ಇದರಿಂದ ಪ್ರಭಾದ ಸರ್ಕುಲೇಷನ್ನೂ ಏರಿದೆ.

ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ನ ಮಾಲೀಕ ಸಂತಾಲಿಯ ಇದರಿಂದ ಎಷ್ಟು ಇಂಪ್ರೆಸ್ ಆದರೆಂದರೆ ಇತ್ತೀಚೆಗೆ ರಂಗನಾಥ್‌ರನ್ನು ಚೆನ್ನೈಗೆ ಕಳುಹಿಸಿ ಖಾಯಿಲೆ ಹಿಡಿದು ಮಲಗಿರುವ ತಮ್ಮದೇ ಸಂಸ್ಥೆಯ ತಮಿಳು ದೈನಿಕ 'ದಿನಮಣಿ'ಗೆ ಯಾವ ಟ್ರೀಟ್‌ಮೆಂಟ್ ಕೊಟ್ಟರೆ ಸರಿ ಎಂದು ತಿಳಿಸುವಂತೆ ಕೋರಿದ್ದರು.

ಕನ್ನಡ ಪತ್ರಕರ್ತರು ಹೆಮ್ಮೆ ಪಡಬೇಕಾದ ವಿಚಾರ ಇದು. ಇಂಥಾ ಡೈನಾಮಿಕ್ ಕೆಲಸಗಾರ ರಂಗನಾಥ್ ಮೇಲೆ ಈಗ ವಿಕದ ಹೊಸ ಮಾಲೀಕರಾದ ಟೈಮ್ಸ್ ಆಫ್ ಇಂಡಿಯಾದವರ ಕಣ್ಣು ಬಿದ್ದಿದೆ.

ಚೆಡ್ಡಿಗಳ ಲದ್ದಿ ಚಟುವಟಿಕೆಗಳನ್ನೇ ಸುದ್ದಿ ಎಂಬಂತೆ ಪ್ರಿಂಟಿಸುತ್ತಾ ವಿಕವನ್ನು ರದ್ದಿ ಪೇಪರ್ ಆಗಿಸಿದ್ದ ವಿಶ್ವೇಶ್ವರ ಭಟ್‌ಗಿಂತಾ ರಂಗನಾಥ್ ಆ ಜಾಗಕ್ಕೆ ಬಂದರೆ ಸರಿ ಅಂತಾ ಶುದ್ಧ ವ್ಯಾಪಾರಿಗಳಾದ ಟೈಮ್ಸ್ ಅಂದುಕೊಂಡಿದ್ದರೆ ಏನಾಶ್ಚರ್ಯವೂ ಇಲ್ಲ.

ಒಂದಿಷ್ಟು ಎಕನಾಮಿಕ್ಸ್ ಭೋಜ ಶೆಟ್ಟರೂ, ಭೋಜನದ ಭಟ್ರೂ!

ವಿಕ ಸಕ್ಸಸ್ ಹಿಂದೆ ಮೇಲ್ನೋಟಕ್ಕೆ ಸಂಕೇಶ್ವರರ ಮಾರ್ಕೆಟಿಂಗ್ ತಂತ್ರ, ವಿಭಟ್ಟರ ಪ್ರತಿಭೆ ಇತ್ತು ಎಂದುಕೊಳ್ಳಬಹುದು ಸಾಮಾನ್ಯ ಓದುಗ. ಆದರೆ ಅದು ಪೂರ್ತಿ ನಿಜವಲ್ಲ. ಸಂಕೇಶ್ವರರ ಒಂಡು ರೂ.ಗೆ. ಪತ್ರಿಕೆ, ಒಂಭತ್ತು ಎಡಿಷನ್ನು, ಹಳ್ಳಿಹಳ್ಳಿಗೆ ಬೆಳಗಿನ ಜಾವಕ್ಕೇ ಪತ್ರಿಕೆ ತಲುಪಿಸಿದ VRL ಟ್ರಾನ್ಸ್‌ಪೋರ್ಟಿನ ನೆಟ್‌ವರ್ಕುಗಳಿಂದ ವಿಕದ ಸರ್ಕುಲೇಷನ್ ಏರಿದ್ದಂತೂ ನಿಜ. ಇನ್ನು ವಿಭಟ್ಟರ ಸಿಟಗಾದೆ, ಗರಂ ಮಸಾಲಾದಂತವು ಓದುಗನಿಗೆ ಮಜಾ ಕೊಟ್ಟಿರಬಹುದು. ಆದರೆ ಪತ್ರಿಕೆಯೊಂದರ ಪ್ರಸಾರ ಮಿತಿಮೀರಿ ಏರುತ್ತಾ ಹೋದ ಹಾಗೆ ಅದರ ಲಾಸೂ ಬೆಳೆಯುತ್ತದೆ ಎಂಬ ಸಿಂಪಲ್ ಲಾಜಿಕ್ ಜನಸಾಮಾನ್ಯರಿಗೆ ಗೊತ್ತಾಗುವುದಿಲ್ಲ. ಪ್ರಸಾರ ಏರಿದಂತೆ ಅಷ್ಟೇ ಜಾಹಿರಾತು ಕೂಡ ಸಿಗಬೇಕು. ಹಣ ಕೋಟಿಗಳ ಲೆಕ್ಕದಲ್ಲಿ ಹರಿದು ಬರಬೇಕು. ಆಗಲೇ ಪತ್ರಿಕೆ ಉಳಿಯುವುದು.



ಭೋಜಶೆಟ್ಟರ್

ಆ ಲೆಕ್ಕದಲ್ಲಿ ಹೇಳಬೇಕೆಂದರೆ ವಿಕಗೆ ಜಾಹಿರಾತು ತಂದು ಸುರಿದು ಕಾಪಾಡಿ[illegible] ಪತ್ರಿಕೋದ್ಯಮದ ಭೋಜಶೆಟ್ಟರ್ ಎಂಬುವರೇ ವಿನಃ ವಿಭಟ್ಟರ [illegible] ಅಲ್ಲ, VRL ಗಾಡಿಗಳೂ ಅಲ್ಲ. ಸಂಕೇಶ್ವರ್ ವಿಕದ [illegible] ತಮ್ಮ [illegible] ಪಟಾಲಂ [illegible] ಕುಳಿತಿರುತ್ತಿದ್ದರು. ಇವರು [illegible] ಗಿರಲಿಲ್ಲ

ಕಳೆದ ಮೂರು ದಶಕಗಳಿಂದ ಪತ್ರಿಕೋದ್ಯಮದಲ್ಲಿರುವ ಭೋಜಶೆಟ್ಟರ್ ಅಸಾಧ್ಯ ಮನುಷ್ಯ. ಇವರಿಗೆ ಕರ್ನಾಟಕದಾದ್ಯಂತ ನೂರಾರು ಜನ ಹಿರಿಯ ಸರ್ಕಾರಿ ಅಧಿಕಾರಿಗಳು ಅವರ ಕಚೇರಿ–ಮನೆ ವಿಳಾಸದವರೆಗೂ ಪರಿಚಯವಿದ್ದಾರೆ. ಯಾವುದೇ ಆಫೀಸಿಗೆ ಎಷ್ಟು ಹೊತ್ತಿಗೆ ಬೇಕಾದರೂ ನುಗ್ಗಿ ವಿಕಗೆ ಜಾಹಿರಾತು ಕುದುರಿಸಿ ಹಣ ತರುತ್ತಿದ್ದ ಭೋಜಶೆಟ್ಟರ್ ತರದವರೇ ವಿಕ ಕಾಪಾಡುತ್ತಿದ್ದವರು. ಈಗ್ಗೆ ನಾಲ್ಕೈದು ವರ್ಷಗಳ ಹಿಂದೆಯೇ ಅವರಿಗೆ ಮೂವತ್ತು ಸಾವಿರ ಸಂಬಳವಿತ್ತೆಂದರೆ ಭೋಜಶೆಟ್ಟರ್ ವಿಕಗೆ ಎಷ್ಟು ಮುಖ್ಯವಾಗಿದ್ದರೆಂದು ಗೊತ್ತಾಗುತ್ತದೆ. ನಂತರ ಅದೇನಾಯಿತೋ ಶೆಟ್ಟರ್ ವಿಕ ಬಿಟ್ಟು ವಿಭಟ್ಟರ ತರಲೆಗಳಿಂದ ಬೇಸತ್ತು ಸಂಯುಕ್ತ ಕರ್ನಾಟಕಕ್ಕೆ ಹೋದರು. ಈಗ ನೀವೇ ಒಮ್ಮೆ ಸಂಯುಕ್ತ ಕರ್ನಾಟಕ ತಿರುವಿ ಹಾಕಿ ನೋಡಿ. ಅದಕ್ಕೆ ಮೊದಲಿಗಿಂತಾ ಜಾಸ್ತಿ ಜಾಹಿರಾತು ಸಿಗುತ್ತಿವೆ. ಭೋಜಶೆಟ್ಟರ್ ಸಾಮರ್ಥ್ಯ ಅದು.

ವಿಕದಂತಾ ಪತ್ರಿಕೆಗಳಿಗೆ ಜಾಹಿರಾತೇ ಪ್ರಾಣ ಉಳಿಸುವ ಸಾಧನ ಹೇಗೆಂದು ತಿಳಿಯಲು ಒಂದು ಸರಳ ಲೆಕ್ಕಾಚಾರ ಮಾಡಬಹುದು.

ಪ್ರತಿದಿನ 6 ಲಕ್ಷ ಪ್ರತಿ ಪ್ರಿಂಟಾಗುತ್ತಾ 2.50 ರೇಟಿನಲ್ಲಿ ಮಾರಾಟವಾಗುವ ವಿಕ ದಿನಕ್ಕೆ 15 ಲಕ್ಷ ವ್ಯಾಪಾರ ಮಾಡುತ್ತದೆ. ಅದರಲ್ಲಿ ಏಜಂಟರ ಕಮಿಷನ್ 30%, ಸಾರಿಗೆ ಇತ್ಯಾದಿ ಎಂದು 6 ಲಕ್ಷ ತೆಗೆದರೆ ಉಳಿಯುವುದು ಕೇವಲ 9 ಲಕ್ಷ ರೂ. ಈ ಮೊತ್ತ ತಿಂಗಳಿಗೆ ಎರಡೂ ಮುಕ್ಕಾಲು ಕೋಟಿಯಾಗುತ್ತದೆ. ಇನ್ನು ಜಾಹಿರಾತು. ಆದಾಯ....

ವಿಕ ದಿನಕ್ಕೆ 20 ಲಕ್ಷ ರೂ. ಜಾಹಿರಾತು ದುಡಿಯುತ್ತದೆ ಎಂದಿಟ್ಟುಕೊಂಡರೂ ತಿಂಗಳಿಗೆ ಆರು ಕೋಟಿಯಾಯಿತು. ಅಂದರೆ ಒಟ್ಟು ಆದಾಯ ತಿಂಗಳಿಗೆ 8.75 ಕೋಟಿ ರೂ. ಆಯಿತು.

ಆದರೆ ಖರ್ಚಿನ ಬಾಬತ್ತೇನೆಂದು ನೋಡಿ. ಸಂಬಳ, ಸಾರಿಗೆ, ಫೋನು, ಫ್ಯಾಕ್ಸ್, ಕರೆಂಟು ಇತ್ಯಾದಿ ಕನಿಷ್ಠವೆಂದರೂ 1 ಕೋಟಿ. ಇನ್ನು ವಿಕದ 16 ಪುಟಗಳ ಒಂದು ಪ್ರತಿ ಪ್ರಿಂಟಿಸಲು ನ್ಯೂಸ್ ಪ್ರಿಂಟು, ಇಂಕು ಅಂತೆಲ್ಲಾ ಹೇಗೆ ಲೆಕ್ಕಾ ಹಾಕಿದರೂ ಕನಿಷ್ಠ 5 ರೂ. ಬೇಕೇಬೇಕು. ಆ ಲೆಕ್ಕದಲ್ಲಿ 6 ಲಕ್ಷ ಪ್ರತಿಗಳಿಗೆ ತಿಂಗಳಿಗೆ 9 ಕೋಟಿ ಹರಿದು ಹೋಗುತ್ತದೆ. ಅಂದರೆ ವಿಕದ ತಿಂಗಳ ಖರ್ಚು 10 ಕೋಟಿ, ಆದಾಯ ಕೊಂಚ ಕಡಿಮೆ 9 ಕೋಟಿ.



ವಿಶ್ವೇಶ್ವರ ಭಟ್

ದುರ್ಭಿಕ್ಷದಲ್ಲಿ ಅಧಿಕ ಮಾಸವೆಂಬಂತೆ ಸ್ವಂತ ಅನ್ನ ದುಡಿದು ಕೊಳ್ಳಲಾರದ ತಮ್ಮ ಉಷಾ ಕಿರಣ, ಆರಕ್ಕೇರದೆ, ಮೂರಕ್ಕಿಳಿಯದೆ saturation point ತಲುಪಿ ಏದುಸಿರು ಬಿಡುತ್ತಿದ್ದ Vijay Times ನ ಖರ್ಚುಗಳನ್ನು ಸೇರಿಸಿ ಲೆಕ್ಕ ಹಾಕಿದರೆ VRL ಪಬ್ಲಿಷರ್ಸ್‌ಗೆ ಆಕ್ಸಿಡೆಂಟ್ ಆಗಿತ್ತೆನ್ನುವುದು ಖಾತರಿಯಾಗುತ್ತದೆ.

ಆದರೆ ಅದೇ ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್‌ಗಳ ಆರ್ಥಿಕ ಆರೋಗ್ಯ ಚೆನ್ನಾಗೇ ಇದೆ. ಚಿಕ್ಕ-ಚೊಕ್ಕ ಟೀಂ, moderate circulation, ಸಖತ್ ಜಾಹಿರಾತು ಆದಾಯ.....ಇದೇ ಅದು survive ಆಗಲು ಕಾರಣವಾಗಿದೆ.


ಎಪಿಎಂಸಿ: ಕಣಗಳ ಹೆಸರಿನಲ್ಲಿ ಹಣದ ರಾಶಿ!

ಕೊಪ್ಪಳ

ಕೊಪ್ಪಳ ಎಪಿಎಂಸಿ ಅಧ್ಯಕ್ಷ, ಅವನ ಮಗ ಮತ್ತು ಅವನ ಹೆಸರಿನಲ್ಲಿ ಕಳಪೆ ಕೆಲಸ, ಅದಕ್ಕೆ ಸಾಥಿಯಾಗಿ ಸೆಕ್ರೆಟರಿ ಮಲ್ಲಿಕಾರ್ಜುನ, ಉಳಿದಂತೆ ಕೆಲ ಸದಸ್ಯರು, ರೈತ ಸಂಘದ ನಾಲಾಯಕರು, ಇಂಜನಿಯರ್ ನಾಚಮುತ್ತು ಸೇರಿ ಕಣಗಳ ಹೆಸರಿನಲ್ಲಿ ಹಣದ ಸುಗ್ಗಿ ಮಾಡಿರುವ ಮೊತ್ತ ಬರೀ 23 ಲಕ್ಷ. ಇವರೆಲ್ಲರಿಗೂ ತಿನ್ನುವ ಪಾಠ ಹೇಳೋ ದೊಡ್ಡ ಮನುಷ್ಯ ಶಾಸಕ ಬಸವರಾಜ ಹಿಟ್ನಾಳನ ಅಭಯ ಹಸ್ತ ಬೇರೆ. ಹೀಗಾದರೆ ಎಪಿಎಂಸಿ ಉಳಿದೀತೇ?


ಜೆ. ಮಲ್ಲಿಕಾರ್ಜುನ, ಕೃ.ಉ.ಮಾ.ಸ. ಕಾರ್ಯದರ್ಶಿ

ದುಡ್ಡಿದ್ದ ದಲ್ಲಾಳಿಗಳಿಗೆ ಮಾರುಕಟ್ಟೆ ಜಮೀನು ಮಾರಿದ್ದು, ಬೀದಿ ದೀಪಗಳ ಡಬಲ್ ಖರೀದಿ, ಬಳಿ ಚೀಟಿ ಅವ್ಯವಹಾರ.... ಈಗ ರಾಶಿ ಮಾಡಲು ರೈತರಿಗೆ ಬೇಕಾಗುವ ಕಣಗಳ ಹೆಸರಿನಲ್ಲಿ ಭಯಂಕರ ಭ್ರಷ್ಟಾಚಾರ. ಇವೆಲ್ಲಾ ಕೊಪ್ಪಳ ಎಪಿಎಂಸಿಯ ಕಿರೀಟದ ಗರಿಗಳು. ಕೊಪ್ಪಳ ಎಪಿಎಂಸಿಗೆ ಅದೇನು ದರಿದ್ರ ಗಂಟು ಬಿದ್ದಿದೆಯೋ ಗೊತ್ತಿಲ್ಲ, 2000 ರಲ್ಲಿ ಅಧ್ಯಕ್ಷನಾಗಿದ್ದ (ಈಗ ಶಾಸಕ) ಬಸವರಾಜ ಹಿಟ್ನಾಳ್ ನೀರಾವರಿ ಭಾಗದಿಂದ ಬಂದಂಥ ಆಸಾಮಿ. ಹೀಗಾಗಿ ಸದಾ ಹಸಿರು ಅಥವಾ ಹಣದ ಜಾಗ ಹುಡುಕುವ ಚಟವಂತ. ಹಸಿರು, ಹಣ ಎರಡೂ ಇರದ ಕೊಪ್ಪಳ ಎಪಿಎಂಸಿಯಲ್ಲಿ ದುಡ್ಡು ಮಾಡುವ ದಾರಿ ಹುಡುಕಿದ ಹಿಟ್ನಾಳ್, ಗವಿಮಠ ರೋಡಿನಲ್ಲಿ ಮಳಿಗೆ ಮಾಡಿ ದುಡ್ಡು ತಿಂದ. ಜಾಗ ಮಾರಿ ದುಡ್ಡು ಗಳಿಸಿದ. ಪುಣ್ಯ ಏನೆಂದರೆ ಎಪಿಎಂಸಿ ಕಟ್ಟಡ ಮತ್ತು ಸಿಬ್ಬಂದಿಯನ್ನು ಬಿಟ್ಟು ಎಲ್ಲವನ್ನೂ ಮಾರಿ ಬಿಟ್ಟ. ಹಿಟ್ನಾಳ ಅಧ್ಯಕ್ಷ ಅವಧಿ ಮುಗಿಸಿ, ಕೊಪ್ಪಳಕ್ಕೆ ಶಾಸಕನಾಗಿ ಕಡಿದು ಕಟ್ಟೆ ಹಾಕಿದ್ದಕ್ಕಿಂತಲೂ ವರ್ಷಕ್ಕೆ ಅರ್ಧ ಕೋಟಿ ಲೂಟಿ ಮಾಡುತ್ತಿರುವುದೇ ಸಾಧನೆ. ಅತ್ತ ಎಪಿಎಂಸಿಗೆ ತಹಸೀಲ್ದಾರ (ಈಗ ನಿವೃತ್ತ) ಕೃಷ್ಣಾಜಿ ತಿಪ್ಪಣ್ಣ ಗುಜ್ಜರ ಆಡಳಿತಾಧಿಕಾರಿಯಾಗಿ ಬಂದದ್ದೇ ತಡ ಸೆಕ್ರೆಟರಿ ಮಲ್ಲಿಕಾರ್ಜುನ ಬಕಾಸುರನ ಕ್ಲೋನ್‌ನಂತಾದ. ಕಳೆದ ನಾಲ್ಕು ವರ್ಷಗಳಿಂದ ಅಂಡಿಗೆ ಫೆವಿಕಾಲ್ ಅಂಟಿಸಿಕೊಂಡು ಕುರ್ಚಿಗೆ ಅಮರಿಕೊಂಡಿರುವ ಮಲ್ಲಿ, ತಿನ್ನಲು ದಾರಿ ಹುಡುಕಿ ಗಂಜ್‌ನಲ್ಲಿ ಚೆನ್ನಾಗಿ ಉರಿಯುತ್ತಿದ್ದ 52 ಬೀದಿ ದೀಪಗಳು ಇದ್ದರೂ ಎಪಿಎಂಸಿ ನಿರ್ದೇಶಕರಿಂದ ಒಪ್ಪಿಗೆ ಪಡೆಯದೇ 23 [illegible] ವ್ಯಾಪರ್ ಲ್ಯಾಂಪ್‌ಗಳನ್ನು [illegible] ರೂ.ಗಳಿಗೆ ಮಹೇಂದ್ರ ಎಲೆಕ್ಟ್ರಿಕಲ್ಸ್‌ನಿಂದ ಖರೀದಿಸಿದ. ಇದಾದ ಕೆಲ ದಿನಕ್ಕೆ ಮತ್ತೆ 69 ಸೋಡಿಯಂ ವ್ಯಾಪರ್ ಲ್ಯಾಂಪ್‌ಗಳನ್ನು ಅರಿಹಂತ ಎಂಟರ್‌ಪ್ರೈಸಸ್‌ನಿಂದ ಖರೀದಿಸಿದ. ಇವೆಲ್ಲವನ್ನು ಸರಿಯಾಗಿ ಜಾಹಿರಾತು ನೀಡದೇ ಸಿಂಗಲ್ ಕೊಟೇಶನ್‌ಗೆ ಖರೀದಿ ಮಾಡಿದ. ಈಗ ಹುಡುಕಿದರೆ 92 ಲ್ಯಾಂಪ್‌ಗಳು ನಾಪತ್ತೆ. ಈ ಅವ್ಯವಹಾರದ [illegible] ಪರಮ ಭ್ರಷ್ಟ ಗಂಗಾವತಿ [illegible] ಗೋವಿಂದ್ ರಾಜ್ ಬಂದು ಇಬ್ಬರೂ ಸಜಾತಿಯರಾದ ಕಾರಣ ತನಿಖೆಯ ನೆಪದಲ್ಲಿ ದಿನ ದೂಡುತ್ತಿದ್ದಾರೆ. ಎಪಿಎಂಸಿ ಅಸಿಸ್ಟೆಂಟ್ ಡೈರೆಕ್ಟರ್ ಕಛೇರಿಗೆ ಹೊಂದಿದ್ದ ಕ್ಯಾಂಟೀನ್‌ನವನಿಂದ 51 ಸಾವಿರ ಬಾಕಿ ಹಣ ಪಡೆದು ಈಗ ಅವನು ಓಡಿ ಹೋಗಿದ್ದಾನೆಂದು ರೀಲು ಬಿಡುತ್ತಿದ್ದಾನೆ ಸೆಕ್ರೆಟರಿ ಮಲ್ಲಿಕಾರ್ಜುನ. ಗಿಣಿಗೇರಿ ದನದ ಸಂತೆಯಲ್ಲಿ ಮಾರಾಟ ವಾಗುವ ದನವೊಂದಕ್ಕೆ ರೂ. 5 ಬದಲು 50 ರೂ. ಶುಲ್ಕವನ್ನು ಕಳೆದ 9 ವರ್ಷಗಳಿಂದ ವಸೂಲು ಮಾಡುತ್ತಿದ್ದಾನೆ ಶಿವಕುಮಾರ. ಪ್ರತಿ ನಗರದಲ್ಲೊಂದು ಲಕ್ಷಾಂತರ [illegible] ಟೆಂಡರ್ ನೀಡದೇ 23 ಕಾಮಗಾರಿಗಳನ್ನು [illegible] ಅಧ್ಯಕ್ಷನ ಮಗ ಪ್ರಶಾಂತಗೌಡನೇ ಹೊಡೆದಿದ್ದಾನೆ. [illegible] ಸದಸ್ಯ ಕೃಷ್ಣರೆಡ್ಡಿ 5 ಲಕ್ಷ, ಹನುಮರೆಡ್ಡಿ 5 ಲಕ್ಷದ [illegible] ಜೊತೆಗೆ ಕೃಷ್ಣರೆಡ್ಡಿ ಅಂದಾಜು ಪತ್ರಿಕೆ ತಯಾರಿಸದೇ ಚಕ್ಕಸಿಂದೋಗಿ ಕಾಮಗಾರಿ ಬಿಟ್ಟು ಹಿರೇಸಿಂದೋಗಿಯಲ್ಲಿ ಕಣ ನಿರ್ಮಿಸಿ ಎಂದು ಇಂಜನಿಯರ್ ನಾಚಿಮುತ್ತು ಜೊತೆ ಜಗಳವಾಡಿದ್ದಾನೆ. ಇಷ್ಟೂ ಅರ್ಧದಷ್ಟು ಕಾಮಗಾರಿ ನಡೆಯದಿದ್ದರೂ ಅವರ ಬಿಲ್ಲನ್ನು ಎತ್ತಿ ಹಾಕಿದ್ದಾರೆ ಈ ಖದೀಮರು. ಅತ್ಯಂತ ಕಳಪೆ ಮಟ್ಟದಲ್ಲಿ ಮಾಡಿರುವ ಈ ಕಾಮಗಾರಿಗಳು ಮುಗಿಯದಿದ್ದರೂ ಶಾಸಕ ಬಸವರಾಜ ಹಿಟ್ನಾಳ ಮೊನ್ನೆ ತಾನು ಕಲ್ಯಾಣಿ ಫ್ಯಾಕ್ಟರಿಯಲ್ಲಿ ಡಿಪಾಸಿಟ್ ಇಡಬೇಕೆಂದು ಅರ್ಧರ್ಧ ಹಣ ತಂದುಕೊಡಿ ಎಂದು ಒತ್ತಾಯದಿಂದ [illegible] ಮಾಡಿಸಿದ್ದಾನೆ.


ಬಸವರಾಜ್ ಹಿಟ್ನಾಳ್

ಈ ಮಧ್ಯೆ ತಿಂಗಳ ಹಿಂದೆ ತಾಲೂಕು ರೈತ ಸಂಘದ ಅಧ್ಯಕ್ಷ ಭೀಮಸೇನ ಮುಗ್ಧ ರೈತ ಬಸಪ್ಪನ ಸಾವಿಗೆ ಕಾರಣನಾದರೆ ಈಗ ಜಿಲ್ಲಾ ಕಾರ್ಯದರ್ಶಿಗಿದ್ದ ಸಂಗನಗೌಡ ಕಳಪೆ ಕಣ ನಿರ್ಮಿಸಿ ತಾನೊಬ್ಬ ರೈತ ವಿರೋಧಿ ಎಂದು ತೋರಿಸಿದ್ದಾನೆ.


ರೈತಸಂಘದ ಕಾರ್ಯದರ್ಶಿ ಸಂಗನಗೌಡ ಕಾಸನಕಂಡಿ ಗ್ರಾಮದಲ್ಲಿ ನಿರ್ಮಿಸಿರುವ ಕಳಪೆ ಕಣ

ಚೆಲೆಯ ಮನೆ ಹಾಗೂ ಭರ್ಜರಿ ಬಡ್ಡಿ ವ್ಯವಹಾರ ನಡೆಸುತ್ತಿದ್ದಾನೆ.

ಈಗ ಎಪಿಎಂಸಿ ಅಧ್ಯಕ್ಷ ಶಿವನಗೌಡ, ಆತನ ಪುತ್ರ ಪ್ರಶಾಂತ ಗೌಡ, ಸದಸ್ಯರಾದ ಕೃಷ್ಣರೆಡ್ಡಿ, ಹನುಮರೆಡ್ಡಿ ಮತ್ತು ಉಪಾಧ್ಯಕ್ಷೆ ಬಸವರಾಜೇಶ್ವರಿ, ಹಾಸಗಲ ಗೌಡ ಸೇರಿ 2005-06 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ 60 ಲಕ್ಷದ ಮಂಜೂರಿ ತಂದು ಅದರಲ್ಲಿ 38 ಲಕ್ಷದಲ್ಲಿ 38 ಕಣಗಳ ನಿರ್ಮಿಸುವ ಕಾಮಗಾರಿಯಲ್ಲಿ ಲೂಟ ಮಾಡುತ್ತಿದ್ದಾರೆ. 13 ಕಾಮಗಾರಿಗಳಿಗೆ ಕೆಲಸದ

ಹಾಗೆ ನೋಡಿದರೆ ಕಾಸನಕಂಡಿಯ ಕಣದ ಕಾಮಗಾರಿ ಗುತ್ತಿಗೆ ಟ.ಬಿ ಡ್ಯಾಂನ ಕೆ. ಶ್ರೀನಿವಾಸರಾವ್ ಎಂಬುವವರಿಗೆ ಸಿಕ್ಕಿದೆ. ಅದನ್ನು ಅನಧಿಕೃತವಾಗ್ಗಿ ಪಡೆದಿರುವ ಸಂಗನಗೌಡ ಸರ್ಕಾರಿ ಜಾಗ ಬಿಟ್ಟು ಕಳಕಪ್ಪ ಎಂಬುವವರ ಹೊಲದಲ್ಲಿ ಅರ್ಧ ಲಕ್ಷದಲ್ಲಿ ಕಳಪೆ ಕೆಲಸ ಮಾಡಿದ್ದಾನೆ. ಅಧ್ಯಕ್ಷ, ಅವನ ಮಗ, ಸದಸ್ಯರು, ಶಾಸಕ, ಸೆಕ್ರೆಟರಿ ಇವರ ಪ್ಯಾಂಟ್ ಬಿಚ್ಚಬೇಕಾದ ರೈತ ಸಂಘದವರೇ ಮೂರೂ ಬಿಟ್ಟು ಕಳಪೆ ಕೆಲಸಕ್ಕೆ ಸುಲಿಗೆಗೆ ಇಳಿದರೆ, ಇನ್ನು ರೈತ ಉಳಿದಾನು ಹೇಗೆ?

ಲೋಕಾಯುಕ್ತ ವೆಂಕಟಾಚಲರು ಒಮ್ಮೆ ಕೊಪ್ಪಳ ಎಪಿಎಂಸಿಗೆ ಬಂದು ಹೋಗಲಿ.

-ಹುಸೇನ್ ಪಾಷಾ

ಅಕ್ರಮ ಮೈನ್ಸ್‌ಗಳಲ್ಲಿ ಆಲ್ ಪಾರ್ಟಿ ಮೀಟಿಂಗ್!

ಬಾಗಲಕೋಟೆ

ಪಕ್ಷಭೇದ ಮರೆತು ಎಲ್ಲ ಪಾರ್ಟಿಗಳ ನಾಯಕರಿಲ್ಲಿ ಒಂದಾಗುತ್ತಾರೆ. ಹೌದು, ಅಕ್ರಮ ಗಣಿಗಾರಿಕೆಯಲ್ಲಿ ಎಲ್ಲ ರಾಜಕಾರಣಿಗಳೂ ಒಟ್ಟಾಗಿಯೇ ಊಟ ಮಾಡುತ್ತಿದ್ದಾರೆ.

ನಾಲ್ಕು ವರ್ಷಗಳಿಂದ ಬಾಗಲಕೋಟೆಯ ಹುನಗುಂದ ತಾಲ್ಲೂಕಿನ ಕಬ್ಬಣದ ಅದಿರನ್ನು ಲೂಟಿ ಹೊಡೆಯುತ್ತಲೇ ಸಾಗಿರುವ ದೊಡ್ಡನಗೌಡರ್ & ಬ್ರದರ್ಸ್ ಕಂಪನಿಗೆ ಭೂಗರ್ಭ ಇಲಾಖೆ, ಪರಿಸರ ಮಾಲಿನ್ಯ ಇಲಾಖೆಗಳ ಪೂರಾ ಬೆಂಬಲ; ಜಿಲ್ಲಾಡಳಿತಕ್ಕೋ ಸದಾ ಅದಿರು ಸವಿಯುವ ಚಪಲ. ಚೀನಾಕ್ಕೆ ಕಬ್ಬಣದ ಅದಿರು ರಫ್ತು ಮಾಡುವ ಬೆಳಗಾವಿ ಮೂಲದ ದೊಡ್ಡನಗೌಡರ್‌ಗೆ ಬೆಳಗಾವಿ, ಚಿಕ್ಕೋಡಿಗಳ ಬಿಜೆಪಿ ಸಂಸದರಾದ ಸುರೇಶ್ ಅಂಗಡಿ, ರಮೇಶ್ ಜಿಗಜಿಣಗಿಗಳ ಬೆಂಬಲವುಂಟು.


ಇಲ್ಲಿ ಬಾಗಲಕೋಟೆಯಲ್ಲಿ ಹುನಗುಂದದ ಬಿಜೆಪಿ ಶಾಸಕ ದೊಡ್ಡನಗೌಡ, ಗುಳೇದಗುಡ್ಡದ ಜೆಡಿಎಸ್ ಶಾಸಕ ಹುಲ್ಲಪ್ಪ ಮೇಟಿ, ಗುಳೇದಗುಡ್ಡದ ಮಾಜಿ ಶಾಸಕ ಕಾಂಗ್ರೆಸ್‌ನ ಸಂಜಯನಮಠ, ಬಾದಾಮಿಯ ಬಿಜೆಪಿ ಶಾಸಕ ಪಟ್ಟಣಶೆಟ್ಟಿ, ಬಾಗಲಕೋಟೆಯ ಮಾಜಿ ಕ್ರೀಡಾ ಸಚಿವ ಅಜಯಕುಮಾರ್ ಸರ್‌ನಾಯಕ್, ಬಾಗಲಕೋಟೆಯ ಮಾಜಿ ಎಂಪಿ ಆರ್.ಎಸ್. ಪಾಟೀಲ್–ಇವರೆಲ್ಲ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಅಕ್ರಮ ಗಣಿಗಾರಿಕೆಯ ಪಾಪದ ಫಲವನ್ನು ಸ್ವೀಕರಿಸುತ್ತಲೇ ದುಂಡಗಾಗಿದ್ದಾರೆ.


ಸರನಾಯಕ್

ಸರ್ಕಾರದೊಂದಿಗಿನ ಒಪ್ಪಂದದ ಪ್ರಕಾರ ಕಮತಗಿಯ ಸರ್ವೆ ನಂಬರ್ 13 ರಿಂದ 368 ರವರೆಗಿನ ಜಾಗದಲ್ಲಿ 2005 ರವರೆಗೆ ಗಣಿಗಾರಿಕೆ ನಡೆಸಲು ಅನುಮತಿ ಪಡೆದಿದ್ದ ದೊಡ್ಡನಗೌಡರ್‌ನ ಕಂಪನಿ, ಅವಧಿ ಮುಗಿದ ಮೇಲೂ ಗಣಿಗಾರಿಕೆ ನಡೆಸುತ್ತಲೇ ಇದೆ ಎಂದರೆ ಜಿಲ್ಲಾಧಿಕಾರಿ ಕೆ.ಎಸ್. ಪ್ರಭಾಕರನಿಗೆಷ್ಟು ಮಾಮೂಲು ಸಿಗುತ್ತಿರಬೇಕು ಲೆಕ್ಕ ಹಾಕಿ.

ದಿನಕ್ಕೆ 14 ಟನ್ ಒಯ್ಯಬೇಕಿದ್ದ ಟ್ರಕ್‌ಗಳು 20 ರಿಂದ 22 ಟನ್ ಅದಿರನ್ನು ಹೊತ್ತೊಯ್ಯುತ್ತ 5 ವರ್ಷಗಳಿಂದ ಸರ್ಕಾರಕ್ಕೆ ವಂಚನೆ ಮಾಡಲಾಗುತ್ತಿದೆ. ಹುನಗುಂದದ ಸರ್ಕಲ್ ಇನ್ಸ್‌ಪೆಕ್ಟರ್ ವಿಠ್ಠಲ ಜಗಲಿ ಎಂಬ ಪರಮಭ್ರಷ್ಟ ತನ್ನವೇ ಹತ್ತಾರು ಟಿಪ್ಪರ್‌ಗಳನ್ನು ಅದಿರು ಸಾಗಾಣಿಕೆಗೆಂದು ಬಾಡಿಗೆಗೆ ಬಿಟ್ಟಿದ್ದಾನೆ. ರಾಜಕಾರಣಿಗಳ ಸಹಾಯ ಹಸ್ತವೇ ಇರುವುದರಿಂದ RTO ಗಳು ಕಣ್ಣುಮುಚ್ಚಿದ್ದಾರೆ. ದೂರದರ್ಶನದ ಚಂದನ ವರದಿಗಾರ ಲಕ್ಷ್ಮಣ ಪುರೋಹಿತ, ಇಲಕಲ್ ಪುರಸಭೆ ಅಧ್ಯಕ್ಷ ವೆಂಕಟೇಶ್ ಸಾಕಾ, ಹುನಗುಂದ ಶಾಸಕ ದೊಡ್ಡನಗೌಡ ಪಾಟೀಲನ ಬಂಟ ರಾಜು ಬೋರಾ, ಬಾದಾಮಿ ಶಾಸಕ ಎಂ.ಕೆ. ಪಟ್ಟಣ ಶೆಟ್ಟಿಯ ಅಳಿಯ ಗುಡಮಿ, ಇಲಕಲ್‌ನ ಕಲ್ಲುಗಳ್ಳರಾದ ಶಾಂತು ಗುರವ, ಬೊಮ್ಮಲಿಂಗಯ್ಯ, ಕಾಟಾಪುರ (ಇಲ್ಕಾಳ)ಗಳೆಲ್ಲ ಕಂಡಕಂಡ ಕಡೆ ನೆಲಗೆಬರಿ ಅದಿರು ಕದ್ದು ಸಿರಿವಂತರಾದವರೇ.

ಮಾಜಿ ಎಂ.ಪಿ. ಆರ್.ಎಸ್. ಪಾಟೀಲ್‌ನ ಅಳಿಯ [illegible] ಎಂಬ ಮೈನ್ಸ್ [illegible]


ಮೇಟಿ

ಮುರುಗೇಶ್ ಕಡ್ಲಿಮಟ್ಟಿ ಎನ್ನುವವನೊಂದಿಗೆ ಸೇರಿದ ರವೀಂದ್ರ ಕಲಬುರ್ಗಿ, ಶಾಸಕ ಹುಲ್ಲಪ್ಪ ಮೇಟಿಯ ಮಗ ಮಲ್ಲನನ್ನು ಈ ದಂಧೆಗೆ ತಂದುಬಿಟ್ಟ: ಕಡ್ಲಿಮಟ್ಟಿ ಹೆಸರಿನಲ್ಲಿ 15 ಟಿಪ್ಪರ್ ಗಾಡಿಗಳನ್ನು ಖರೀದಿಸಿ ಮೈನ್ಸ್ ದಂಧೆಗೆ ಬಿಟ್ಟಿದ್ದಾರೆ. ಗಣಿ ಮತ್ತು ಭೂಗರ್ಭ ಇಲಾಖೆಯ ಅಧಿಕಾರಿ ನರಸಿಂಹಮೂರ್ತಿಗಂತೂ ಫಲವತ್ತಾದ ಈ ಜಾಗ ಬಿಟ್ಟು ಏಳಲು ಮನಸ್ಸೇ ಇಲ್ಲ. ಡಿ.ಸಿ. ಪ್ರಭಾಕರ್ ತನ್ನ ಆಪ್ತರಾದ ಅಸಿಸ್ಟೆಂಟ್ ಕಮಿಷನರ್ ಪಾಟೀಲ್, ಉಪ ತಹಶೀಲ್ದಾರ್ ಎಸ್.ಎಫ್. ಅರಳಿಮಟ್ಟಿ, ತಲಾಠಿ ಸಬರದ, ರೆವಿನ್ಯೂ ಇನ್ಸ್‌ಪೆಕ್ಟರ್ ಮೋಹನ ಕಟ್ಟೀಮನಿಗಳನ್ನು ಕಳಿಸಿ ವರದಿ ತರಿಸುವ ನಾಟಕವಾಡುತ್ತಾನಷ್ಟೇ. ಈ ಇಲಾಖೆಯ ಹೊರಬ್ಬಿಯ [illegible] ಸಾಕಷ್ಟು ತಿಂದೇ ಬದುಕಿದ್ದಾನೆ.

[illegible] ಧೂಳಿನಿಂದ [illegible] ಹೋಗುತ್ತಿದೆ ಗಣಿಗಾರಿಕೆಯಿಂದ ಅಂತರ್ಜಲದಮಟ್ಟ ಕುಸಿದಿದೆ. ಗಣಿಗಾರಿಕೆಯಲ್ಲಿ [illegible] ಆರೋಗ್ಯ ಕೆಡಿಸಿಕೊಂಡು ಕಡಿಮೆ ಕೂಲಿಗೆ ದುಡಿದು [illegible]

[illegible]

-[illegible]

ಬಾಲ ಕಾರ್ಮಿಕರ ಗೋಳು


[illegible] 2773 ಬಾಲಕಾರ್ಮಿಕರಿದ್ದಾರೆಂದು [illegible] ಬಾಲಕಾರ್ಮಿಕರಿಗೆ [illegible] ಡಿ.ಸಿ. ಪ್ರಭಾಕರ [illegible] ಸುರೇಶ್ [illegible] ಮೈನ್ಸ್‌ನಲ್ಲಿ 500 ಬಾಲ ಕಾರ್ಮಿಕರು ದುಡಿಯುತ್ತಿರುವುದು ಗೊತ್ತಿಲ್ಲವೇ? ದಿನಕ್ಕೆ 20 ರೂ. ಕೂಲಿಯಂತೆ ದುಡಿಯುವ ಈ ಬಾಲ ಕಾರ್ಮಿಕರು ರೋಗಪೀಡಿತರಾಗುತ್ತಿದ್ದಾರೆ.

[illegible] ಕಾರಣನಾಗಿರುವ ಡಿ.ಸಿ. ಪ್ರಭಾಕರ್‌ನಿಗೆ ಟ್ರಾನ್ಸ್‌ಫರ್ ಆಗಿದ್ದರೂ, ದೇವೇಗೌಡರ [illegible]

ಚೆಂದಿ-ಚೆಡ್ಡಿ ರಂಗಾಬದ್ದಿಯೂ... ಬೆಲ್ಲದ ಎಂಬ ಮೋಸದ ಮುದ್ದೆಯೂ....

ಈ ಕೋ-ಜಾ ಸರ್ಕಾರ ಬಂದ ಮೇಲೆ ಹುಬ್ಬಳ್ಳಿಯ ಪೊಲಿಟಿಕಲ್ ಡೀಲರುಗಳು ಮಾಯವಾಗಿ, ಆ ಸ್ಥಾನಕ್ಕೆ ಚಿಂದಿಚೆಡ್ಡಿಗಳು, ಹಾಳು ಹುಳಗಳೂ ಬಂದು ಕೂತಿವೆ.

ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯ ಸಿಪಿಐ ಎ.ಬಿ. ಸಿ. ಎಸ್ಐ ಪಾಪಯ್ಯನವರು ಕಷ್ಟಪಟ್ಟು ಚಿನ್ನಾಭರಣ ಕಳ್ಳರನ್ನು ಹಿಡಿದು 90 ಗ್ರಾಂ ಚಿನ್ನ ವಶಪಡಿಸಿಕೊಂಡ ಚಿನ್ನದಂಥಾ ಸುದ್ದಿ ಮೇ 17ರ ಎಲ್ಲಾ ದಿನಪತ್ರಿಕೆಗಳಲ್ಲಿ ಮಿಂಚಿ ಮಾಯವಾಯ್ತು. ಆದರೆ ನಿಜವಾಗಿ ಕಳುವಾಗಿದ್ದು 140 ಗ್ರಾಂ ಚಿನ್ನ! ಉಳಿದ 50 ಗ್ರಾಂ ಚಿನ್ನಾಭರಣ ಮಿಶ್ರಿನ್ ಎಂಬ ಕಳ್ಳನ ಜ್ಯೂವೆಲ್ಲರಿ ಶಾಪ್‌ನಲ್ಲಿತ್ತು. ಕಳುವಾಗಿದ್ದ ಆಭರಣ ಖರೀದಿಗೆಂದೇ ಜ್ಯೂವೆಲ್ಲರಿ ಶಾಪ್ ತೆಗೆದಿರುವ ಈ ಮಿಶ್ರಿನ್ ಚೆಡ್ಡಿ ಕಾರ್ಪೋರೇಟರ್ ರಂಗಾಬದ್ದಿಯ ಅಳಿಯ... ಕೋ-ಜಾ ಸರ್ಕಾರ ಬಂದ ಮೇಲೆ ಉರವಣಿಗೆ ಹೆಚ್ಚು ಮಾಡಿರುವ ನಾನ್‌ಸೆನ್ಸ್ ಫೆಲೊ ರಂಗಾಬದ್ದಿ ಅಳಿಯನ ಕೇಸು ಮುಚ್ಚಿಸಿ ಹಾಕಿಬಿಟ್ಟ. ಕಸಬಾಪೇಟ ಪೊಲೀಸ್ ಠಾಣೆ ಪಕ್ಕದಲ್ಲೇ ಸುಳ್ಳ ರಂಗಾಬದ್ದಿಯ ಕಳ್ಳ ಅಳಿಯ ಮಿಶ್ರಿನ್‌ನ ಬಂಗಾರದಂಗಡಿ ಇದ್ದು ಪೊಲೀಸರಿಗೆಲ್ಲ ಗೊತ್ತಿದ್ದೂ ಗೊತ್ತಿಲ್ಲದಂತಿದ್ದಾರೆ.



ಚಂದ್ರಕಾಂತ ಬೆಲ್ಲದ

ಹಳೇಹುಬ್ಬಳ್ಳಿ, ಕಸಬಾಪೇಟ ಠಾಣೆಗಳ ಡೀಲಿಂಗ್ಸ್ ಈಗ ಚೆಡ್ಡಿ ರಂಗಾಬದ್ದಿ ಹಿಡಿತದಲ್ಲಿದ್ದರೆ, ಕಮರಿಪೇಟೆ ಸಬ್ ಅರ್ಬನ್ ಠಾಣೆ ನೋಡಿಕೊಳ್ಳಲು ಡಿ.ಕೆ. ಚವ್ಹಾಣ ಎಂಬ ಇನ್ನೊಂದು ಚೆಡ್ಡಿ ಕಾರ್ಪೋರೇಟರ್ ಇದೆ. ಕೇಶ್ವಾಪುರ, ವಿದ್ಯಾನಗರ ಪೊಲೀಸ್ ಸ್ಟೇಷನ್ನುಗಳ ಉಸ್ತುವಾರಿ ಜಗದೀಶ್ ಶೆಟ್ಟರ್‌ನ ಸಹೋದರನದು.

ಪೊಲೀಸ್ ಕಮಿಷನರ್ ಕಚೇರಿಯಲ್ಲಿಯ ಎಲ್ಲಾ ಡೀಲಿಂಗ್‌ಗಳನ್ನು ನೋಡಿಕೊಳ್ಳುತ್ತಿರುವುದು ಹೊರಟ್ಟಿಯ ಚೇಲಾಗಳಾದ ಪುಪುಲ್ಲಚಂದ್ರ ರಾಯನಗೌಡ್ರ ಅಲಿಯಾಸ್ ಪಪ್ಪಿ ಮತ್ತು ಕೋಸರೆಡ್ಡಿಗಳು.

ಚಾಕಳೆಗಲ್ಲಿಯ ಸಾವಜಿ ಹುಡುಗರು ಕ್ಲಬ್ ರೋಡ್‌ನಲ್ಲಿ ನಡೆಸುವ "ಕ್ಲಬ್ ಪ್ಯಾರಡೈಸ್" ಎಂಬ ಹೋಟೆಲ್ಲು ಹುಬ್ಬಳ್ಳಿಯ ಪುಡಾರಿಗಳ ಡೀಲಿಂಗ್ ಜಾಗ. ಮಧ್ಯರಾತ್ರಿಯಲ್ಲಿ ಮದ್ಯಪಾನ... ಮಧ್ಯೆ ಮಧ್ಯೆ ಡೀಲುಗಳ ಅನುಷ್ಠಾನ! 'ಕ್ಲಬ್ ಪ್ಯಾರಡೈಸ್'ಗೆ ಮದ್ಯ ಮಾರಲು ಅನುಮತಿಯಿಲ್ಲ. ಪುಡಾರಿಗಳ ಬೆಂಬಲವಿರುವುದರಿಂದ ಮದ್ಯ ಮಾರುತ್ತಾರೆ ರಾತ್ರಿಯೆಲ್ಲ!

ಬೆಲ್ಲದ 'ಪರಿವಾರ': ಸಿಕ್ಕಿದ್ದೆಲ್ಲ ಆಹಾರ!

ವಾಹನ ಮಾರಾಟದ ವ್ಯವಹಾರದಲ್ಲಿ 'ಕಾಯಕ ಯೋಗಿ' ಮಾಜಿ ಶಾಸಕ, ನಕಲಿ ಶರಣ, ಅಸಲಿ ಚೆಡ್ಡಿ ಚಂದ್ರಕಾಂತ ಬೆಲ್ಲದ ಮತ್ತು ಕುಟುಂಬ ಜನರಿಗೆ ಪಂಗನಾಮ ಹಾಕುತ್ತಲೇ ಸಾಗಿದೆ.

ಧಾರವಾಡ ಹತ್ತಿರದ ಟಾಟಾ ಶೋರೂಮ್‌ನಿಂದ ಬೆಲ್ಲದನ ಹತ್ತಾರು ಶೋರೂಮ್‌ಗಳಿಗೆ ಹೊಸ ವಾಹನಗಳನ್ನು ತಲುಪಿಸುವ ಕೆಲಸ ಮಾಡುತ್ತಿದ್ದ ಆರ್.ಆರ್. ಟ್ರಾವೆಲ್ಸ್‌ನವರು ಫೆಬ್ರವರಿ 10ರಿಂದ ತಮ್ಮ ಕೆಲಸ ನಿಲ್ಲಿಸಿ ಬೆಲ್ಲದನ ವಿರುದ್ಧ ಕಿಡಿಯಾಗಿದ್ದಾರೆ. ಏಕೆಂದರೆ ಕಳ್ಳ ಬೆಲ್ಲದ ಬಿಲ್ ಕೊಡದೇ ಸತಾಯಿಸುತ್ತಿದ್ದಾನೆ. ಬೆಲ್ಲದನ ಅಣ್ಣನ ಮಕ್ಕಳಾದ ಮಹೇಶ್, ಪ್ರಶಾಂತಗಳು ಕಾಕಾನ ಬೆಂಬಲದಿಂದ 'ಕಾವ್ ಕಾವ್' ಎಂದು ಆರ್. ಆರ್. ಟ್ರಾವೆಲ್ಸ್‌ನವರಿಗೇ ಕುಕ್ಕಲು ನೋಡುತ್ತಿದ್ದಾರೆ. 5 ತಿಂಗಳ ಹಣ 3 ಲಕ್ಷ ಕೇಳಿದ್ದೇ ತಡ, ಆರ್. ಆರ್. ಟ್ರಾವಲ್ಸ್‌ನ ನಾಸೀರ್ ಅಹ್ಮದ್ ಮೇಲೆ ಗೂಂಡಾಗಿರಿ ಮಾಡಲು ಹೋಗಿದ್ದಾರೆ.


ಹುಬ್ಬಳ್ಳಿ

ಈ ಹಿಂದೆ ಹುಬ್ಬಳ್ಳಿಯ ವಿದ್ಯಾನಗರದಲ್ಲಿ ಹೊಸ ಶೋರೂಮ್ ಕಟ್ಟಿಕೊಟ್ಟ ಕಂಟ್ರಾಕ್ಟರ್ ಎಲಿಗಾರನಿಗೆ ಒಂದೂವರೆ ಲಕ್ಷ ಕೊಡಲು ಒಂದೂವರೆ ವರ್ಷ ಸತಾಯಿಸಿತ್ತು ಈ ಬೆಲ್ಲದನ ಕುಟುಂಬ.

ಒಟ್ಟನಲ್ಲಿ ಚೆಡ್ಡಿಗಳು, ಹೊರಟ್ಟಿಯ ಹೈದರು ಹುಬ್ಬಳ್ಳಿಯನ್ನು ಆಳುತ್ತಿದ್ದಾರೆ.

ದೋ ನಂಬರ್ ಕಾರ್ಪೋರೇಟರ್‌ಗಳೂ... ಕೆಲಸಗೇಡಿ ನಡಮನಿಯೂ

ಕೆಲಸಗೇಡಿ ಕಮಿಷನರ್ ನಾರಾಯಣ ನಡಮನಿಗೆ ಕೋ-ಜಾ ಸರ್ಕಾರ ಭಡ್ತಿ ನೀಡಿ ಐಜಿಪಿ ಹುದ್ದೆ ದಯಪಾಲಿಸಿದೆ. ಕಮರಿಪೇಟೆಯ ಡ್ರಿಂಕ್ಸ್ ಬಂದ್ ಮಾಡಿಸಿದೆ ಎನ್ನುತ್ತಲೇ ಓಣಿಓಣಿಗಳಲ್ಲಿ ಸರ್ಕಾರಿ ಸರಾಯಿ ಹೇರಳವಾಗಿ ಲಭ್ಯವಾಗುವಂತೆ ಮಾಡಿದ ನಡಮನಿ, ಚೇಂದ್ರೆ, RR, ಸಾಮ್ರಾಟ, ದುರ್ಗಾಂಬಾ ಎಂಬ ಖಾಸಗಿ ಸಾರಿಗೆಯವರನ್ನು ಬೆಂಬಲಿಸುತ್ತಲೇ ಇದ್ದಾನೆ.



ಹೊರಟ್ಟಿ

ಚೆಡ್ಡಿ ಸಂಸದ ಪ್ರಹ್ಲಾದ್ ಜೋಶಿಯ ಆಫೀಸೇ ಕಳ್ಳತನಕ್ಕೀಡಾಗಿದೆ. ಮೇ 14ರಂದು ಹುಬ್ಬಳ್ಳಿ ರೈಲು ನಿಲ್ದಾಣದಲ್ಲಿ ಆಸ್ಟ್ರೇಲಿಯಾ ಪ್ರಜೆಯ ಬಳಿಯಿದ್ದ 1.20 ಲಕ್ಷ, ಮೇ. 19ರಂದು ಮತ್ತೋರ್ವ ಪ್ರಯಾಣಿಕನ 1.74 ಲಕ್ಷ, ಮೇ 22ರಂದು ಡಾ. ಡಿ.ಆರ್. ಹಿರೇಗೌಡರ ಮನೆಯಿಂದ 1.20 ಲಕ್ಷ, ಮಧುರಾ ಕಾಲೋನಿಯ ಪತ್ರಕರ್ತರ ವಿಕ್ಟರ್ ಬೈಕ್‌ಗಳೆಲ್ಲ ಕಳುವಾಗಿವೆ. ಈ ಸಿರೀಸ್ ಕಳ್ಳತನವನ್ನು ಒನ್‌ಡೇ ಸಿರೀಸ್ ತರಹ ಎಂಜಾಯ್ ಮಾಡುತ್ತಿದ್ದಾನೆ ನಾರಾಯಣ ನಡಮನಿ.

ಡಿಸಿಪಿ ರವಿಕಾಂತೇಗೌಡರ ಹೆಸರು ಕೆಡಿಸಿ, ಅವರನ್ನು ಟ್ರಾನ್ಸ್‌ಫರ್ ಮಾಡಿಸುವ ಕುತಂತ್ರವನ್ನು ನಡಮನಿ ಮಾಡುತ್ತಿದ್ದಾನೆ.

ನಕಲಿ ಮದ್ಯದ ಕಮರಿಪೇಟೆ ಕುಳಗಳು, ನಕಲಿ ಸೋಪ್, ನಕಲಿ ಚಹಾಪುಡಿ ಮಾರುವ ಮೋಸಗಾರ ಮಾರ್ವಾಡಿಗಳು, ಸಾವಜಿಗಳು, ರೇಷನ್ ಅಕ್ಕಿ, ಸೀಮೆಎಣ್ಣೆ ನುಂಗುವ ಸಾಬಿಗಳು, ಗ್ಯಾಸನ್ನೇ ಉಸಿರಾಡುವ ಸಮಾಜವಾದಿ ಪಕ್ಷದ ಹರಿವಾಣ, ಪೆಟ್ರೋಲ್ ಕಳ್ಳ ಅಜೀಮ್ ಬಾಗೇವಾಡಿ, ಮಟ್ಕಾ ನಡೆಸುವ ಮಾಜಿ ಶಾಸಕ ಅಶೋಕ ಕಾಟವೆ ಬ್ರದರ್ಸ್‌ಗಳ ಹಾವಳಿ ಮಿತಿ ಮೀರಿದೆ.

ಇನ್ನು ಕಾರ್ಪೋರೇಷನ್ ತುಂಬಾ ಕಳ್ಳರೇ ತುಂಬಿದ್ದಾರೆ. ಮಾಜಿ ಮಹಾಪೌರ, ಹಾಲಿ ಕಾರ್ಪೋರೇಟರ್, ಕಿಸೆಗಳ್ಳರ ಗುರು ಪ್ರಕಾಶ್ ಕ್ಯಾರಕಟ್ಟಿ, ಗೂಂಡಾಗುರುಗಳೆನಿಸಿದ ಅನಿಲ ಪಾಟೀಲ್, ಪಪ್ಪಿ(ರಾಯನಗೌಡ್ರ), ಯಮನೂರ ಗುಡಿಹಾಳ, ಯಮನೂರು ಜಾಧವ, ದುರ್ಗಪ್ಪ ಬಿಜವಾಡ, ಲಕ್ಷ್ಮಣ ಉಪ್ಪಾರ, ಶಿವು, ಸಂತೋಷ ಹಿರೆಕೆರೂರ- ಈ ಎಲ್ಲಾ ಕಳ್ಳರು ಕಾರ್ಪೋರೇಟರ್‌ಗಳಾಗಿರುವಾಗ, ನಡಮನಿಯ ದೋಸ್ತ್‌ಗಳಾಗಿರುವಾಗ ಹುಬ್ಬಳ್ಳಿ ಜನರನ್ನು ಕಾಪಾಡುವವರಾರು? ಹುಂಬ ಪ್ರಕಾಶ ಉಳ್ಳಾಗಡ್ಡಿಮಠ, ದೋ ನಂಬರ್ ಮಾಫಿಯಾದ ಮಹೇಂದ್ರ ಸಿಂಘಿಗಳ ಉಪಟಳ ತಡೆಯುವವರಾರು?


ಮೊನ್ನೆ ಕೇಶ್ವಾಪುರ ಠಾಣೆಯ ವ್ಯಾಪ್ತಿಯಲ್ಲಿ ಆನಂದ ಜೋಗಲಘಟ್ಟ ಎನ್ನುವವರ ಮೇಲೆ ಶಿವು, ರಾಜೀವ್ ಪಾಟೀಲ, ರಜಾಕ್ ಎಂಬ ಪಂಟರ್‌ಗಳು ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಸಿಪಿಐ ಬರ್ಜೆ ಎಲ್ಲ ಗೊತ್ತಿದ್ದೂ ಸುಮ್ಮನೇ ಕುಳಿತಿದ್ದಾನೆ. ಹಲ್ಲೆ ಮಾಡಿದವರೆಲ್ಲ ಸುದರ್ಶನ ಶೆಟ್ಟಿ, ರವಿ ಕಲ್ಯಾಣಿ ಎಂಬ ಗೂಂಡಾಗಳ ಶಿಷ್ಯರು.

ರೈಲ್ವೆ ಉದ್ಯೋಗಿ ಜೇಮ್ಸ್ ಎನ್ನುವವರ ಭವಾನಿನಗರದ ಭೂಮಿ ನುಂಗಿದ ಸುದರ್ಶನ ಶೆಟ್ಟಿ ಅಲ್ಲೇ ಬಂಗಲೆ ಕಟ್ಟಿಸಿಕೊಂಡು ಆರಾಮಾಗಿದ್ದಾನೆ.


ಎಲ್ಲ ಕಳ್ಳರು, ರೌಡಿಗಳು ಖುಷಿಯಲ್ಲಿರುವಾಗ ನಾರಾಯಣ ನಡಮನಿಗೆ ಖುಷಿ ಆಗದೇ ಇರುತ್ತಾ?




ನಡಮನಿ



ರಂಗಾಬದ್ದಿ



ಪಪ್ಪಿ



ಅಶೋಕ್ ಕಾಟ್ವೆ




ರವಿಕಾಂತೇಗೌಡ

-ವರದಿಗಾರ

ಸಲ್ಮಾನ್‌ಖಾನ್ ಜೈಲಿಗೆ, ಸಾದೀಕ್ ಪೈಲ್ವಾನ ಹೊರಕ್ಕೆ!

ಜಿಂಕೆ ಬೇಟೆಯ ಕತೆಯಿದು. ಅಂತಾ ಸಲ್ಮಾನ್ ಖಾನ್‌ನನ್ನೇ ಜೈಲಿಗೆ ಹಾಕುವಷ್ಟು ಪ್ರಬಲ ಕಾನೂನುಗಳಿವೆ. ಆದರೆ ಹುಬ್ಬಳ್ಳಿಯ ಬಾಂಬೆ ಪೈಲ್ವಾನ್ ಅಲಿಯಾಸ್ ಸಾದೀಕ್ ಪೈಲ್ವಾನ್ ಹತ್ತಾರು ಜಿಂಕೆಗಳನ್ನು ಕೊಂದು, ತಿಂದು ಅರಗಿಸಿಕೊಳ್ಳಬಲ್ಲ. ಮೊನ್ನೆ ಮೇ 20ರ ರಾತ್ರಿ ಹಾವೇರಿ ಬಳಿ ಜಿಂಕೆಯೊಂದನ್ನು ಕೊಂದು ಹೊತ್ತೊಯ್ಯುವಾಗ ರೆಡ್‌ಹ್ಯಾಂಡ್ ಆಗಿ ಸಿಕ್ಕು ಜೈಲಿಗೆ ಸೇರಿದ್ದವನು ತಕ್ಷಣ ಬಿಡುಗಡೆಗೊಂಡ. ಈ ಜಿಂಕೆ ಹಂತಕನ ಬಾಯಿಗೆ ಸಕ್ಕರೆ ಹಾಕಿ, ಗಲ್ಲಕ್ಕೆ ಬೆಲ್ಲ ಕೊಟ್ಟ ಪುಣ್ಯಾತ್ಮ ಹಾವೇರಿಯ ಎ.ಸಿ.ಪಿ ಬಿ.ಬಿ. ಸಕ್ರಿ!

ಕಳೆದ ಬಾರಿ ನಮ್ಮ ಪತ್ರಿಕೆಯಿಂದ ಇಕ್ಕಿಸಿಕೊಂಡಿದ್ದ ಸೀಮೆಎಣ್ಣೆ ಕಳ್ಳ ಇಬ್ರಾಹಿಂ ಚಾಂದನಿಗೆ ಹಾವೇರಿ ಪೊಲೀಸರೆಂದರೆ ಫುಲ್ ಕ್ಲೋಸ್! ಇತ್ತ ಹುಬ್ಬಳ್ಳಿಯಲ್ಲಿ ಚಾಂದನಿಗೆ ಜಿಂಕೆಪ್ರಿಯ ಸಾದೀಕ್ ಕ್ಲೋಸ್ ದೋಸ್ತ್! So, ಅಲ್ಲಿಗೆ ಸಾದೀಕ್‌ನನ್ನು ಜೈಲಲ್ಲಿಡುವ 'ಪಾಪ'ವನ್ನು ಹಾವೇರಿ ಪೊಲೀಸರು ಮಾಡಿಯಾರೆ?



ಹುಬ್ಬಳ್ಳಿ-ಹಾವೇರಿ:

ಬಾಂಬೆ ಸೆ ಹುಬ್ಬಿ ತಕ್

ಮುಂಬೈ ಮೂಲದ 'ರಂಗ್ರೇಜ್' ಕುಟುಂಬದ ಸಾದೀಕ್ ಪೈಲ್ವಾನ್ ಹುಬ್ಬಳ್ಳಿಯಲ್ಲಿ ಸೆಟ್ಲ್ ಆಗಿ ಹಲವಾರು ವರ್ಷಗಳಾಯ್ತು. ಬಟ್ಟೆಗಳಿಗೆ ಬಣ್ಣ ಹಾಕುವ ಉದ್ಯೋಗ ಮಾಡುವ ಈ ಕುಟುಂಬದ ಗಂಡಸರಿಗೆ ಕುಸ್ತಿ ಆಡುವ 'ಕ್ರೀಡಾ ಮನೋಭಾವ.' ಸಾದೀಕ್ ಎದುರಾಳಿಗಳನ್ನು ಎತ್ತಿ ಒಗೆಯಲು ಗಟ್ಟಿಯಾಗಬೇಕಲ್ಲ, ಆದಕ್ಕೆ ಹುಬ್ಬಳ್ಳಿ ಪಕ್ಕದ ಕಲಘಟಗಿ ಹತ್ತಿರದ ಕಣಗಿನಹಾಳ, ಕಾರವಾರ ಜಿಲ್ಲೆಯ ಮುಂಡಗೋಡ, ಜೊಯಿಡಾ ಹಾಗೂ ಹಾವೇರಿ ಜಿಲ್ಲೆಯ ಅರಣ್ಯಗಳಿಗೆ ನುಗ್ಗಿ ಜಿಂಕೆಗಳನ್ನು ಸ್ವಾಹಾ ಮಾಡುತ್ತಲೇ ಇದ್ದಾನೆ.

ಹುಬ್ಬಳ್ಳಿಯ ಸೆಟ್ಲ್‌ಮೆಂಟ್‌ನ ಹರಿಣಶಿಕಾರಿ ಸಮುದಾಯದ ಕೆಲ ಬಲಾಢ್ಯ ಕುಟುಂಬಗಳು ಜಿಂಕೆ ಬೇಟೆಯಲ್ಲಿ ಪರಿಣಿತಿ ಪಡೆದಿವೆ. ಇವರು ಟ್ರೈನಿಂಗ್ ನೀಡಿದ ಆಕಳೊಂದು ಜಿಂಕೆಯ ಹಿಂಡನ್ನೇ ನಿರ್ದಿಷ್ಟ ದಿಕ್ಕಿಗೆ ಬರುವಂತೆ ಮಾಡಿ ಬಲೆಯಲ್ಲಿ ಸಿಕ್ಕಿ ಹಾಕಿಸುತ್ತದೆ! ಗದಗ, ಧಾರವಾಡ, ಹಾವೇರಿ, ಕಾರವಾರ ಜಿಲ್ಲೆಗಳ ಕಾಡುಗಳಲ್ಲಿನ ಜಿಂಕೆ, ಕಾಡೆಮ್ಮೆ, ಮೊಲ, ಮಿಕಗಳೆಲ್ಲ ಹುಬ್ಬಳ್ಳಿಯ ಕಿರಾತಕ ಜಿಂಕೆ ಹಂತಕರಿಗೆ ಬಲಿಯಾಗುತ್ತಲೇ ಇವೆ. ಅರಣ್ಯ ರಕ್ಷಕ ಅಧಿಕಾರಿಗಳೂ ಜಿಂಕೆ ಮಾಂಸಕ್ಕೆ ಮನಸೋತಿದ್ದು ಪೊಲೀಸರಿಗೂ ಆ ರುಚಿ ಹತ್ತಿಸಿದ್ದಾರೆ. ಅದಕ್ಕೇ ಪ್ರತಿ ರವಿವಾರ ಹುಬ್ಬಳ್ಳಿಯ ಸೆಟ್ಲಮೆಂಟನಲ್ಲಿ ಒಂದಾದರೂ ಜಿಂಕೆ ಬಲಿಯಾಗೇ ಆಗುತ್ತದೆ.

ಮೇ 20 ರ ರಾತ್ರಿ 3 ಗಂಟೆಗೆ ಹಾವೇರಿ ಎ.ಸಿ.ಪಿ. ಸಕ್ರಿ ಹಿಡಿದ ಸಾದೀಕ್ ಜೀಪಿನಲ್ಲಿ ಜಿಂಕೆಯ ಹೆಣವೇ ಇತ್ತು. ಇಬ್ರಾಹಿಂ ಚಾಂದನಿಯ ಮೂಲಕ ಒಂದು ಲಕ್ಷದ ಡೀಲು ಮಾತಾಡಿದ ಹಾವೇರಿ ಎಸಿಪಿ 25 ಸಾವಿರಕ್ಕೇ ತೃಪ್ತನಾಗಿ ಸಾದೀಕ್ ಪೈಲ್ವಾನನ ಬಿಡುಗಡೆ ಮಾಡಿದ್ದಾನೆ.

ಅರಣ್ಯ ಇಲಾಖೆ, ಪೊಲೀಸ್ ಇಲಾಖೆಗಳಲ್ಲಿ ಕತ್ತೆಗಳೇ ತುಂಬಿರುವಾಗ ಕಾಡುಪ್ರಾಣಿಗಳು ಕೆಲವೇ ಕೆಲವರ ನಾಲಿಗೆ ಚಪಲಕ್ಕೆ ಬಲಿಯಾಗುತ್ತಲೇ ಇರುತ್ತವೆ. ಈಗಲಾದರೂ ಈ ಎರಡು ಇಲಾಖೆಗಳು ಕಣ್ಣು ತೆರೆಯುವಂತಾಗಲಿ.


-ವರದಿಗಾರ

ಸೇಂದಿ ಸಾರಾಯಿ ಮಿಂಚು ಬಡವರ ಅಕ್ಕಿಗೆ ಸಂಚು!

ರಾಯಚೂರು

[illegible] ಜಿಲ್ಲಾ [illegible] ಸಚಿವ [illegible] ಆಲ್ಕೋಡ್ ಹನುಮಂತಪ್ಪನವರು [illegible] ಜನರ [illegible] ಬದುಕು ಅಧ್ವಾನವಾಗಿ ಹೋಗಿದೆ. ಅಂಥಹ ಸಾರಾಯಿ [illegible] ಹೋಗುತ್ತಲೇ ಇದೆ. ರಾಯಚೂರಿಗೆ ಸೇಂದಿ ಹರಿದು [illegible] ಬರುತ್ತಲೇ ಇದೆ. ಮಟ್ಕಾ, ಇಸ್ಪೀಟು ಅವ್ಯಾಹತವಾಗಿ ಸಾಗಿಯೇ ಇದೆ. ಜನ ಗುಳೇ ಹೋಗುತ್ತಲೇ ಇದ್ದಾರೆ. ಬಡವರ ಪಾಲಿನ ಅಕ್ಕಿ ಕಳ್ಳರ ಪಾಲಾಗುತ್ತಲೇ ಇದೆ.

ಈ ಮೊದಲು ಸಾಕಷ್ಟು ಈಚಲ ಗಿಡಗಳಿಲ್ಲ ಎಂಬ ಕಾರಣಕ್ಕೆ ಮಾನ್ವಿ, ಸಿಂಧನೂರು, ಲಿಂಗಸೂರು ತಾಲ್ಲೂಕುಗಳಲ್ಲಿ ಸೇಂದಿ ತಯಾರಿಕೆ ನಿಷೇಧಿಸಲಾಗಿತ್ತು. ಇತ್ತೀಚೆಗೆ ರಾಯಚೂರು ಮತ್ತು ದೇವದುರ್ಗ ತಾಲ್ಲೂಕುಗಳಲ್ಲೂ ನಿಷೇಧಿಸಿದ ಮೇಲೆ ಕುಡುಕರು ಪಕ್ಕದ ಆಂಧ್ರದ ಹಳ್ಳಿಗಳಿಗೆ ಹೋಗಿ ಸೇಂದಿ ಕುಡಿದು ಬರತೊಡಗಿದರು. ಆಂಧ್ರದ ಸಾರಾಯಿ ಕುಡುಕರು ರಾಯಚೂರು ಜಿಲ್ಲೆಯ ಹಳ್ಳಿಗಳಿಗೆ ಬಂದು ಸಾರಾಯಿ ಸೇವಿಸಿ ಟೈಟಾಗತೊಡಗಿದರು. ಜನರ ಈ ಸಂಕಷ್ಟ ನೋಡಿದ ಮದ್ಯದ ಎಕ್ಸ್‌ಪರ್ಟ್‌ಗಳು ಆಂಧ್ರದಿಂದ ಕದ್ದು ಮುಚ್ಚಿ ಸೇಂದಿಯನ್ನು ಆಮದು ಮಾಡಿಕೊಳ್ಳುತ್ತಾ, ಆಂಧ್ರಕ್ಕೆ ಸಾರಾಯಿಯನ್ನು ರಫ್ತು ಮಾಡತೊಡಗಿದರು.




ಎಸ್ಪಿ ಹಿತೇಂದ್ರ

ಗಡಿಯಲ್ಲಿರುವ ಸಿಂಗನೋಡಿ, ಮಲಮಾಬಾದ್, ತುಂಟಾಪುರ, ಸರ್ಜಾ ಪುರ, ಎಡ್ಡೆಪಲ್ಲಿ, ಗಡಪನೂರು ಹಾಗೂ ನಗರದ ಮಂಗಳವಾರಪೇಟೆ, ಗದ್ವಾಲ್ ರಸ್ತೆ, ತಿಮ್ಮಾಪುರ ಪೇಟೆಗಳಲ್ಲಿ ಈ ವಿನಿಮಯ ವ್ಯಾಪಾರ ಜೋರಾಗಿಯೇ ನಡೆದಿದೆ. ಹಾಗೆಯೇ ಕೆಲವರು ಆಂಧ್ರ ದಿಂದ ಕ್ಲೋರೋಹೈಡ್ರೈಟ್ ತಂದು ತಾವೇ ಸೇಂದಿ ತಯಾರಿಸಿ ಮಾರುತ್ತಿದ್ದಾರೆ. ಇಂತಹ ಸೇಂದಿ ಕುಡಿದವರು ಆಸ್ಪತ್ರೆಯ ಪಾಲಾಗುತ್ತಿದ್ದಾರೆ. ಕೃಷ್ಣೆಯಲ್ಲಿ ಸೇಂದಿ 'ಆಮದಾ'ಗುತ್ತಿದ್ದರೆ, ತುಂಗಭದ್ರೆಯ ಮೂಲಕ ಸಾರಾಯಿ 'ರಫ್ತಾ'ಗುತ್ತಿದೆ.

ಹೈಟೆಕ್ ವೇಶ್ಯಾವಾಟಿಕೆಯೂ ಜೋರಾಗಿಯೇ ನಡೆದಿದೆ. ಹಾಗೆಯೇ ದೇವದಾಸಿ ಪದ್ಧತಿ ಹೆಸರಲ್ಲಿ ಬಡ ದಲಿತ ಹೆಣ್ಣು ಮಕ್ಕಳ ಶೋಷಣೆ ನಡೆದೇ ಇದೆ.

ಅಕ್ಕಿ ಮುಕ್ಕುವ ಪುಡಾರಿಗಳು!

ಯಾವುದೇ ವಿಘ್ನವಿಲ್ಲದೆ ನಡೆಯುತ್ತಿರುವ ದಂಧೆಯೆಂದರೆ ಅಕ್ಕಿ ದರೋಡೆ! ಜನರಿಗೆ ಸೇಂದಿ, ಸಾರಾಯಿ ಯಥೇಚ್ಛವಾಗಿ ಸಿಗುವಂತೆ ನೋಡಿಕೊಳ್ಳುವ ಜಿಲ್ಲಾಡಳಿತ ಬಡವರಿಗೆ ಅಕ್ಕಿ ಸಿಗದಂತೆಯೂ ನೋಡಿಕೊಳ್ಳುತ್ತಿದೆ.



ಉಸ್ತುವಾರಿ ಸಚಿವ ಆಲ್ಕೋಡ್ ಹನುಮಂತಪ್ಪ

ಮಾನ್ವಿಯ ಬಾಲಾಜಿ ಟ್ರೇಡರ್ಸ್‌ನವರ ಬಳಿ 600 ಸರ್ಕಾರಿ ಅಕ್ಕಿ ಮೂಟೆಗಳು ಸಿಕ್ಕಿದ್ದು ಜಿಲ್ಲಾಧಿಕಾರಿ ತುಷಾರ್ ಗಿರಿನಾಥರೇ ಈ ಪ್ರಕರಣದ ತನಿಖೆಯ ನೇತೃತ್ವ ವಹಿಸಿದ್ದರೂ ಇನ್ನೂ ಕ್ರಮ ಜರುಗಿಸಿಲ್ಲ. ಬಾಲಾಜಿ ಟ್ರೇಡರ್ಸ್‌ನ ಮಾಲೀಕ ರಾಘವರೆಡ್ಡಿ ಎಂಬ ಆಂಧ್ರ ವಲಸಿಗ ಶಾಸಕ ಬೋಸರಾಜನ ಬಂಟನಾಗಿರುವುದೇ ತನಿಖೆ ಹಾದಿ ತಪ್ಪಲು ಕಾರಣ. ಈ ಹಿಂದೆ ರಾಘವರೆಡ್ಡಿ ಬಳಿ 1000 ಅಕ್ಕಿ ಚೀಲ ಸಿಕ್ಕಾಗ, ಪೋಲೀಸರು ಅದನ್ನು 60 ಚೀಲಗಳೆಂದು ಸುಳ್ಳು ದಾಖಲಿಸಿ ಬೋಸರಾಜನ ಪಾದ ನೆಕ್ಕಿದ್ದರು. ಆಲ್ಕಾಳ ವೀರಭದ್ರಪ್ಪ, ಬಲ್ಲಟಗಿ ರಾಘಯ್ಯ ಇದೇ ದಂಧೆಯಲ್ಲಿ ಕುಬೇರರಾಗಿದ್ದಾರೆ. ಸಿಂಧನೂರಿನ ಸುಶೀಲಾ ರೈಸ್ ಮಿಲ್‌ನಲ್ಲಿ 4.5 ಲಕ್ಷ ರೂ. ಮೌಲ್ಯದ ಅಕ್ಕಿ ಸಿಕ್ಕಿದ್ದರೆ, ಸಿಂಧನೂರು ಜಿ.ಪಂ. ವಿಭಾಗದ 2.25 ಲಕ್ಷ ಮೌಲ್ಯದ ಅಕ್ಕಿಯನ್ನು ಕಾಳಸಂತೆಗೆ ಸಾಗಿಸುವಾಗ ವಶಪಡಿಸಿಕೊಳ್ಳಲಾಗಿತ್ತು.

ಪೋಲೀಸಪ್ಪಗಳ ಕತೆ ಕೇಳಿ

ಕಳೆದ ತಿಂಗಳು ಎಸ್ಪಿ ಆರ್. ಹಿತೇಂದ್ರ ರಾಜಕಾರಣಿಗಳ ಒತ್ತಡಕ್ಕೆ ಮಣಿಯದೇ 129 ಕಾನ್ಸ್‌ಟೇಬಲ್‌ಗಳನ್ನು ವರ್ಗಾ ಮಾಡಿದ್ದರು. ಮಾನ್ವಿಗೆ ಕಂಟಕರೆನಿಸಿದ್ದ ಮುದ್ದುರಂಗಪ್ಪ, ಕೃಷ್ಣರಾವ್, ಮುದುಗಲ್ಲಿನ ಮುತ್ತಾಳ ಪಿ ಪಿ. ರಾಮಾರಾವ್, ಸಿರವಾರ, ಹಟ್ಟಿಗಳಲ್ಲಿ ಜನರಿಂದಲೇ ಒದೆ ತಿಂದಿದ್ದ ಜಿಲಾನಿ, ರಾಯಚೂರಿನ ಟೈಟ್ ಗಿರಾಕಿ ಅಮೃತ್‌ಗಳೆಲ್ಲ ಒಂದೇ ಜಾಗದಲ್ಲಿ ರಿಕಾಣಿ ಹೂಡಿ ದಷ್ಟಪುಷ್ಟರಾಗಿದ್ದರು. ಈಗ ಎತ್ತಂಗಡಿಯಾಗಿ ಒದ್ದಾಡುತ್ತಿವೆ.



ತುಂಗಭದ್ರೆಯ ಮೂಲಕ 'ರಫ್ತಾ'ಗಲು ಕಾಯುತ್ತಿರುವ ಸೇಂದಿ ಚೀಲಗಳು


[illegible]

ಸಂತೋಷಪ್ಪ ಹಾಗೂ [illegible] ಮೂರ್ತಿ ದಾರಿಯಲ್ಲಿ ಹೋಗೋ ಬರೋ [illegible] ಗಳಿಗೆ 'ಕೈ ಚಾಚುತ್ತಾ' ನಿಂತೇ ಇದ್ದಾರೆ.

ರಾಯಚೂರು ಗ್ರಾಮೀಣ ಠಾಣೆಯ ಪಿಎಸ್‌ಐ ಹುಲಗೆಪ್ಪಾ, ಸದರ ಬಜಾರ್ ಠಾಣೆಯ ಪಿಎಸ್‌ಐ ಸತ್ಯ ನಾರಾಯಣಗಳು ತಮ್ಮ ದುಷ್ಕೃತ್ಯಗಳಿಂದಾಗಿ ಎಸ್ಪಿ ಕೋಪಕ್ಕೆ ತುತ್ತಾಗಿದ್ದರು.

[illegible] ಹನುಮೇಶ ಗಿಣಿವಾರ ಮೇಲೆ ಹಲ್ಲೆ ಮಾಡಿದ ಸಿಂಧನೂರು ಗ್ರಾಮೀಣ ಪಿಎಸ್‌ಐ ರೆಡ್ಡಿಯ ಉರಿದಾಟ ಮುಗಿಲು ಮುಟ್ಟಿದೆ.

ಮಸ್ಕಿ ಸಿಪಿಐ ತುಂಬಗಿ ಹಾಗೂ ಹಟ್ಟಿ ಠಾಣೆ ಪೇದೆ ಇಸ್ಮಾಯಿಲ್ ಠಾಣೆಯಲ್ಲಿಯೇ ಚಪ್ಪಚಪ್ಪಲಿಲೇ ಬಡಿದಾಡಿ ಕೊಂಡಿದ್ದಾರೆ. ಜಿಲ್ಲೆಯ ಮೂರು ಉಪವಿಭಾಗಗಳ ಡಿವೈಎಸ್‌ಪಿಗಳಾದ ಸಿಂಧನೂರಿನ ಎಸ್.ಎಲ್. ಉಪಣಾಂವಕರ್, ಲಿಂಗಸೂರಿನ ಉಮೇಶ ದಾನರೆಡ್ಡಿ, ರಾಯಚೂರಿನ ಬೊಮ್ಮನಾಳರವರು ದುಡ್ಡು ಹೊಡೆಯುತ್ತಲೇ ಉಸಿರಾಡುತ್ತಿದ್ದಾರೆ.



ಜಿಲ್ಲಾಧಿಕಾರಿ ತುಷಾರ್ ಗಿರಿನಾಥ್

ಇಂತಹ ಎಲ್ಲ ಮಾನಗೇಡಿ ಪೋಲೀಸರಿಂದಾಗಿ ಸೇಂದಿ, ಸಾರಾಯಿ ಮಿಂಚ, ಬಡವರ ಅಕ್ಕಿಗೆ ಸಂಚಕಾರ ಬಂದಿದೆ. ಎಸ್ಪಿ ಹಿತೇಂದ್ರ ಬರೀ ವರ್ಗಾವಣೆ ಮಾಡುವುದನ್ನೇ ಗ್ರೇಟ್ ಎಂದು ಭ್ರಮಿಸಿದಂತಿದೆ. ಡಿ.ಸಿ. ತುಷಾರ ಗಿರಿನಾಥ್‌ಗೆ ಜಿಲ್ಲೆ ಎಕ್ಕುಟ್ಟಿ ಹೋಗು ತ್ತಿರುವುದು ಗೊತ್ತೇ ಆಗುತ್ತಿಲ್ಲ.

ಕ್ರೀಡಾ ಸಚಿವ, ಜಿಲ್ಲಾ ಉಸ್ತುವಾರಿ ಸಚಿವ ಆಲ್ಕೋಡ್ ಹನುಮಂತಪ್ಪ ಮಾತ್ರ ತನ್ನ ಮಂಗಾಟಗಳನ್ನು ಮುಂದುವರೆಸುತ್ತಾ ಪೋಲೀಸರ ಕಳ್ಳಾಟಗಳನ್ನು ವೀಕ್ಷಿಸುತ್ತಿದ್ದಾನಷ್ಟೇ.

–ವರದಿಗಾರ

ಭಜರಂಗಿಗಳಿಗೆ 'ಹಿಂದೂ' ಬಲಿ

ಉಡುಪಿ

ಸಂಘ ಪರಿವಾರದ ನಾಯಕರು ಹಾಗೂ ಕಾರ್ಯಕರ್ತರು ಹಿಂದೂತ್ವದ ರಕ್ಷಣೆಗಾಗಿ ಒಬ್ಬ 'ಹಿಂದೂ'ವನ್ನೇ ಬಲಿ ತೆಗೆದುಕೊಂಡಿದ್ದಾರೆ.

ಉಡುಪಿ ತಾಲ್ಲೂಕಿನ ಕಾವಡಿ ಗ್ರಾಮದ ಹವರಾಲು ಎಂಬಲ್ಲಿನ ನಿವಾಸಿ ಕೃಷ್ಣಯ್ಯ ರಾವ್ ಎನ್ನುವ ಅರವತ್ತೈದು ವರ್ಷದ ಬ್ರಾಹ್ಮಣ ಚಿಡ್ಡಿಗಳ ಆವೇಶಭರಿತ, ಹಿಂಸಾಭರಿತ ಕಾರ್ಯಾಚರಣೆಗೆ ಪ್ರಾಣ ಕಳೆದುಕೊಂಡಿದ್ದಾರೆ.

ಹಿಂದೂತ್ವದ ರಕ್ಷಣೆಗಾಗಿ ಕೃಷ್ಣಯ್ಯರಾವ್‌ರವರನ್ನು ಕೊಂದ ಭಜರಂಗದಳದ ಜಿಲ್ಲಾ ಸಹಸಂಚಾಲಕ ಕುಮಾರಸ್ವಾಮಿ ಹಾಗೂ ಇನ್ನೋರ್ವ ನಾಯಕ ಕೃಷ್ಣ ಶಾನುಭಾಗ ಎಂಬಿಬ್ಬರನ್ನು ಕೋಟ ಠಾಣೆಯ ಪೋಲೀಸರು 'ನಿರ್ವಾಹವಿಲ್ಲದೆ' ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಇನ್ನುಳಿದ 13ಕ್ಕೂ ಅಧಿಕ ಜನರು ತಲೆಮರೆಸಿಕೊಳ್ಳುವಂತೆ ಮಾಡಿ ಸದ್ಯಕ್ಕೆ ಸಮಾಧಾನಪಟ್ಟು ಕೊಂಡಿದ್ದಾರೆ.

ಹಿನ್ನೆಲೆ

ಕೃಷ್ಣಯ್ಯ ರಾವ್‌ರವರು ಜಾನುವಾರು ದಲ್ಲಾಳಿ ಮಾತ್ರವಲ್ಲ, ದೇವಳವೊಂದರ ಅರ್ಚಕರು [illegible] ಕಾಂಗ್ರೆಸ್ ಕಾರ್ಯಕರ್ತ ರಾಗಿ, ಸಮಾಜ ಸೇವಕರಾಗಿ ಜನರ ಪ್ರೀತಿ ಗಳಿಸಿದವರು.

ಕೃಷ್ಣಯ್ಯರಿಗೆ ಸಂಬಂಧಿಸಿದ ಜಾನುವಾರುಗಳನ್ನು ಬುಧವಾರ (24.05.2006) ರಾತ್ರಿ, ವಾಹನವೊಂದರಲ್ಲಿ ಕಾವಡಿಯಿಂದ ಮಂಗ ಳೂರು ಕಡೆಗೆ ಸಾಗಿಸಲಾಗುತ್ತಿತ್ತು.

ಈ [illegible] ಭಜರಂಗ ದಳದ 15 [illegible] ಜಾನುವಾರುಗಳಿದ್ದ [illegible] ಹಿಂಬಾಲಿಸಿತಾದರೂ ಅದು ಕೈಗೆ ಸಿಗದೆ ಹೋಗಿತ್ತು.

ಆಕ್ರೋಶಗೊಂಡ ಭಜರಂಗಿ ಪಡೆ ಕೃಷ್ಣಯ್ಯರ ಮನೆಗೆ ರಾತ್ರಿಯೇ ನುಗ್ಗಿತು. ಜಿಲ್ಲಾ ಸಂಚಾಲಕ ಕುಮಾರಸ್ವಾಮಿಯೇ ಎದುರು ನಿಂತು ದೊಣ್ಣೆಯಿಂದ ಹೊಡೆದು ಕೃಷ್ಣಯ್ಯರನ್ನು ಗಂಭೀರವಾಗಿ ಗಾಯ ಗೊಳಿಸಿದ.

ಬುಧವಾರ ರಾತ್ರಿಯೇ ಮಣಿಪಾಲ ಕೆಎಂಸಿಗೆ ದಾಖಲಾದ ಕೃಷ್ಣಯ್ಯರು ಶುಕ್ರವಾರ ಬೆಳಗ್ಗೆ ಸಾವಿಗೀಡಾ ದರು.

ಕುಮಾರ ಅಲ್ಲ ; ಕ್ರೌರ್ಯ

ಕುಮಾರಸ್ವಾಮಿ ಎಂದರೆ ಕ್ರೌರ್ಯಕ್ಕೆ ಮತ್ತೊಂದು ಹೆಸರು. ಹಿಂದೂತ್ವದ ರಕ್ಷಣೆಯ ಹೆಸರಿನಲ್ಲಿ ಹಲ್ಲೆ ದರೋಡೆ ನಡೆಸಿ ನಡೆಸಿ ಪರಿಣಿತಿ ಪಡೆದವನೀತ.

ಕೆಲವು ತಿಂಗಳುಗಳ ಹಿಂದೆ ಕ್ರೈಸ್ತ ಪ್ರಾರ್ಥನಾ ಮಂದಿರಕ್ಕೆ ಭೇಟಿ ಕೊಡುತ್ತಿದ್ದ ಏಕೈಕ ಕಾರಣಕ್ಕೆ ದೇವೇಂದ್ರ ಪೂಜಾರಿ ಎಂಬುವವರನ್ನು ಅಪಹರಿಸಿ, ಹಲ್ಲೆಗೈದು, ಕೊಲೆ ಬೆದರಿಕೆ ಹಾಕಿ, ಕ್ರೈಸ್ತ ಧರ್ಮ ಗುರುವಿನ ವಿರುದ್ಧ ಬಲವಂತದಿಂದ ದೂರು ಕೊಡುವಂತೆ ಮಾಡಿದ ಕೂವಿ ಇದೇ ಕುಮಾರಸ್ವಾಮಿ.

ಅಂದು ಬ್ರಹ್ಮಾವರ ಪೋಲೀಸರು ಇದೇ ಕುಮಾರ ಸ್ವಾಮಿ ಗ್ಯಾಂಗ್‌ನ ರಕ್ಷಣೆಗೆ ಟೊಂಕಕಟ್ಟಿ [illegible] ಸ್ಥಳೀಯ ಶಾಸಕ ಜಯಪ್ರಕಾಶ ಹೆಗ್ಡೆ [illegible] ಈ [illegible] ಬಗ್ಗೆ ಮೌನವಹಿಸಿದ್ದರು.

ಬದಲಾಗದ ಪೋಲೀಸರು

ಭಜರಂಗದಳದ ಕಾರ್ಯಕರ್ತರಂತೆ ವರ್ತಿಸುವ ಕೋಟ ಪೋಲೀಸರು ತಮ್ಮ ವಿರುದ್ಧ ಬರಬಹುದಾದ ಆಪಾದನೆಗಳಿಂದ ಪಾರಾಗಲು ಈಗ ಕುಮಾರಸ್ವಾಮಿ ಯನ್ನು ಬಂಧಿಸಿದ್ದಾರೆ.



ಕೊಲೆಯಾದ ಕೃಷ್ಣಯ್ಯ

ನಿಜವಾಗಿ ನಡೆದಿರುವುದು ದನದ ರಾಜಕಾರಣ. ದನಗಳನ್ನು ಸಾಗಿಸಿದ್ದಕ್ಕಾಗಿಯಷ್ಟೇ ಕೊಲೆಯಾಗಿದೆ. ಆದರೆ ಕೋಟಾ ಠಾಣೆಯ ಪೋಲೀಸರು "ಹಳೇ ದ್ವೇಷದ ಕಾರಣಕ್ಕಾಗಿ ಹಲ್ಲೆ" ಎಂದು ದಾಖಲಿಸಿ, ಅನಿವಾರ್ಯವಾಗಿ ಬಂಧಿಸಿದ್ದಾರೆ. ಉಳಿದ ಅಷ್ಟೂ ಜನ ಆರೋಪಿಗಳನ್ನು ಬಿಟ್ಟು ಬಿಟ್ಟಿದ್ದಾರೆ.

ಪ್ರತಿಭಟನೆ

ಬ್ರಹ್ಮಾವರ ಸುತ್ತಮುತ್ತಲ ಜನ ಈ ಕೊಲೆ ಕೃತ್ಯವನ್ನು ಖಂಡಿಸಿ ಶನಿವಾರ ಬೃಹತ್ ಪ್ರತಿಭಟನಾ ಸಭೆ ನಡೆಸಿದ್ದಾರೆ. ಬಿಜೆಪಿ ರಾಜಕೀಯವನ್ನು ಬಟಾ ಬಯಲು ಮಾಡಿದ್ದಾರೆ.

ಹಿಂದೂ ಕೋಮುವಾದಿಗಳ ಹಿಂದೂತ್ವದ ರಾಜಕೀಯಕ್ಕೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಲಿಯಾಗುತ್ತಿರುವ ನಾಲ್ಕನೇ ಹಿಂದೂ ಈ ಕೃಷ್ಣಯ್ಯ ರಾವ್. ಮೂಡಬಿದ್ರಿ ಸಮೀಪದ ವಾಳಿಲದ ಇಬ್ಬರು ಹಿಂದೂ ಸಹೋದರಿಯರು, ಪಡುಬಿದ್ರಿ ಬಳಿಯ ಹೆಜಮಾಡಿ ವನಿತಾ ಉಳಿದ ಮೂವರು.

ಕರಾವಳಿಯಲ್ಲಿ ಭಜರಂಗಿಗಳ ಅಟ್ಟಹಾಸ [illegible] ಕೂಡಿದ ಹಿಂದೂತ್ವದ ರಾಜಕೀಯಕ್ಕೆ ಹಿಂದೂಗಳೇ [illegible]

– [illegible]

ಸ್ತ್ರೀತ್ವವೆಂದರೆ....

ಯುದ್ಧವನ್ನೇ ತೋರಿಸದೇ ಯುದ್ಧವನ್ನು ಕಟುವಾಗಿ ಟೀಕಿಸುವ, ಸ್ತ್ರೀತ್ವದ ಮೌಲ್ಯಗಳನ್ನು ಬಿಂಬಿಸುವ ರಷ್ಯನ್ ಚಿತ್ರ 'ಕುಕುಷ್ಕಾ'ದ ಸ್ವಾರಸ್ಯಕರ ಕಥೆಯನ್ನು ಸುಕನ್ಯಾ ಕನರಳ್ಳಿ ಈ ಚೆಂದದ ಲೇಖನದಲ್ಲಿ ವಿವರಿಸಿದ್ದಾರೆ. 2002ರಲ್ಲಿ ಈ ಚಿತ್ರ 15ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಗೆದ್ದು ಸ್ತ್ರೀತ್ವದ ದಾಖಲೆಯಾಗಿದೆ.



ವಿಶೇಷ ಲೇಖನ

ಸುಕನ್ಯಾ ಕನರಳ್ಳಿ

ಆ ಒಬ್ಬಂಟಿ ಹೆಣ್ಣು ಗಂಡನನ್ನು ನಾಲ್ಕು ವರ್ಷಗಳ ಹಿಂದೆ ಸೈನಿಕ-ಜನರು ಹೊತ್ತು ಒಯ್ದಿದ್ದರು. ಸುತ್ತಲೂ ರಣಗುಡುತ್ತಿರುವ ಎರಡನೇ ಮಹಾಯುದ್ಧ. ಲಾಪ್ ಲ್ಯಾಂಡಿನ ಕೋಲ ದ್ವೀಪದಲ್ಲಿ ಬದುಕುತ್ತಿರುವ ಈ ಹೆಣ್ಣು ಸಾಮಿ ಬುಡಕಟ್ಟಿಗೆ ಸೇರಿದವಳು. ಒಂದು ನಾಯಿ ಮತ್ತು ಒಂದಷ್ಟು ಜಿಂಕೆಗಳು ಇವಳ ಜೊತೆಗಾರರು. ಆಗಾಗ್ಗೆ ತಲೆಯ ಮೇಲೆ ಹದ್ದುಗಳಂತೆ ಹಾರಡುವ ಯುದ್ಧ ವಿಮಾನಗಳು. ರಕ್ತಪಾತ ಮತ್ತು ಬರ್ಬರತೆಯನ್ನೂ ಕಣ್ಣಾರೆ ಆಗಾಗ್ಗೆ ನೋಡಿದ್ದವಳು. ಆದರೂ ಬದುಕು ಸಾಗುತ್ತಿತ್ತು. ತೊರೆಯೊಂದರ ತೀರದಲ್ಲಿ ಗುಡಿಸಲೊಂದನ್ನು ಕಟ್ಟಿಕೊಂಡು, ತಾನೇ ಕಟ್ಟಿ ನಿಲ್ಲಿಸಿದ್ದ ಬಿದಿರಿನ ಬಲೆಯಲ್ಲಿ ಬಿದ್ದ ಮೀನುಗಳನ್ನು ಹೆಕ್ಕುತ್ತಾ, ಜಿಂಕೆ ಸಾಕಾಣಿಕೆಯಲ್ಲಿ ಜನ್ಮ ತೊರೆಯುತ್ತಾ ಒಂಟಿ ಬಾಳಿನ ದಿನಗಳನ್ನು ಕಳೆಯುತ್ತಾ ಬದುಕಿರುವ ಹೆಣ್ಣು.

ಆಕೆಯ ಹೆಸರು ಅನ್ನಿ.

ಸ್ಟಾಕ್‌ಹೋಮಿನ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದ ಫಿನ್ನಿಶ್ ತರುಣನೊಬ್ಬನನ್ನು ಕಡ್ಡಾಯವಾಗಿ ಸೈನ್ಯದ ಸೇವೆಗೆ ನಿಯಮಿಸಲಾಗಿತ್ತು. 'ಹೇಡಿತನ' ದ ಆಪಾದನೆಯ ಮೇಲೆ ಇವನ ಕಾಲಿಗೆ ಸರಪಳಿ ಬಿಗಿದು ಅದರ ತುದಿಯನ್ನು ಬಂಡೆಗಲ್ಲಿನ ಕಬ್ಬಿಣದ ಗೂಟವೊಂದಕ್ಕೆ ಜಡಿದು, ಸಾವನ್ನೆದುರು ನೋಡುತ್ತಾ ಅಸಹಾಯನಾಗಿ ಕೂತಿರುವ ಶಿಕ್ಷೆಯನ್ನು ಕೊಟ್ಟು ಅವನ ಸಹಚರರು ಅಲ್ಲಿಂದ ಕಾಲ್ತೆಗೆದಿದ್ದರು. ಆದರೆ ಅವನೇನು ಕೈ ಕಟ್ಟಿ ಕೂರಲಿಲ್ಲ. ಅವರು ಕಣ್ಣಿಂದ ಮರೆಯಾಗಿದ್ದೇ ತಡ, ತನ್ನ ಹತ್ತಿರ ಮತ್ತು ಸುತ್ತಮುತ್ತ ಇದ್ದ ಪ್ರತಿಯೊಂದೂ ವಸ್ತುವನ್ನು ಬಳಸಿ ತನ್ನ ನ್ನು ಬಿಗಿದಿದ್ದ ಸರಪಳಿಯನ್ನು ಗೂಟದಿಂದ ಕಿತ್ತು , ಸಾವಿಗೆ ಸವಾಲೆಸೆಯುವಲ್ಲಿ ಯಶಸ್ವಿಯಾದ. ಒಣಗಿ ಒಪ್ಪಟೆಯಾದ ಗಿಡ, ಎಲೆ, ಕಟ್ಟಿಗೆ, ಬುಲೆಟ್ಟುಗಳಲ್ಲಿದ್ದ ಗನ್ ಪೌಡರ್, ಪ್ರತಿಯೊಂದೂ ಈ 'ಹೇಡಿ'ಯ ಕೈಯಲ್ಲಿ ಸಾವಿನೆದುರು ಸೆಣೆಸುವ ಬಲವಾದ ಆಯುಧಗಳಾದವು. ಫಿನ್ನಿಶ್ ಜನರನ್ನು ಅಗೌರವದಿಂದ ಕಾಣುತ್ತಿದ್ದ ಸ್ಟಾಕ್‌ಹೋಮ್ ಸಹಪಾಠಿಗಳ ನಡುವೆ ಸ್ವಲ್ಪ 'ಸೀರಿಯಸ್ಸಾಗಿ' ಕಾಣಲು ಹಾಕಿಕೊಂಡಿದ್ದನಲ್ಲ ಕನ್ನಡಕ! ಅದೂ ಸಹ ಈ ಕ್ಷಣಗಳಲ್ಲಿ ಸಹಾಯಕ್ಕೆ ಬಂತು. ಸೂರ್ಯನ ಕಿರಣಗಳನ್ನು ಕೇಂದ್ರೀಕರಿಸಿ, ಒಣಗಿದ ಗಿಡ ಎಲೆಗಳನ್ನು ಸುಟ್ಟು, ಗನ್ ಪೌಡರನ್ನು ಸೇರಿಸಿ..... ಸಾವೂ ಸಹ ಇವನ ಅಸಾಧ್ಯ ತಾಳ್ಮೆಗೆ, ಬುದ್ಧಿವಂತಿಕೆಗೆ ಸೋತು ನಿಂತಿತು. ಉನ್ಮತ್ತ ಸಂತೋಷದಲ್ಲಿ ಕಿರುಚುತ್ತಾ ತನ್ನನ್ನು ಈ ಅವಸ್ಥೆಗೆ ತಳ್ಳಿದ್ದ ಆಫೀಸರನಿಗೆ ಸವಾಲೆಸೆದ: 'ನಿನ್ನ ಗೋರಿಯ ಮೇಲೆ ಉಚ್ಚೆ ಹುಯ್ಯಲು ನಾನಿನ್ನೂ ಬದುಕಿದ್ದೇನೋ, ಮಗನೆ!' ಸಾವಿನ ಹೊಸ್ತಿಲ ಹತ್ತಿರ ಹೋದವನಿಗೆ ಬದುಕಿನ ಮೇಲಿನ ಗೌರವ ಇಮ್ಮಡಿಸಿತ್ತು. ಬಂಡೆಗಲ್ಲಿನ ಗೂಟದಿಂದ ಕಿತ್ತ ಲೋಹದ ಮಣಭಾರದ ಸರಪಳಿ ಸಲೀಸಾಗಿ ನಡೆಯಲು ಬಿಡದೆ ಬಾಧಿಸುತ್ತಿತ್ತು. ಹೇಗಾದರೂ ಮಾಡಿ ಇದನ್ನು ತೊಲಗಿಸಬೇಕಲ್ಲಾ! ಕಾಲೆಳೆಯುತ್ತಾ ನಡೆದವನಿಗೆ ಕಂಡಿದ್ದು ಅನ್ನಿಯ ಗುಡಿಸಲು.

ಈ ಫಿನ್ನಿಶ್ ಯುವಕನ ಹೆಸರು ವೈಕೋ.

ಮಧ್ಯವಯಸ್ಕ ರಷ್ಯನ್ ಸೈನಿಕನೊಬ್ಬ ಯುದ್ಧ ಹಿಂಸೆಯ ಆಘಾತದಿಂದ ತಪ್ಪಿಸಿಕೊಳ್ಳಲು ಪದ್ಯಗಳನ್ನು ಬರೆಯುತ್ತಿದ್ದವ. ಯುದ್ಧದಲ್ಲಿ ಪದ್ಯವೆ? ಅಪಾರ್ಥ ಮಾಡಿಕೊಂಡ ಅಧಿಕಾರಿಗಳು ದ್ರೋಹ, ಸಂಚಿನ ಆಪಾದನೆಯನ್ನು ಹೊರೆಸಿ ವಿಚಾರಣೆ ನಡೆಸಿ ಮರಣದಂಡನೆ ಕೊಡುವಂತೆ ಆಜ್ಞಾಪಿಸಿ ಜೀಪಿನಲ್ಲಿ ಸಾಗಹಾಕಿದರು. ಯುದ್ಧಸಮಯದಲ್ಲಿ ಶತ್ರು ಯಾರು? ಮಿತ್ರ ಯಾರು? ತಮ್ಮವರೇ ಹಾಕಿದ ಬಾಂಬಿನ ಧಾಳಿಗೆ ತುತ್ತಾಗಿ ಜೀಪಿನಲ್ಲಿದ್ದವರೆಲ್ಲ ಪರಲೋಕ ಸೇರಿದರೆ ಮಾರಣಾಂತಿಕ ಪೆಟ್ಟಿನಲ್ಲಿ ಇವನು ಮೂರ್ಛೆ ತಪ್ಪಿ ಬಿದ್ದಿದ್ದ. ಅಕಸ್ಮಾತ್ತಾಗಿ ಕಂಡ ಅನ್ನಿ ಬೆಚ್ಚಿ ಬೀಳಲಿಲ್ಲ, ಕಣ್ಣಿಗೆ ಬಿದ್ದ ಶವಗಳನ್ನು ಕಷ್ಟವಾದರೂ ಹೂಳುವ ಕಾಯಕ ಮಾಡುತ್ತಿದ್ದವಳು ಅವಳು. ಇವನನ್ನು ಹೂಳುವಾಗ ನರಳುವ ಶಬ್ದ ಕೇಳಿ ಬೆಚ್ಚಿ ಬಿದ್ದು ಹೇಗೋ ಅಂತೂ ಗುಡಿಸಲಿನ ತನಕ ಎಳೆದು ತಂದಳು. ಸಾಯುತ್ತಾ ಬಿದ್ದವನನ್ನು ಬದುಕಿಗೆ ಮತ್ತೆ ಎಳೆದು ತರಬೇಕಿತ್ತು, 'ನಿನ್ನನ್ನು ನೋಯಿಸುವುದು ನನ್ನ ಉದ್ದೇಶವಲ್ಲ ಮುದ್ದೇ! ನಿನ್ನ ಪುಷ್ಟಿಯಲ್ಲಿ ಸಾಯುತ್ತಿರುವವನಿಗಾಗಿ ಒಂದಿಷ್ಟು ಮಾತ್ರ ಕೊಡು' ಎಂದು ಸಂತೈಸುತ್ತಾ ಜಿಂಕೆಯ ದೇಹಕ್ಕೆ ಸಣ್ಣ ಗೀಟನಗಲ ಗಾಯ ಮಾಡಿ ರಕ್ತ ತಂದು ಹಾಲಿನೊಂದಿಗೆ ಬೆರೆಸಿ, ಕಷಾಯದ ಜೊತೆ ಕುಡಿಸಿ ಉಪಚರಿಸಿ ಅಂತೂ ಆಚೆ ಹೋಗುತ್ತಿದ್ದವನನ್ನು ಈಚೆ ಎಳೆದು ಹಾಕಿದಳು.

ಈ ರಷ್ಯನ್ ಮಧ್ಯವಯಸ್ಕನ ಹೆಸರು ವಿಕ್ಟರ್.

ಮೂವರು ಅಪರಿಚಿತರು

ಮೂರು ಪರಸ್ಪರ ಅಪರಿಚಿತ ಭಾಷೆಗಳು

ಮೂರು ಬೇರೆ ಬೇರೆ ಸಾಂಸ್ಕೃತಿಕ ಲೋಕಗಳು.

ಆಡುವ ಮಾತುಗಳೆಲ್ಲವೂ ಬಡಬಡಿಕೆ ಅಷ್ಟೇ. ಅವಳೇನು ಹೇಳಿದಳು ಎಂದು ಇವರಿಬ್ಬರಿಗೆ ತಿಳಿಯದು? ಇವರಿಬ್ಬರ ಭಾಷೆಗಳು ಬುಡಕಟ್ಟು ಹೆಣ್ಣಿಗೆ ಹೇಗೆ ಅರ್ಥವಾದೀತು? ಆದರೂ ಪ್ರತಿಯೊಬ್ಬರೂ ಬಡಬಡಿಸುತ್ತಲೇ ಇದ್ದರು.

ಅನ್ನಿ ಗಂಡಸಿನ ಸಹವಾಸವಿಲ್ಲದೇ ನಾಲ್ಕು ವರ್ಷ ತಳ್ಳಿದ್ದಳು. ಒಮ್ಮೆಲೇ ಇಬ್ಬರು ಗಂಡಸರು! ಎಂಥಾ ಅದೃಷ್ಟ! ! 'ನನ್ನ ಮನಸ್ಸಿನಾಸೆಯ ಪಿಸುಮಾತುಗಳನ್ನು ಸುತ್ತ ಇರುವ ಪ್ರೇತಗಳೇನಾದರೂ ಕೇಳಿಸಿಕೊಂಡವೋ ಹೇಗೆ?' ಅನ್ನಿ ಸಂಭ್ರಮಿಸಿದಳು. ಇದ್ದಿದ್ದರಲ್ಲೇ ಅಡಿಗೆ ಮಾಡಿ, ಅವರ ಬಟ್ಟೆ ಒಗೆದು ಉಪಚರಿಸಿದಳು. 'ಹೋಗಿ, ಸ್ನಾನ ಮಾಡಿ. ಗಂಡಸರು ಹತ್ತಿರ ಬಂದರೇ ಯುದ್ಧದ ಮತ್ತು ಸಾವಿನ ಗಬ್ಬು ನಾತ!' ಎಂದು ಆಜ್ಞಾಪಿಸಿದಳು.

ಫಿನ್ನಿಶ್ ಯುವಕ ಇದ್ದ ಸಾಮಗ್ರಿಗಳಿಂದಲೇ ಒಂದು ಸ್ನಾನ ತೊಟ್ಟಿಯನ್ನು ನಿರ್ಮಿಸಿದ. ಗಂಡಸರಿಬ್ಬರೂ ಕೂತು ಸ್ನಾನ ಮಾಡುತ್ತಿದ್ದಾಗ ಅನ್ನಿ ಧಡಾರನೆ ಬಾಗಿಲು ತೆಗೆದು ಒಳ ನುಗ್ಗಿದಳು. ಏನಕ್ಕೂ ಅಲ್ಲ, ಚೆನ್ನಾಗಿ ಮೈ ತಿಕ್ಕಿಕೊಳ್ಳಲೆಂದು ಹುಲ್ಲಿನ ಹುರಿ ಕೊಡಲು. ಗಂಡಸರಿಬ್ಬರೂ ನಾಚಿ ತಲೆ ತಗ್ಗಿಸಿ ಕೂತರು. ತುಂಟತನದಿಂದ ಇಬ್ಬರನ್ನೂ ಧೀರ್ಘವಾಗಿ ನೋಡುತ್ತಾ ಸಾಮಿ ಭಾಷೆಯ ಚುಟುಕವೊಂದನ್ನು ರಾಗವಾಗಿ ನುಡಿದಳು:

ಮೇಲೆ ಹಾರುತ್ತಿದ್ದ ಕಾಗೆ
ಜಿಂಕೆಗಳ ದಂಡು ಕೆಳಗೆ!
ಒಂದು....ಎರಡು....ಮೂರು...
ಲೆಕ್ಕ ಹಾಕಿದ್ದೇ ಹಾಕಿದ್ದು....ಬೆಳಗಿನ ತನಕ.
ಓಹ್! ನೀವಿಷ್ಟು ಮಂದಿ!
ಮಾಡಲೇನು ಸಾಧ್ಯ ನಾನೊಬ್ಬ?
ಕಾಗುಟ್ಟ ಕಾಗೆ... ಜಾರಿತ್ತು ನಿದ್ದೆಗೆ

ಆದರೆ ಅನ್ನಿ ಕಾಗೆಯಲ್ಲ. ಕಟ್ಟುಮಸ್ತಾಗಿದ್ದ ಫಿನ್ನಿಶ್ ಯುವಕನನ್ನು ಹೆಚ್ಚು ಕಮ್ಮಿ ಎಳೆದುಕೊಂಡೇ ಹೋದಾಗ ರಷ್ಯನ್ ಮಧ್ಯವಯಸ್ಕನಿಗೆ ಇನ್ನೂ ಕಿರಿಕಿರಿ ಹೆಚ್ಚಿತ್ತು. ಚಳಿಯಲ್ಲಿ ಹೊರಗಡೆ ಮಲಗಬೇಕಾದ ದುರಾದೃಷ್ಟ ಒಂದು ಕಡೆಯಾದರೆ ರಾತ್ರಿಯಿಡೀ ಗುಡಿಸಲಿನಿಂದ ಕೇಳಿಬರುತ್ತಿದ್ದ ಮೋಹದ ಮೊರೆತ ಇನ್ನೊಂದು ಕಡೆ. 'ಫ್ಯಾಸಿಸ್ಟ್ ನನ್ನ ಮಗ!' ಎಂದು ಯುವಕನಿಗೆ ಹಿಡಿಹಿಡಿ ಶಾಪ ಹಾಕುತ್ತಲೇ ನಿದ್ದೆಗೆ ಜಾರಿದ ರಷ್ಯನ್ ಮಧ್ಯ ವಯಸ್ಕನಿಗೆ ತನ್ನಲ್ಲಿ ಅಡಗಿರುವ ಫ್ಯಾಸಿಸ್ಟನ ಅರಿವಿರುವುದಿಲ್ಲ.

ಪಾಪ ಫಿನ್ನಿಶ್ ಯುವಕ ಮೊದಲ ದಿನದಿಂದ ಬಡಬಡಿಸುತ್ತಲೇ ಇದ್ದ. 'ನಾನು ಜರ್ಮನ್ ಫ್ಯಾಸಿಸ್ಟ್ ಅಲ್ಲ. ಅನಿವಾರ್ಯ ಕಾರಣಗಳಿಂದ ನಾನು ಆ ಉದ್ದ ನಿಲುವಂಗಿ ಹಾಕಬೇಕಾಯಿತು.' ರಷ್ಯನ್ನನಿಗೆ ಅರ್ಥವಾದರೆ ತಾನೇ! ಅರ್ಥವಾಗುವ ಪದಗಳಿಗೆ ಹುಡುಕೀ ಹುಡುಕೀ ಪಾಪ ಫಿನ್ನಿಶ್ ಸೋತ. 'ಡೆಮಾಕ್ರಸಿ! ಲಿಂಯೋ ಟಾಲ್ಸ್ಟಾಯ್ ಗೊತ್ತಲ್ಲಾ? ವಾರ್ ಅಂಡ್ ಪೀಸ್! ಅರ್ನೆಸ್ಟ್ ಹೆಮ್ಮಿಂಗ್ವೇ ಫೇರ್ವೆಲ್ ಟು ಆರ್ಮ್ಸ್? ದೊಸ್ತೊವೆಸ್ಕಿ ಗೊತ್ತಿಲ್ಲಾ?' ಊಹೂಂ... ಮಧ್ಯವಯಸ್ಕನಿಗೆ ಸಂಶಯದ ಜೊತೆ ಮತ್ಸರ ಕೂಡಾ! ಏನೇನೋ ಸಂಚು ಮಾಡಿ ಕೊಲ್ಲಲ್ಲು ಹೋದಾಗೆಲ್ಲಾ ಯುವಕ ಅವನನ್ನು ಜಪ್ಪಿಸಿ ಕೂರಿಸಿದರೂ ಬಗೆಬಗೆಯಾಗಿ ಅವನಲ್ಲಿ ಬೇಡಿಕೊಳ್ಳುತ್ತಾನೆ. 'ನಾನು ಯುದ್ಧ ಮಾಡಲಾರೆ. ನನ್ನ ಯುದ್ಧ ಮುಗಿಯಿತು. ನಿನಗ್ಯಾಕೆ ಅರ್ಥ ಆಗ್ತಾ ಇಲ್ಲ? ನನಗೆ ಕೊಲ್ಲಲು ಆಗುವುದಿಲ್ಲ, ನನ್ನನ್ನು ಬೇರೆಯವರು ಕೊಲ್ಲಲೂ ಬಿಡಲಾರೆ. ನಾನು ಬದುಕಿಗೆ ಹಿಂತಿರುಗಿ ಹೋಗಬೇಕು. ಓದಬೇಕು, ಪದ್ಯ ಬರೆಯಬೇಕು, ಸಂಗೀತ ಕಲಿಯಬೇಕು...' ಗಡಸು ಮುಖದವನಂತೆ ಕಂಡರೂ ಫಿನ್ನಿಶ್ ಯುವಕನಿಗೆ ಅನ್ನಿಯ ಬಗ್ಗೆ ಇನ್ನಿಲ್ಲದಂತೆ ಕರುಣೆ, ಕೃತಜ್ಞತೆ. 'ಆ ಹೆಂಗಸು ವರ್ಷಗಟ್ಟಲೆ ಕಿಂಚಿತ್ತೂ ಪ್ರೀತಿಯಿಲ್ಲದೆ ಬಾಯಾರಿದವಳು. ಅವಳಿಗೆ ಇಷ್ಟೂ ಕೊಡಲಾರೆನೆ?' ಎಂದು ತನ್ನನ್ನು ಕೊಲ್ಲಲೆತ್ನಿಸಿದ ಮಧ್ಯವಯಸ್ಕನಿಗೆ ಕೇಳುತ್ತಾನೆ. ಮತ್ತೆ ಅದೇ. ಒಬ್ಬರ ಮಾತು ಇನ್ನೊಬ್ಬರಿಗೆ ಬಡಬಡಿಕೆ ಅಷ್ಟೇ.

ಅನ್ನಿಗೆ ಈ ಹಣಾಹಣಿಯ ಬಗ್ಗೆ ತಾಳ್ಮೆಯೂ ಇಲ್ಲ, ಪುರುಸೊತ್ತೂ ಇಲ್ಲ. 'ಸಮಯ ಹೇಗೆ ಕಳೆಯಬೇಕೆಂದು ಗೊತ್ತಿಲ್ಲದೆ ಗುದ್ದಾಡುತ್ತಿದ್ದೀರಾ ಗಡವಾಗಳ? ನನ್ನ ಕೆಲಸದಲ್ಲಿ ಸಹಾಯವನ್ನಾದರೂ ಮಾಡಬಾರದ?' ರೇಗಿದ ಅನ್ನಿ ಗದರಿಸುತ್ತಾಳೆ. 'ನಿಮಗೆ ಗೊತ್ತಿರುವುದು ಕೊಲ್ಲುವುದೊಂದೇ. ಆದರೆ ಕೊಲ್ಲುವುದು ಕೆಲಸ ಅಲ್ಲ. ಬೇರೆಯವರನ್ನು ಕೊಂದರೆ ನಮ್ಮ ಬದುಕು ದೀರ್ಘವಾಗಿರುತ್ತದೆ ಅಂತ ಅಂದುಕೊಳ್ಳುವುದು ದೊಡ್ಡವರ ಬಾಲಿಶತನ'—ಸರಳವಾದ ಮಾತುಗಳಲ್ಲಿ ಯುದ್ಧವೆಂಬ ಗೋಜಲನ್ನೇ ಧಿಕ್ಕರಿಸುತ್ತಾಳೆ. 'ಒಬ್ಬರಿಗೊಬ್ಬರು ಗುದ್ದಾಡಿ ಸಾಯಬೇಡಿ. ನನಗೆ ಹೂಳಲು ಸಮಯವಿಲ್ಲ'—ಅನ್ನಿಗೆ ಚಮತ್ಕಾರದ ಮಾತುಗಳು ಬಾರವು.

ದಿನಗಳು ಕಳೆಯುತ್ತವೆ. ಮಧ್ಯವಯಸ್ಕನ ಸಂಶಯದ ಕಿಡಿ ಒಂದು ದಿನ ಭುಗಿಲೆಂದು ಹತ್ತಿಕೊಂಡು ಯುವಕನ ಬಲಿ ತೆಗೆದುಕೊಂಡು ಬಿಡುತ್ತದೆ. ವ್ಯಂಗ್ಯವೆಂದರೆ ಹೊರಗಿನ ಯುದ್ಧ ಮುಗಿಯಿತೆಂದು ಸಂಭ್ರಮದಲ್ಲಿದ್ದ ಫಿನ್ನಿಶ್ ಯುವಕ ಆ ಸಂತಸದ ಗಳಿಗೆಯಲ್ಲಿಯೇ ಮಧ್ಯ ವಯಸ್ಕ ರಷ್ಯನ್ನನಿನ ಅಪಾರ್ಥಕ್ಕೆ ಬಲಿಯಾಗುತ್ತಾನೆ. ಅನ್ನಿಗೆ ಈ ವಿದ್ಯಮಾನಗಳು ತಿಳಿಯದು. ಯಾರೋ ವೈರಿಯಿಂದ ಪೆಟ್ಟು ತಿಂದಿರುವನೆಂದು ರಾತ್ರಿಯಿಡೀ ತಮ್ಮಟೆ ಬಡಿಯುತ್ತಾ ನಾಯಿಯಂತೆ ಬೊಗಳುತ್ತಾ ಯುವಕನನ್ನು ಸಾವಿನ ಹಾದಿಯಿಂದ ಹಿಂದೆ ತರುವಲ್ಲಿ ಯಶಸ್ವಿಯಾಗುತ್ತಾಳೆ. ಸಾಮಿ ಬುಡಕಟ್ಟಿನವರ ಸಂಪ್ರದಾಯ ಪಾಲಿಸುತ್ತಾಳೆ. ಯುವಕನ ಮುಖದ ಮೇಲೆ ಬದುಕಿನ ಕಳೆ ಕಂಡು ಸಮಾಧಾನದ ನಿಟ್ಟುಸಿರು ಬಿಟ್ಟು ಸೋತು ಸೊಪ್ಪಾಗಿ ನೆಲಕ್ಕೆ ಒರಗುತ್ತಾಳೆ. ಜೀವವೆಲ್ಲಾ ಬತ್ತಿ ಹೋದಂತೆ ಒರಗಿದ್ದ ಮಧ್ಯವಯಸ್ಕನನ್ನು ತನ್ನ ಹಾಸಿಗೆಗೆ ಆಹ್ವಾನಿಸುತ್ತಾಳೆ. ಕರೆದ ಕಣ್ಣುಗಳಲ್ಲಿ ಮಗುವಿನ ಮುಗ್ಧತೆ, ತಾಯಿಯ ವಾತ್ಸಲ್ಯ ಎರಡೂ ಇರುತ್ತದೆ.

ಒಂದು ದಿನ ಇಬ್ಬರೂ ಗಂಡಸರು ಹೊರಟು ನಿಲ್ಲುತ್ತಾರೆ. ದಾರಿಯಲ್ಲಿ ತಿನ್ನಲು ಬುತ್ತಿ ಕಟ್ಟಿ, ಚಳಿಯಿಂದ ರಕ್ಷಿಸಿಕೊಳ್ಳಲು ಬೆಚ್ಚಗಿನ ಬಟ್ಟೆ ಹೊಲಿದುಕೊಟ್ಟ ಅನ್ನಿ, ತನ್ನ ಮುಖವನ್ನೇ ನೋಡುತ್ತಾ ನಿಂತಿದ್ದವರನ್ನು ಕಂಡು ರೇಗುತ್ತಾಳೆ: 'ಏನು? ಬೆಪ್ಪರ ಹಾಗೆ ನೋಡುತಾ ನಿಂತಿರಿ?' ಹೋಗಿ....ನನಗೆ ಮೈ ಮುರಿಯುವಷ್ಟು ಕೆಲಸ ಇದೆ.. ನಷ್ಟ ನನಗಲ್ಲ..' ಅಡಿಯಿಡುತ್ತಾ ಸಾಗಿದ ಗಂಡಸರು 'ನಿಲ್ಲಿ!' ಎಂಬ ಕರೆ ಹಿಂದಿನಿಂದ ಬಂದೀತೇನೋ ಎಂದು ಕಾಯುತ್ತಾರೆ. ಬಂದರೂ ತಾವು ನಿಲ್ಲುವವರಲ್ಲವೆಂದು ಅವರಿಗೂ ಗೊತ್ತು.

ವರುಷಗಳ ನಂತರ ತನ್ನ ಅವಳಿ ಮಕ್ಕಳನ್ನು ಎಲ್ಲೆಲ್ಲೂ ಹೂವು ಚೆಲ್ಲಿದ ನೆಲದ ಮೇಲೆ ಕೂರಿಸಿಕೊಂಡು ಅನ್ನಿ ತನ್ನ ಕಥೆ ಹೇಳುತ್ತಿದ್ದಾಳೆ. 'ಅವರಿಬ್ಬರೂ ಒಳ್ಳೆಯವರೇ.. ದರಿದ್ರ ಯುದ್ಧ ಅವರಿಂದ ಮಾಡಬಾರದ್ದೆಲ್ಲಾ ಮಾಡಿಸಿತು.. ಇಲ್ಲದಿದ್ದರೆ ಅವರಿಬ್ಬರೂ ಒಳ್ಳೆಯ ಬೇಟೆಗಾರರಾಗಿರುತ್ತಿದ್ದರು.. ಯಾರೋ ವೈರಿ ಒಬ್ಬನನ್ನು ಘಾಯಗೊಳಿಸಿದ. ಇನ್ನೊಬ್ಬ ಅವನನ್ನು ಹೊತ್ತು ತಂದ. ಅವನನ್ನು ಸಾಯಲು ನಾನು ಬಿಡಲಿಲ್ಲ.' ಈ ಮಕ್ಕಳ ಹೆಸರುಗಳು ಆ ಇಬ್ಬರವೇ ಎಂದೂ ಸ್ಪಷ್ಟಪಡಿಸುತ್ತಾಳೆ.

2002 ರಲ್ಲಿ ರಷ್ಯನ್ ಚಿತ್ರಸಂಸ್ಥೆಯೊಂದು ನಿರ್ಮಿಸಿದ 'ಕುಕುಷ್ಕಾ' ಹದಿನೈದಕ್ಕಿಂತ ಹೆಚ್ಚು ಪ್ರಶಸ್ತಿಗಳನ್ನು ಗಿಟ್ಟಿಸಿತು. ಪ್ರತ್ಯಕ್ಷ ಯುದ್ಧವನ್ನೇ ತೋರಿಸದೇ ಯುದ್ಧವನ್ನು ಕಟುವಾಗಿ ಟೀಕಿಸುವ, ಸ್ತ್ರೀತ್ವದ ಮೌಲ್ಯಗಳನ್ನು ಬಿಂಬಿಸುವ ಪರಿಣಾಮಕಾರಿ ಚಿತ್ರ ಎಂಬ ಹೆಗ್ಗಳಿಕೆಗೂ ಪಾತ್ರವಾಯಿತು. 'ಕುಕುಷ್ಕಾ' ಎಂದರೆ ರಷ್ಯನ್ ಭಾಷೆಯಲ್ಲಿ ಕೋಗಿಲೆ ಎಂದರ್ಥ. ಅನ್ನಿಯ ಮೂಲ ಸಾಮಿ ಹೆಸರು ಕೋಗಿಲೆ ಎಂಬ ಅರ್ಥವನ್ನು ಕೊಡುತ್ತದೆ. ಕೋಗಿಲೆ ಬೇರೆಯವರ ಗೂಡಿನಲ್ಲಿ ಮೊಟ್ಟೆಯಿಟ್ಟು ಹಾರಿಹೋಗುವ ಪರಪುಟ್ಟ. ಆದರೆ ಈ ಚಿತ್ರದ ಕೋಗಿಲೆ ಯುದ್ಧದಲ್ಲಿ ಬಸವಳಿದ, ಸಮಾಜದಿಂದ ತಿರಸ್ಕೃತವಾದ ಎರಡು ಜೀವಗಳಿಗೆ ಆಶ್ರಯವಿತ್ತಿದ್ದೂ ಅಲ್ಲದೆ ಸಾವಿನ ನೆಲದಿಂದ ಈಚೆ ತಂದವಳು. ಬದುಕೆಂದರೆ ಅವಳಿಗೆ ತಾದಾತ್ಮ್ಯದಿಂದ ದುಡಿಯುವುದು, ಉಸಿರು ಉಳಿಸಿಕೊಳ್ಳಲು ಎಷ್ಟು ಬೇಕೋ ಅಷ್ಟನ್ನು ಮಾತ್ರ ಪ್ರಕೃತಿಯಿಂದ ಪಡೆದುಕೊಳ್ಳುವುದು, ಜೀವವನ್ನು ಮರುಸೃಷ್ಟಿಸುವುದು. ಯುದ್ಧವೆಂಬ ಉನ್ಮಾದದ ನಡುವೆಯೂ ತನ್ನ ಪಾಡಿಗೆ ಜೀವವನ್ನು ರಕ್ಷಿಸುವ ಕೆಲಸವನ್ನು ಪ್ರಾಮಾಣಿಕತೆ ಮತ್ತು ಪ್ರೀತಿಯಿಂದ ಮಾಡುತ್ತಿರುತ್ತಾಳೆ.

ಚಿತ್ರದುದ್ದಕ್ಕೂ ಈ ಮೂವರಲ್ಲಿ ಒಬ್ಬರಿಗೆ ಇನ್ನೊಬ್ಬರ ಮಾತು ಅರ್ಥವಾಗುವುದೇ ಇಲ್ಲ. ಈ ಬಡಬಡಿಕೆ ಕೆಲವೊಮ್ಮೆ ಅತ್ಯಂತ ಹಾಸ್ಯಮಯವಾಗಿರುತ್ತದೆ. ಅನ್ನಿ ಒಂದು ಸಲ 'ಅಣಬೆಗಳನ್ನು ತಿನ್ನಬೇಡವೋ. ತಿಂದರೆ ನಿನಗೆ ಹುಚ್ಚು ಹಿಡಿಯುವುದು ಖಂಡಿತ' ಎಂದು ರಷ್ಯನ್ ಮಧ್ಯವಯಸ್ಕನಿಗೆ ಹೇಳಿದರೆ ಅವನು 'ಹೌದು, ಅಣಬೆ ಅಡಿಗೆ ಮಾಡಿದ್ದೇನೆ, ಇಗೋ, ತಿನ್ನೋಣವಾ?' ಅಂದಾಗ ಅನ್ನಿ ತಲೆ ಚಚ್ಚಿಕೊಳ್ಳುತ್ತಾಳೆ. 'ನಾನು ತಯಾರಿಸಿದ ಸ್ನಾನದ ತೊಟ್ಟಿ ಅಷ್ಟೇನೂ ಚೆನ್ನಾಗಿಲ್ಲದಿದ್ದರೂ ಸಧ್ಯಕ್ಕೆ ಸಾಕಾಗುತ್ತಲ್ಲಾ?' ಎಂದು ಫಿನ್ನಿಶ್ ಯುವಕ ಕ್ಷಮೆ ಕೇಳುವವನಂತೆ ಹೇಳುತ್ತಿದ್ದರೆ ರಷ್ಯನ್ ಮಧ್ಯವಯಸ್ಕ ತಾನು ಮಾಡಿಕೊಂಡ ಎರಡು ಮದುವೆಗಳೂ ಎಗರಿಬಿದ್ದು ಹೋದವು ಎಂದು ಪ್ರಲಾಪಿಸುತ್ತಿರುತ್ತಾನೆ. ಮಾತಾಡುವುದು ಮುಖ್ಯ, ಅರ್ಥವಾಗದಿದ್ದರೇನು ಎಂಬ ದರ್ದಿನಲ್ಲಿ ಈ ಪಾತ್ರಗಳು ಬಡಬಡಿಸುತ್ತಿವೆಯೇನೋ ಎಂಬಂತಿದೆ. 'ಕುಕುಷ್ಕಾ' ದ ನಿರ್ದೇಶಕ ಸಂದರ್ಶನವೊಂದರಲ್ಲಿ ಹೇಳುತ್ತಾನೆ: 'ಯುದ್ಧಗಳು ಸಂಭವಿಸುವುದು ಅಪಾರ್ಥಗಳಿಂದ. ಬೇರೆ ಬೇರೆ ಭಾಷೆಗಳನ್ನು ಮಾತಾಡುವುದರಿಂದ ಅಲ್ಲ, ಅವೆರಡೂ ಬೇರೆ ಬೇರೆಯೇ.'

'ಈ ಯುದ್ಧವೆಂಬ ಘೋರದೆಡೆ ಹಿಂದೆ ತಿರುಗಿ ನೋಡಿದಾಗಲಾದರೂ ಮನುಷ್ಯರಿಗೆ ತಾವು ಮಾಡಿದ ತಪ್ಪುಗಳು ಅರ್ಥವಾದೀತೆ? ಅಥವಾ ಅದರ ಬಗ್ಗೆಯೂ ತಲೆ ಕೆಡಿಸಿಕೊಳ್ಳುತ್ತಾರೋ ಇಲ್ಲವೋ! ಮನುಷ್ಯನೆಂಬುವವ ಊಹೆಗೆ ಮೀರಿದ ಅನರ್ಥಗಳನ್ನು ಸೃಷ್ಟಿಸಬಲ್ಲ ಸಾಮರ್ಥ್ಯವಿರುವವನು. ದಾಸ್ತೋವೆಸ್ಕಿಯೇ ಹಾಗಂತ ಹೇಳಿದ್ದು. ಬದುಕೆನ್ನುವುದು ಈ ಭೂಮಿಯ ಮೇಲಿನ ಎಂಥಾ ಅದ್ಭುತ ಅಲ್ಲವಾ?' —ಬಡಬಡಿಸುತ್ತಲೇ ಇದ್ದ ಫಿನ್ನಿಶ್ ಯುವಕ ಒಂದು ಹಂತದಲ್ಲಿ ಸೋತು ಕೈ ಚೆಲ್ಲುತ್ತಾನೆ. 'ನಾನು ನಿನಗೆ ಅರ್ಥವಾಗುವುದಿಲ್ಲ, ನೀನು ನನಗೆ ಕೊನೆಗೂ ಅರ್ಥವಾಗುವುದಿಲ್ಲವೇನೋ!' ಅನ್ನಿ ಅವರಿಬ್ಬರ ಮಧ್ಯೆ ನಿಂತು ಪ್ರೀತಿಯಿಂದ, ಸಹನೆಯಿಂದ, ವಾತ್ಸಲ್ಯದಿಂದ, ಕೆಲವೊಮ್ಮೆ ಗದರಿಸಿ ಬದುಕು ಇರುವುದು ಬದುಕಲಿಕ್ಕೆ, ಪ್ರೀತಿಸಲಿಕ್ಕೆ, ಸೃಷ್ಟಿಸಲಿಕ್ಕೆ, ಎನ್ನುವುದನ್ನು ಹೇಳಿಕೊಡುತ್ತಾಳೆ. ಆಯ್ಕೆಯ ಹಕ್ಕು, ತಾಯ್ತನದ ಹಕ್ಕು, ಬದುಕುವ ಹಕ್ಕುಗಳ ಪ್ರತಿರೂಪವಾಗಿ ನಿಲ್ಲುತ್ತಾಳೆ.

ಲಂಕೇಶ್ ಕಚೇರಿಯಲ್ಲಿ ಸಂವಾದ

ಮೀಸಲಾತಿ: ಬೆಂಕಿ? ಬೆಳಕು?

ಮನುಷ್ಯರು ಯಾಕೆ ಹೀಗೆ ತಮ್ಮನ್ನೇ ಕೊಂದು ಕೊಳ್ಳುತ್ತಾರೆ...? ಯಾಕೆ ಮಾನವ ಹೃದಯಗಳು ಹೀಗೆ ಕೊಳೆಯುತೊಡಗಿವೆ....? ದುರಂತವೆಂದರೆ ಇಂತಹ ಸಾವಿರಾರು ಪ್ರಶ್ನೆಗಳನ್ನು ಕತ್ತಿಗೆ ನೇತಾಕಿಕೊಂಡೇ ಜೀವ ಕಾರುಣ್ಯದ ಸೆಲೆಯುಳ್ಳ ಹೃದಯಗಳೂ ತಿರುಗಾಡ ಬೇಕಾಗಿದೆ.

ಕಳೆದ ತಿಂಗಳಿಂದ ದೇಶದಲ್ಲಿ ನಡೆಯುತ್ತಿರುವ ಮೀಸಲಾತಿ ಸುತ್ತಲಿನ ಚರ್ಚೆ-ಪ್ರಹಸನಗಳು ಈ ಥರದ ಆತಂಕದ ಪ್ರಶ್ನೆಗಳನ್ನು ಹುಟ್ಟಿ ಹಾಕುತ್ತಿವೆ. ಇಂಥವನ್ನು ನೋಡಿ, ಕೇಳಿ ವ್ಯಗ್ರವಾಗಿ, ಕೂಗಾಡಿ, ತಮ್ಮೊಳಗನ್ನು ಕಾರಿಕೊಳ್ಳುವ ಬದಲು ಒಂದಷ್ಟು ಮನಸ್ಸುಗಳು ಕೂಡಿ ಪರಸ್ಪರ ಚರ್ಚಿಸಿ ಇಂತಹ ರೋಗಗಳಿಗೆ ಮದ್ದನ್ನು ಹುಡುಕುವ ಆಶಯದಿಂದ ನಮ್ಮ ಪತ್ರಿಕೆಯ ಕಚೇರಿ ಯಲ್ಲೊಂದು ಸಭೆ ಏರ್ಪಡಿಸಿದ್ದೆವು. ಸಭೆಯ ಚರ್ಚಾ ವಿಷಯ "ಮೀಸಲಾತಿ: ಬೆಂಕಿ? ಬೆಳಕು?" ಎಂಬುದು.

ಮೇಷ್ಟ್ರು ಬದುಕಿದ್ದಾಗ ತಿಂಗಳಿಗೊಂದು ವಿಷಯದ ಬಗ್ಗೆ ಸಂವಾದ ನಡೆಸುತ್ತಿದ್ದರು. ಅದು 40-50 ಜನರ ಚರ್ಚೆಯಾದರೂ ಇಡೀ ನಾಡಿನ ಅಭಿಪ್ರಾಯ ರೂಪಿಸುವ ಸಭೆಯಾಗಿರುತ್ತಿತ್ತು. ಆ ಸಂವಾದ ಸಭೆಯನ್ನು ಪುನಃ ಪ್ರಾರಂಭಿಸುವ ಆಸೆ, ಹಠದಿಂದ ನಮ್ಮ ಗೌರಿ ಮೇಡಂ ನೆಲಮಹಡಿಯ ಒಂದು ವಾರ ಕಷ್ಟಪಟ್ಟು ಹಾಲನ್ನು ಕ್ಲೀನ್ ಮಾಡಿಸಿ, ಸಭೆಯನ್ನು ಅಲ್ಲೇ ನಡೆಸಲು ಮುಂದಾದಾಗ ನಮ್ಮ ಕಚೇರಿಯಲ್ಲಿ ಮೇಷ್ಟ್ರು ಓಡಾಡಿ, ನಿಂತು ಮಾಡಿಸಿದಂತಿತ್ತು.

ಪತ್ರಿಕೆಯ ಬಳಿದಾಳೆ ಈಶರ ಪ್ರಸ್ತಾವನೆಯಿಂದ ಪ್ರಾರಂಭವಾದ ಸಭೆ ವಿಭಿನ್ನ ವರ್ಗಗಳ ಸುಮಾರು 80-100 ಜನರಿಂದ ಸುಗಮವಾಗಿ ನಡೆಯಿತು. ಮೊದಲಿಗೆ ಮಾತನಾಡಿದ ಜಾಫೆಟ್ ಶಾಂತಪ್ಪ ತಮ್ಮ 'ಖಾಸಗೀ ರಂಗದಲ್ಲಿ ಮೀಸಲಾತಿ' ಎಂಬ ವಿಷಯದ ಬಗ್ಗೆ ಸುಮಾರು 1 ಗಂಟೆಯ ಕಾಲದ ಮಾತಿಗಾಗಿ ಸಿದ್ಧ ಮಾಡಿಕೊಂಡು ಬಂದಿದ್ದ ಅಂಕಿ-ಅಂಶ ಸಹಿತದ ವಿಶ್ಲೇಷಣೆ ಸಮಯದ ಅಭಾವದ ಕಾರಣಕ್ಕೆ ಅರ್ಧ ಗಂಟೆಗೇ ಸೀಮಿತವಾಗಬೇಕಾಯಿತು.

ಹಲವು ಒತ್ತಡಗಳ ಮಧ್ಯೆ ಸ್ವಲ್ಪ ತಡವಾಗಿ ಬಂದು ಮಾತು ಪ್ರಾರಂಭಿಸಿದ ಇಂದೂಧರ ಹೊನ್ನಾಪುರರವರು ಸಭಿಕರಿಗೆ ಮೀಸಲಾತಿ ಕುರಿತು ದ್ವಂದ್ವಗಳನ್ನು ಸರಿಪಡಿಸುವ ಮತ್ತು ಪ್ರತಿಭೆಯ ಬಗ್ಗೆ ಇರುವ ಹಿಪಾಕ್ರಟಿಕಲ್ ಗ್ರಹಿಕೆಗಳ ಕುರಿತು ಮಾತುಗಳನ್ನಾಡಿದರು. ನಂತರ ಶಿವಸುಂದರ್‌ರವರು 'ಮೀಸಲಾತಿಯ ರಾಜಕೀಯ' ಎಂಬ ಬಗ್ಗೆ ಮಾತನಾಡಿದರು. ಇಡೀ ಸಭೆಗೆ ಒಂದು ರೀತಿಯ ಗಾಂಭೀರ್ಯ ತಂದುಕೊಟ್ಟ ಕೆ. ಮರುಳ ಸಿದ್ದಪ್ಪನವರ ಉಪಸ್ಥಿತಿ ಚರ್ಚೆ ಇನ್ನಷ್ಟು ಗಂಭೀರವಾಗಿ ನಡೆಯಲು ಕಾರಣವಾಯಿತು. ಮೂಲೆಯೊಂದರಲ್ಲಿ ಮಗುವಿನಂತೆ ಕುಳಿತು ಎಲ್ಲವನ್ನೂ ಗಮನಿಸುತ್ತಿದ್ದ ಕಿ.ರಂ. ನಂತರ ಸಭಿಕರ ಪ್ರತಿಕ್ರಿಯೆಯ ಸಂದರ್ಭದಲ್ಲಿ ಮಾತನಾಡಿ ಇಡೀ ನಾಡಿನ ಮೀಸಲಾತಿ ಕುರಿತ ಪೂರ್ವಗ್ರಹವನ್ನು ಹೇಗೆ ಹೋಗಲಾಡಿಸಬೇಕೆಂಬ ಸಲಹೆ ಕೊಟ್ಟರು.

ಕೆ.ಎಂ.ಎಸ್.ರಂತೂ ಮೀಸಲಾತಿ ವಿರೋಧಿ ಮಾಡುವವರನ್ನು ಕಟುವಾಗಿ ಟೀಕಿಸಿ, ಮಾನವೀಯ ಸಹಜ ಸಿಟ್ಟಿನಿಂದ ಪ್ರತಿಕ್ರಿಯಿಸಿದರು.

ಈ ನಡುವೆ ಮಾತನಾಡಿದ ನಮ್ಮ ಪತ್ರಿಕೆಯ ಮಲ್ಲನಗೌಡರ್‌ರ "ಮೀಸಲಾತಿಯನ್ನು ಪ್ರಜ್ಞಾಪೂರ್ವಕವಾಗಿ ವಿರೋಧಿಸಿ ಕಾರ್ಯಪ್ರವೃತ್ತರಾದ ನವ ಬಂಡವಾಳಶಾಹಿಗಳೊಂದಿಗೆ ಸರ್ಕಾರಗಳೂ ಹೇಗೆ ಕೈ ಜೋಡಿಸುತ್ತಾ ಬಂದವೆಂಬ" ಬಗ್ಗೆ ವ್ಯಂಗ್ಯಭರಿತ ವಿಶ್ಲೇಷಣೆ, ಡಾ. ರವಿಯವರ "ಡಾಕ್ಟರ್ ವಿದ್ಯಾರ್ಥಿಗಳ ಅಪ್ರಬುದ್ಧ ನಡವಳಿಕೆ" ಬಗೆಗಿನ ಮಾತುಗಳು ಗಟ್ಟಿಯಾಗಿದ್ದವು. ರಾಜಪ್ಪ ದಳವಾಯಿ, ಡಾ. ಲಕ್ಷ್ಮೀಪತಿ, ಲಕ್ಷ್ಮಣ್ ಕೂಡಾ ಮಾತನಾಡಿ ಮೀಸಲಾತಿ ವಿರೋಧಿ ನಿಲುವನ್ನು ಹೇಗೆ ನಾಡಿನಲ್ಲಿ ಪ್ರಜ್ಞೆ ಬಿತ್ತುವ ಮೂಲಕ ತಿಳಿಗೊಳಿಸಬಹುದೆಂಬ ಸಲಹೆಗಳನ್ನು ಕೊಟ್ಟರು.

ಸಂಜೆ ಐದಕ್ಕೆ ಪ್ರಾರಂಭವಾಗಬೇಕಿದ್ದ ಸಭೆ ಕೊಂಚ ತಡವಾಗಿ ಪ್ರಾರಂಭವಾದರೂ ಚರ್ಚೆಯ ಪ್ರಾರಂಭದಿಂದ ಮುಕ್ತಾಯದವರೆಗೂ ಅಷ್ಟೂ ಜನ ಅಲ್ಲಾಡದೆ, ಕುಳಿತು ಚಿಂತಿಸಿದ್ದು ಈ ಥರದ ಸಭೆಗಳ ಅಗತ್ಯವನ್ನು ಹೇಳುತ್ತದೆ. ಸಭೆಯಲ್ಲಿ ಮಾತನಾಡಿ, ಪ್ರತಿಕ್ರಿಯಿಸಿದವರಲ್ಲದೆ ಡಾ. ಸುಧಾ, ಪ್ರೊ. ರಾಮಸ್ವಾಮಿ, ಪ್ರೊ. ಶಿವಲಿಂಗಂ, ಡಾ. ವಾಸು, ಪ್ರೊ. ನಗರಗೆರೆ ರಮೇಶ್ ಮುಂತಾದ ಕ್ರಿಯಾಶೀಲರಿದ್ದರು. ಸಭೆಯ ನಿರ್ವಹಣೆಯನ್ನು ನಮ್ಮ ಗೌರಿ ಮೇಡಂ ವಹಿಸಿದ್ದರಿಂದ, ಪಕ್ಕದಲ್ಲೇ ಮೇಷ್ಟ್ರ ಫೋಟೋ ಮತ್ತು ಇವರು ಒಟ್ಟಿಗೆ ಸಭೆಯನ್ನು ನಿರ್ವಹಿಸಿದಂತಿತ್ತು.

ವಕೀಲೆ ಮತ್ತು 'ಗ್ರೈಡ್'ನ ಅಂಕಣಗಾರ್ತಿಯಾದ ರಾಜಲಕ್ಷ್ಮಿ ಅಂಕಳಗಿಯವರ ಬಿಜಾಪುರಿ ಭಾಷೆಯ ಸೊಗಡಿನ ವಂದನಾರ್ಪಣೆಯೊಂದಿಗೆ ಸಭೆ ಮುಗಿ ಯುವ ಹೊತ್ತಿಗೆ ಮುಂದಿನ ದಿನಗಳ ಸಮ ಸಮಾಜದ ಕನಸು ಚಿಗುರಲೆಂದೇ ಮಳೆ ಹನಿಯುತ್ತಿತ್ತು.

ತಿಂಗಳಿಗೊಮ್ಮೆ ಇಂತಹ ಸಭೆ ನಡೆಸುವ ಚಿಂತನೆ ನಮ್ಮದು; ಆದರೆ ಯಾವುದೇ ಸಾಮಾಜಿಕ ಸಮಸ್ಯೆ ಕೇವಲ ಜಿಜ್ಞಾಸೆಯ ಮಟ್ಟದ ತಲೆಯ ಕೆಲಸವಾಗಬಾರದೆಂಬುದು ನಮ್ಮ ನಂಬಿಕೆ. ಸಭೆಯಲ್ಲಿ ಮಾತನಾಡಿದ ಚಿಂತಕರ ವಿಷಯ ಮಂಡನೆಯ ಮುಖ್ಯಾಂಶಗಳು ಕೆಳಗಿನಂತಿವೆ.

ಜಾಫೆಟ್ ಶಾಂತಪ್ಪ:

ಖಾಸಗಿ ಕಂಪನಿಗಳಲ್ಲಿ ಮೀಸಲಾತಿ ಜಾರಿಗೆ ತರುವ ಕುರಿತು ಪ್ರಸ್ತಾಪವಾದಂದಿನಿಂದ ಖಾಸಗಿ ಕಂಪನಿಗಳು ತಮ್ಮ ಮೀಸಲಾತಿ ವಿರೋಧಿ ನಿಲುವು ಪ್ರಕಟಿಸುತ್ತಲೇ ಇವೆ. ಖಾಸಗಿ ಕಂಪನಿಗಳಲ್ಲಿ ಮೀಸಲಾತಿಯ ಕುರಿತು ವರದಿ ತಯಾರಿಸಿದ ತಂಡದಲ್ಲಿದ್ದ ರಾಷ್ಟ್ರೀಯ ಕಾನೂನು ಶಾಲೆಯ (NLU) ಜಾಫೆಟ್ ಶಾಂತಪ್ಪನವರು ಮೀಸಲಾತಿಯಿಂದ (ಅಮೆರಿಕದಲ್ಲಿನ **affirmative action**) ಯಾವ ಖಾಸಗಿ ಕಂಪನಿಗೂ ಹಾನಿಯಾಗಿಲ್ಲವಷ್ಟೇ ಅಲ್ಲ, ಬದಲಾಗಿ ಲಾಭ ಹೆಚ್ಚಿದೆ ಎಂಬುದನ್ನು ಅಂಕಿ ಅಂಶಗಳ ಸಮೇತ ವಿವರಿಸಿದರು.

ಮೀಸಲಾತಿಯಿಂದ **productivity** ಯಲ್ಲಿ ಕುಸಿತ, ಬಂಡವಾಳ ಹೂಡಿಕೆಯಲ್ಲಿ ಕುಸಿತ ಹಾಗೂ ಮ್ಯಾನೇಜ್‌ಮೆಂಟ್‌ನ ಕಾರ್ಯನಿರ್ವಹಣೆಯಲ್ಲಿ ಅಡಚಣೆ ಆಗಲಿದೆ ಎಂಬ ಭಾರತದ ಖಾಸಗಿ ಕಂಪನಿಗಳ ವಾದ ಎಷ್ಟು ಜೊಳ್ಳು ಎಂಬುದನ್ನು ಅಮೆರಿಕದ ಕಂಪನಿಗಳಲ್ಲಿ **affirmative action** ನಿಂದಾದ ಪ್ರಯೋಜನಗಳ ಮೂಲಕ ವಿವರಿಸಿದ ಜಾಫೆಟ್ ಶಾಂತಪ್ಪ, ಅಲ್ಲಿನ ಸುಪ್ರೀಂ ಕೋರ್ಟ್‌ನಲ್ಲಿ ಒಂದೇ ಒಂದು ಕಂಪನಿಯೂ **affirmative action** ನಿಂದ ತನಗೆ ನಷ್ಟವಾಗಿದೆ ಎಂದು ಹೇಳಿಲ್ಲ ಎಂಬುದನ್ನು ಸಭಿಕರಿಗೆ ಗೊತ್ತು ಮಾಡಿದರು.

ಇವತ್ತು ಮೀಸಲಾತಿ ವಿಷಯದಲ್ಲಿ ಚರ್ಚೆಗೆ ಬರುತ್ತಿರುವ ವಿಷಯಗಳೆಲ್ಲ ಅವತ್ತೇ **constitutional assembly** ಯಲ್ಲಿ ನಿರ್ಧಾರವಾಗಿ ಹೋಗಿವೆ ಎಂಬುದನ್ನೂ ಅವರು ಜ್ಞಾಪಿಸಿದರು.

ಇಂದೂಧರ ಹೊನ್ನಾಪುರ:

ಇಂದು ಮೀಸಲಾತಿ ಪಡೆದವರಿಗೆ ಪ್ರತಿಭೆ ಇಲ್ಲ ಎನ್ನುವ ವಾದವೇ ಸುಳ್ಳು. ಈ ದೇಶ ಇಂದು ಇಷ್ಟಾದರೂ ಪ್ರಗತಿ ಸಾಧಿಸಿರುವುದಕ್ಕೆ ಈ ದೇಶದ ಶೋಷಿತ ಜಾತಿಗಳ ಪ್ರತಿಭೆಗಳೇ ಕಾರಣ. ಕಲೆ, ಕ್ರೀಡೆ, ಇನ್ನಿತರ ಯಾವುದೇ ಕ್ಷೇತ್ರ ತೆಗೆದುಕೊಂಡರೂ ಅಲ್ಲಿರುವುದು ಶೋಷಿತ ಜಾತಿಗಳ ಪ್ರತಿಭೆಗಳೇ!

ಆದರೆ ಆಗುತ್ತಿರುವ ಅನ್ಯಾಯವೆಂದರೆ ನಮ್ಮ ದೇಶದಲ್ಲಿ ಈ ಪ್ರತಿಭೆಗಳನ್ನು ಅಳೆಯುವ ತಕ್ಕಡಿಯೇ ಸರಿಯಿಲ್ಲ. ತಕ್ಕಡಿಯೇ ಸರಿಯಿಲ್ಲದ ಮೇಲೆ ತೂಗಿದ ತೂಕ ಹೇಗೆ ಸರಿಯಿರುತ್ತದೆ?



ಶಿವಸುಂದರ್:

ಮೂರು ವಿಷಯಗಳನ್ನು ಪ್ರಸ್ತಾಪಿಸಬೇಕು. ಮೀಸಲಾತಿಯೆಂಬ ಪ್ರಜಾತಾಂತ್ರಿಕ ಪ್ರಶ್ನೆಗೆ ಈ ದೇಶದ ಪ್ರಭುತ್ವ ಹಾಗೂ ಸಮಾಜ ಪ್ರತಿಕ್ರಿಯಿಸುತ್ತಿರುವ ರೀತಿಯೇ ಈ ದೇಶದ ಪ್ರಜಾತಂತ್ರ ಅಪರಿಪೂರ್ಣವಾದದ್ದೆಂದು ತೋರಿಸುತ್ತದೆ. ಈ ದೇಶದ ಸಂವಿಧಾನದ ಮೂಲ ಆಶಯವಾದ ಸಮಾನತೆ-ಸ್ವಾತಂತ್ರ್ಯ-ಭ್ರಾತೃತ್ವಗಳು ಸಾಧ್ಯವಾಗದ ರೀತಿ ಪ್ರಭುತ್ವ ಕಳೆದ 58 ವರ್ಷಗಳಲ್ಲಿ ನಡೆದುಕೊಂಡಿದೆ. ಮೀಸಲಾತಿ ವಿಷಯದಲ್ಲೇ ಜಾತಿ ಆಧಾರಿತ ಮೀಸಲಾತಿಯನ್ನು ಸಂವಿಧಾನವೇ ಒಪ್ಪಿಕೊಂಡರೂ ಸಂವಿಧಾನಕ್ಕೆ ಆದ ಮೊದಲನೆ ತಿದ್ದುಪಡಿ ಚಂಪಕ ದೊರೆರಾಜನ್ ಪ್ರಕರಣದಲ್ಲಿ ಮೇಲ್ಜಾತಿ ಪ್ರತಿಭೆಗೆ ಮೀಸಲಾತಿಗೆ ಅನ್ಯಾಯವಾಗಬಾರದೆಂದು 1963 ರಲ್ಲಿ ಸುಪ್ರೀಂಕೋರ್ಟು ಜಾತಿಯನ್ನು ಹಿಂದುಳಿದಿರುವಿಕೆಗೆ ಮಾನದಂಡ ಅಲ್ಲ ಎಂದು ಘೋಷಿಸಿತು. ಅದು 1992 ರಲ್ಲಿ ಸುಪ್ರೀಂಕೋರ್ಟು ಮತ್ತೆ ಈ ದೇಶದ ಜಾತಿ ಶೋಷಿತ ವರ್ಗ ಎಂದು ತೀರ್ಮಾನವಾಗುವ ತನಕ ಮುಂದುವರೆಯಿತು. ಅದೇ ರೀತಿ 1953 ರಲ್ಲಿ ಕಾಕಾ ಕಾಲೇಲ್ಕರ್ ವರದಿಯನ್ನು, 1983 ರಲ್ಲಿ ಮಂಡಲ್ ವರದಿಯನ್ನು ಶಾಸಕಾಂಗ ಮೂಲೆಗುಂಪು ಮಾಡಿತು. ಹೀಗೆ ಇಡೀ ಪ್ರಭುತ್ವದ ಯಂತ್ರಾಂಗವೇ ಸಂವಿಧಾನದ ಆಶಯವಾದ ಸಾಮಾಜಿಕ ನ್ಯಾಯದ ವಿರುದ್ಧ ಕೆಲಸ ಮಾಡಿತು. ಇನ್ನು ಸಮುದಾಯಗಳ ಮೂಲಭೂತ ಬದಲಾವಣೆಗೆ ಕಾರಣವಾಗಬೇಕಿದ್ದ ಸಾಮಾಜಿಕ-ಆರ್ಥಿಕ ಬದಲಾವಣೆಯ ಪ್ರಶ್ನೆ ದೂರದೇ ಉಳಿಯಿತು. ಆದ್ದರಿಂದಲೇ ಇಂದಿನ ಮೀಸಲಾತಿ ವಿವಾದಕ್ಕೆ ಈ ದೇಶದಲ್ಲಿ ಬೇರುಬಿಡದ-ಹಾಗೂ-ಅಪರಿಪೂರ್ಣ ಪ್ರಜಾ ತಂತ್ರವೇ ಕಾರಣ.

ಎರಡನೆಯದಾಗಿ ಜಾತಿ ವ್ಯವಸ್ಥೆ ಹಾಗೂ ಅದನ್ನಾಧರಿಸಿದ ವಂಚನೆಗಳು ಇಂದೂ ಸಹ ಪುನರುತ್ಪಾದನೆಯಾಗುತ್ತಿವೆ. ವಾಸ್ತವವಾಗಿ ಈ ದೇಶದಲ್ಲಿ ಎಲ್ಲಾ ಸಮುದಾಯಗಳ ಸಮಾನ ಅಭಿವೃದ್ಧಿಗೆ ಪೂರಕವಾದ ಅಭಿವೃದ್ಧಿಯ ಮಾರ್ಗ ಸಾಧ್ಯವಾಗಿದ್ದರೆ ಜಾತಿ ಆಧಾರಿತ ವಂಚನೆ ನಿಲ್ಲುತ್ತಿತ್ತು. ಆದರೆ 1947 ರ ನಂತರದ ಈ 58 ವರ್ಷಗಳ ಅಭಿವೃದ್ಧಿ ಪಥ ಹಳ್ಳಿಗಾಡಿನಲ್ಲಿ ಹಾಗೂ ನಗರದಲ್ಲಿ ಹಿಂದೆ ಇದ್ದ ಸಾಮಾಜಿಕ ಪರಿಸ್ಥಿತಿಯನ್ನು ಹಾಗೂ ರಾಜಕೀಯ ಸಮೀಕರಣವನ್ನು ಯಾವ ರೀತಿಯಲ್ಲೂ ಬದಲಾವಣೆ ಮಾಡಲಿಲ್ಲ. ಆದ್ದರಿಂದಲೇ 1953 ರಲ್ಲಿ 2300 ರಷ್ಟಿದ್ದ ಹಿಂದುಳಿದ ವರ್ಗ ಎಂದು ಕರೆಯಬಹುದಾದ ಜಾತಿಗಳ ಸಂಖ್ಯೆ 1988 ರ ಮಂಡಲ್ ಆಯೋಗದ ರಚನೆಯಾಗುವ ವೇಳೆಗೆ 3700 ಕ್ಕೇರಿತ್ತು.

ಅಷ್ಟು ಮಾತ್ರವಲ್ಲ, ಇಂದಿನ ಹೊಸ ಆರ್ಥಿಕತೆ ಎಂದು ಕರೆಯಲ್ಪಡುವ ನವ ಆರ್ಥಿಕ ರಿಜೀಂನಲ್ಲಿ ಅಭಿವೃದ್ಧಿಯ ಲಾಭ ಪಡೆದು ಮುಂದುವರೆದವರು ಮೇಲ್ಜಾತಿಗಳೇ. ಆ ಆರ್ಥಿಕತೆ ದಲಿತ-ಹಿಂದುಳಿದವರನ್ನು ಇನ್ನಷ್ಟು ಹಿಂದುಳಿದವರನ್ನಾಗಿಯೇ ದೂರ ವಿಟ್ಟಿದೆ.

ಮೂರನೆಯದಾಗಿ ಹಾಗೂ ಅತಿಮುಖ್ಯವಾಗಿ ಇಂದಿನ ಖಾಸಗೀಕರಣ-ಜಾಗತೀಕರಣದ ಯುಗದಲ್ಲಿ ಮೀಸಲಾತಿ ಎಂಬ ಸಾಂಕೇತಿಕ ಸಾಮಾಜಿಕ ನ್ಯಾಯದ ಕ್ರಮಗಳಿಗಿರುವ ಮಿತಿ. ಮೀಸಲಾತಿ ಎಂಬ ಸಾಮಾಜಿಕ ನ್ಯಾಯದ ತತ್ವವನ್ನೇ ಇಂದಿನ ವಿದೇಶಿ ಬಂಡವಾಳ-ಸ್ವದೇಶಿ ಬಂಡವಾಳಗಳು ತಮ್ಮ ಅಭಿವೃದ್ಧಿಗೆ ತೊಡಿಸಿದ ಸಂಕೋಲೆ ಎನ್ನುತ್ತವೆ. ಹಾಗೂ ಯಾವ ಕಾರಣಕ್ಕೂ ತಮಗೆ ಆ ಶರತ್ತು ವಿಧಿಸಬಾರದೆಂದು ಬ್ಲಾಕ್‌ಮೇಲ್ ಮಾಡುತ್ತವೆ. ಪ್ರಭುತ್ವವೂ ಸಹ 91 ರ ನಂತರ ತನ್ನೆಲ್ಲಾ ಪ್ರಜಾತಾಂತ್ರಿಕ ಮುಸುಕನ್ನು ತೆಗೆದು ಬಂಡವಾಳಿಗರ ಪರವಾಗಿ ಬಟಾಬಯಲಾಗಿ ನಿಂತಿದೆ. ನ್ಯಾಯ ಕೇಳುವ ಜನರ ಮೇಲೆ ಫ್ಯಾಸಿಸ್ಟ್ ಆಕ್ರಮಣ ಮಾಡುತ್ತಿದೆ. ಹೀಗಾಗಿ ಕ್ಷಯಿಸುತ್ತಿರುವ ಅವಕಾಶಗಳಲ್ಲಿ ಹೆಚ್ಚಿನ ಪಾಲಿಗೆ ಪರಸ್ಪರ ಹೊಡೆದಾಡುವ ಪರಿಸ್ಥಿತಿ ಉದ್ಭವಿಸಿದೆ. ಮೇಲಾಗಿ ದಲಿತ ಹಾಗೂ-ಹಿಂದುಳಿದ ಪ್ರತಿಭೆಗಳು ತಮ್ಮ ಸಮುದಾಯಗಳ ಕಗ್ಗೊಲೆಗೆ ಕಾರಣವಾಗುವ ನರಭಕ್ಷಕ ವ್ಯವಸ್ಥೆಯ ಮೇಲ್ವಿಚಾರಕರಾಗಿ ನೇಮಕಗೊಳ್ಳುವ ಕ್ರೂರ ವ್ಯಂಗ್ಯ ನಮ್ಮ ಮುಂದಿದೆ.

ಹೀಗಾಗಿ ಇಂದು ಮೀಸಲಾತಿಯ ಸಾಂಕೇತಿಕ ಫಲಗಳನ್ನು ರಕ್ಷಿಸಿಕೊಳ್ಳುತ್ತಲೇ ಮೂಲಭೂತವಾದ ಸಂಪನ್ಮೂಲಗಳ ಪ್ರಜಾತಾಂತ್ರಿಕ ಪುನರ್ ಹಂಚಿಕೆಯ ರಾಜಕೀಯ ಹೋರಾಟ ಕಟ್ಟಲು ಮುನ್ನಡೆಯ ಬೇಕಿದೆ.

-ಹುಲಿಕುಂಟೆ ಮೂರ್ತಿ

ಜಾಡಮಾಲಿಗಳಲ್ಲಿ ಯಾಕೆ ಬ್ಯಾಕ್‌ಲಾಗ್ ಇಲ್ಲ?

ಬಂದ ಪತ್ರ

ಪ್ರೀತಿಯ ಗೌರಿ ಲಂಕೇಶರಿಗೆ,

ದಮನಿತ ವರ್ಗದವರಿಗೆ ಮೀಸಲು ಕಲ್ಪಿಸಿ ಅವರ ಜೀವನ ಹಸನುಗೊಳಿಸುವ ಪ್ರಸ್ತಾಪ ಬಂದಾಗಲೆಲ್ಲ, ಕುಟಿಲ ಮೇಲ್ವರ್ಗದ ಹಿತಾಸಕ್ತಿಗಳಿಂದ ಹಿಂಸಾತ್ಮಕ ದಮನಕಾರಿ ಕಾರ್ಯತಂತ್ರಗಳು ನಡೆದು ಅಂತಹ ಸದುದ್ದೇಶದ ಪ್ರಯತ್ನವನ್ನು ಹತ್ತಿಕ್ಕುವ ಯತ್ನಗಳು ಪ್ರಸ್ತುತವಾಗಿಯೇ ನಡೆಯುತ್ತವೆ. ಇದಕ್ಕೆ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ನಾವು ಕಂಡಂತೆ ಮಂಡಲ್ ವರದಿ ವಿರುದ್ಧ ಭುಗಿಲೆದ್ದ ಕಮಂಡಲ ಚಳವಳಿ ಮೊದಲನೆಯದಾದರೆ, ಇತ್ತೀಚೆಗೆ ಶುರುವಾಗಿರುವ ಉನ್ನತ ವಿದ್ಯಾಭ್ಯಾಸದಲ್ಲಿನ ಮೀಸಲಾತಿ ವಿವಾದ ಮತ್ತೊಂದು ತಾಜಾ ಉದಾಹರಣೆ.

ಮನು ಪ್ರಣೀತ ಚಾತುರ್ವರ್ಣ ಪದ್ಧತಿ ದಮನಿತರ ಬದುಕಿಗೆ ಕೊಳ್ಳಿ ಇಟ್ಟ 'ಬೆಂಕಿ'ಯಾದರೆ, ವರ್ಣ ವ್ಯವಸ್ಥೆಯ ಸಕಲ ಸುಖ-ಸವಲತ್ತನ್ನೂ ಅನುಭವಿಸಿದ ಮೇಲ್ವರ್ಗದವರಿಗೆ ಇಂದಿಗೂ ಅದು ಎಂದೂ ನಂದದ 'ನಂದಾ ದೀಪ'ವಾಗಿಯೇ ಉಳಿದುಕೊಂಡಿದೆ. ಈ ಮಧ್ಯೆಯೂ ಬುದ್ಧ, ಬಸವ, ಅಂಬೇಡ್ಕರ್, ಗಾಂಧೀಜಿಯಂತಹ ಮಹಾನ್ ಮಾನವತಾವಾದಿಗಳು ದಮನಿತರನ್ನು ಚಾತುರ್ವರ್ಣ ಪದ್ಧತಿಯ ಬೆಂಕಿಯ ಕಾವಿನಿಂದ ಕೊಂಚ ದೂರ ಸರಿಸುವ ಪ್ರಯತ್ನ ಮಾಡಿ ಅದರಲ್ಲಿ ತಕ್ಕಮಟ್ಟಿಗೆ ಯಶಸ್ವಿಯೂ ಆದರು.

ಪ್ರತಿಭೆಯ ವ್ಯಾಖ್ಯಾನ ದಿನ ದಿನಕ್ಕೂ ನಗರ ಕೇಂದ್ರಿತವಾಗುತ್ತಿರುವುದು, IT, BT ಗಳ ಅಬ್ಬರದಲ್ಲಿ ವೈಭವೋಪೇತ ಜೀವನಕ್ಕೆ ಅನುವಾಗುವಂತಹ ಸಂಪತ್ತು ಸೃಷ್ಟಿಗೆದೇ, ಆ ಪ್ರತಿಭೆಯ ಬಹುಭಾಗ ಪೋಲಾಗುತ್ತಿರುವುದು ಕೇವಲ ಕಾಕತಾಳೀಯವಲ್ಲ, ಪ್ರತಿಭೆಯ ಅಪಮೌಲ್ಯಕ್ಕೆ ವ್ಯಕ್ತಿಯೊಬ್ಬನ ಮೂಲಭೂತ ಹೃದಯವಂತಿಕೆ, ಹೃದಯ ವೈಶಾಲ್ಯತೆಯನ್ನೇ ನಾಶ ಮಾಡುತ್ತಿರುವುದು ಇಂದು ನಾವೆಲ್ಲ ನೋಡುತ್ತಿದ್ದೇವೆ. ಸಾವಿರಾರು ವರ್ಷ ವಿದ್ಯೆ, ವ್ಯಾಪಾರ, ರಾಜ್ಯಭಾರ ಎಲ್ಲವನ್ನೂ ತಮ್ಮ ಜಹಗೀರಾಗಿ ಮಾಡಿಕೊಂಡು ಶೇ. ನೂರು ಮೀಸಲಾತಿಯನ್ನು ಸಾವಿರಾರು ವರ್ಷ ಅನುಭವಿಸಿದ, ಸಂಪತ್ತಿನ ಸಿಂಹಪಾಲನ್ನು ಒಂದೇ ಗುಕ್ಕಿಗೆ ಕಬಳಿಸಿದ ಮಂದಿ ದಲಿತರಿಗೆ ದೊರೆತ ಐವತ್ತು ವರ್ಷದ ಮೀಸಲನ್ನು ಕಂಡು ಅಸಹನೀಯ ತುರಿಕೆ ಹತ್ತಿಸಿಕೊಂಡಿದ್ದಾರೆ. ಇವರ ತುರಿಕೆ ಶಮನ ಮಾಡಲು ಜಾತಿವಾರು ಮೀಸಲು ಜಾರಿಗೊಳಿಸಲು ದಲಿತರೇ ಖುದ್ದು ಕೇಳಿಕೊಂಡರೂ ಮೇಲ್ವರ್ಗದ ಪಟ್ಟಭದ್ರರು ಅದರ ವಿರುದ್ಧವೂ ಮತ್ತೊಂದು ಚಳವಳಿ ಶುರುವಿಟ್ಟುಕೊಳ್ಳಬಹುದು. ಯಾಕೆಂದರೆ ಮೀಸಲು ನಂತರದ ಉಳಿಕೆಯ ಸಿಂಹಪಾಲನ್ನು ಕಬಳಿಸುತ್ತಿರುವುದು ಇದೇ ಮಂದಿ ತಾನೇ?!

ಸರ್ಕಾರಿ ಹುದ್ದೆಗಳಲ್ಲಿ ಪ್ರತಿಭಾನ್ವಿತ ದಲಿತ ಅಭ್ಯರ್ಥಿಗಳ ಕೊರತೆಯಿಂದ ಬ್ಯಾಕ್ ಲಾಗ್ ಹುದ್ದೆಗಳು ಸೃಷ್ಟಿಯಾಗಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಚೋದ್ಯವೆಂದರೆ ಇದೇ ಪ್ರತಿಭಾವಂತರ ಕೊರತೆ ಜಾಡಮಾಲಿ ಹುದ್ದೆಗಳಲ್ಲಿ ಕಂಡುಬಂದಂತಿಲ್ಲದಿರುವುದು. ಇದೊಂದೇ ಉದಾಹರಣೆ ವೈದಿಕಶಾಹಿಯ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಅವರ ಪ್ರಕಾರ ಕುಸುರಿ ಕೆಲಸ ಮಾಡುವವನಿಗಿಂತ ಆ ಕುಸುರಿಗೆ ಬೆಲೆ ಕಟ್ಟುವವನೇ ಹೆಚ್ಚು ಶ್ರೇಷ್ಠ.

ದುಡಿದು ತಿನ್ನುವವನನ್ನು ಹೀನಾಯವಾಗಿ ನಡೆಸಿಕೊಂಡು, ಯಾರಿಗೂ ಅರ್ಥವಾಗದ ಮಂತ್ರದ ಉಗುಳನ್ನು ಉಗುಳುವವನಿಗೆ ಶ್ರೇಷ್ಠತೆಯ ಪಟ್ಟ ಕಟ್ಟಿದ ಈ ದೇಶ ಭಾಗಶಃ ದಟ್ಟ ದರಿದ್ರರ ದೇಶವಾಗಿರುವುದು ಯಾಕೆಂದು ಈಗಲಾದರೂ ಮನನ ಮಾಡಿಕೊಳ್ಳಬೇಕು. ಆಗಲೇ ಮೀಸಲಾತಿಯಂಥ ಪುರೋಗಾಮಿ ಪ್ರಯತ್ನಗಳು ಎಲ್ಲ ವರ್ಗದ ಪಾಲಿಗೂ 'ಬೆಂಕಿ' ಯಾಗುವ ಬದಲು 'ಬೆಳಕು' ಆಗಲು ಸಾಧ್ಯ.

-ಸದಾನಂದ ಸಿ. ಗಂಗನಬೀಡು

ನಾನು ಯಾವುದೇ ಮಹಿಳೆಗಿಂತ ಮಿಕಿಮೌಸ್ ಅನ್ನು ಹೆಚ್ಚು ಪ್ರೀತಿಸುತ್ತೇನೆ -ವಾಲ್ಟ್ ಡಿಸ್ನೆ

ಶಾಸ್ತ್ರಿಗಳ ಉದ್ಯೋಗ ಖಾತರಿ ಯೋಜನೆ!

ಸದಾ ಹ್ಯಾಪ್ಮೋರೆ ಹಾಕಿಕೊಂಡಿರುತ್ತಿದ್ದ ಕಾಶೀನಾಥ ಶಾಸ್ತ್ರಿಗಳು ಅವತ್ತು ಬಲೇ ಖುಷೀಲಿದ್ದರು. ವಾಕಿಂಗ್ ಮುಗಿದ ನಂತರ ಕಾಳಿಯೊಂದಿಗಿನ ಹರಟೆಯಲ್ಲಿ ಪ್ರಮುಖ ಪಾತ್ರ ಅವರದ್ದೇ ಆದರೂ ಜಾಯಮಾನದ ಗುಣದಂತೆ ಬಿಲ್ಲನ್ನು ಮಾತ್ರ ಬೇರೆಯವರಿಗೆ ಯಾವುದೋ ಮಾಯದಲ್ಲಿ ಸಾಗ ಹಾಕುತ್ತಿದ್ದವರು ಅವತ್ತು ತಾವೇ ಅದನ್ನು ಕೈಗೆತ್ತಿಕೊಂಡು ಸುಖೇದಾಶ್ಚರ್ಯ ಮೂಡಿಸಿದರು. 'ಏನು ಶಾಸ್ತ್ರಿಗಳೇ ಇವತ್ತು' ಅಂತ ಮೂಗು ಮೇಲೇರಿಸಿದಾಗ 'ಸಂದೂ ಸಂತರ್ಪಣೆ ನಡೀಲಪ್ಪ' ಎಂದು ಹೇಳಿ ಮುಖ ಮೊರದಗಲ ಮಾಡಿಕೊಂಡರು. 'ಆ ಪರಮಾತ್ಮ ಈಗಲಾದರೂ ನನ್ನ ಮೇಲೆ ದೃಷ್ಟಿ ಬಿಟ್ಟ' ಅಂತ ಎರಡೂ ಕೈಗಳನ್ನು ಮೇಲೆ ಎತ್ತಿ ಆ ದೇವರಿಗೆ ಕೃತಜ್ಞತೆ ಅರ್ಪಿಸಿದರು.

ಶಾಸ್ತ್ರಿಗಳ ಮಾತಿನ ಅರ್ಥ ನನಗೆ ಹೊಳೆಯಲಿಲ್ಲ. ದೇವರು ಕಣ್ಣು ಬಿಡುವುದು ಎಂದರೇನು? ಮುಚ್ಚಿದ್ದರೆ ತಾನೆ ಬಿಡುವ ಪ್ರಶ್ನೆ. ಅವರು ಕಣ್ಣು ಮುಚ್ಚುವುದೇ ಇಲ್ಲ ಎನ್ನುವುದನ್ನು ಹಲವು ಬಾರಿ ಕೇಳಿದ್ದೆ ಓದಿದ್ದೆ ದಮಯಂತಿ ಸ್ವಯಂವರದಲ್ಲಿ ಅವಳ ಮನಸ್ಸಿನ ದೃಢತೆಯನ್ನು ಪರೀಕ್ಷಿಸಲೋ, ಇಲ್ಲ ಅವಳನ್ನು ಹೊಡೆದುಕೊಳ್ಳಬೇಕು ಅಂತಲೋ ದೇವಾನು ದೇವತೆಗಳು ಆಕೆ ಅತಿಯಾಗಿ ಮೋಹಿಸಿದ್ದ ನಳನ ರೂಪದಲ್ಲೇ ಸ್ವಯಂವರ ಮಂಟಪದಲ್ಲಿ ಆಸೀನರಾಗಿದ್ದರಂತೆ. ದೇವತೆಗಳ ಈ ಮೋಸಕ್ಕೆ ದಮಯಂತಿ ಬಲಿಯಾಗ ಲಿಲ್ಲವಂತೆ. ಅವಳು ಆಧುನಿಕ ಶೆರ್ಲಾಕ್ ಹೋಮ್ಸ್ ಗುಂಪಿಗೆ ಸೇರಿದವಳು ಇರಬೇಕು.



ಈ ಪತ್ತೇದಾರಿ ಮಹಾಶಯ ಒಮ್ಮೆ ಅಪರಿಚಿತ ತನ್ನನ್ನು ಕಾಣಲು ಬಂದಾಗ ಆತನ ಹೆಸರಿಡಿದು ಮಾತನಾಡಿಸಿದನಂತೆ. ಎಲ ಎಲಾ ಇದು ಹೇಗೆ ಸಾಧ್ಯ ಆಯಿತು ಅಂತ ಅವನು ಪೆಕರು ಪೆಕರು ಆಗಿ ಆಡುತ್ತಿರುವುದನ್ನು ನೋಡಿ ಪತ್ತೇದಾರಿ ಮಹಾಶಯರು 'ಅಯ್ಯೋ ಪೆಕ್ರೆ. ನಿನ್ನ ಕಿಟ್ ಮೇಲೆ ಅದನ್ನು ನಮೂದಿಸಿದೆಯಲ್ಲ' ಅಂತ ಹೇಳಿದರಂತೆ. ಅಷ್ಟು ಸೂಕ್ಷ್ಮ ಅವರ ಬುದ್ಧಿ. ಒಂದು ವೇಳೆ ಆಗಂತುಕ ಬೇರೆಯವರ ಕಿಟ್ ಸಂದಿದ್ದರೆ ಶೆರ್ಲಾಕ್ ಹೋಮ್ಸ್ ತರ್ಕ ಏನಾಗುತ್ತಿತ್ತು ಅನ್ನುವ ಕುಟಕಿಗಳ ಪ್ರಶ್ನೆ ಸಹಜವಾಗಿದ್ದರೂ ಅವನ ಕಾಲದಲ್ಲಿ ಇಂಗ್ಲೆಂಡಿನ ಜನ ಇಂತಹ ಜುಜುಬಿ ಕೆಲಸಗಳಿಗೆ ಕೈಹಾಕುತ್ತಿರಲಿಲ್ಲ ಎಂಬ ಸಮಾಧಾನ ಹೇಳಬಹುದಾಗಿದೆ.

ಅದು ಹೇಗಾದರೂ ಇರಲಿ. ಈ ಮಹಾಶಯ ದಮಯಂತಿ ಸ್ವಯಂವರದಲ್ಲಿ ಹಾಜರಾಗಿದ್ದರೆ ಮಾರುವೇಷದಲ್ಲಿದ್ದ ದೇವಾನುದೇವತೆಗಳನ್ನು ಹೇಗೆ ಪತ್ತೆಹಚ್ಚುತ್ತಿದ್ದ ಎಂಬ ಕುತೂಹಲಕಾರಿ ಪ್ರಶ್ನೆ ಬರುತ್ತದೆ. ಪೀಠಗಳಲ್ಲಿ ಆಸೀನರಾಗಿ ತಮ್ಮ ಪಾದವನ್ನು ಭೂಮಿಗೆ ಸ್ಪರ್ಶಿಸದಿರುವುದರಿಂದ ಎಂಬ ಹಲವರ ಹೇಳಿಕೆಗಳನ್ನು ಭೂಮಿಗೆ ಇಳಿದು ಬಂದು ಮನುಷ್ಯರಂತೆಯೇ ನಡೆದಾಡುವ ದೇವತೆಗಳನ್ನು ಸಿನಿಮಾದಲ್ಲಿ ಕಂಡವರು ಅಲ್ಲಗಳೆಯುತ್ತಾರೆ. ಉಳಿದಿರುವ ವಿಧಾನವೆಂದರೆ ರೆಪ್ಪೆ ಮಿಟುಕಿಸದೆ ನಿಂತಿರುವ ಆಕೃತಿಗಳು ದೇವರು ಎಂದರೆ 'ಸರಿಯಾದ ಉತ್ತರ' ಎಂಬುದಾಗಿ ಉದಯ ಟಿವಿಯಲ್ಲಿ ಬಂಗಾರದ ಬೇಟೆಯ ವಿಜಯಲಕ್ಷ್ಮಿ ತರಹ ಹೇಳಬಹುದು. ಪತ್ತೇದಾರ ಶೆರ್ಲಾಕ್ ಹೋಮ್ಸ್ ಇದೇ ತಂತ್ರ ಬಳಸುತ್ತಿದ್ದುದು ಖಾತರಿ. ದಮಯಂತಿಯೂ ಅದನ್ನೇ ಮಾಡಿದಳು. ರೆಪ್ಪೆ ಮಿಟುಕಿಸುತ್ತಿದ್ದ ನಿಜವಾದ ನಳನಿಗೆ ಹಾರ ಹಾಕಿ ತಾನು ವಿಶ್ವದ ಪ್ರಥಮ ಮಹಿಳಾ ಪತ್ತೇದಾರಿಣಿ ಎಂಬುದನ್ನು ಸಾಬೀತುಪಡಿಸಿದಳು. ಹೀಗಿರುವಾಗ ದೇವರು ಕಣ್ಣುಬಿಟ್ಟ ಎಂಬುದಾಗಿ ಪುರಾಣ ಪುಣ್ಯ ಕಥೆಗಳನ್ನೆಲ್ಲ ಅರೆದು ಕುಡಿದಿರುವ ಶಾಸ್ತ್ರಿಗಳು ಹೀಗೆ ಹೇಳಿದರೆ ಹೇಗೆ ಎಂಬ ಸಂಶಯ ಮೂಡಿತು. ವಿಷದೀಕರಿಸಲು ಬಿನ್ನವಿಸಿಕೊಂಡೆ. ಅವರ ಮಾತಿನ ಸಾರಾಂಶ ಇದು.

ಕಾಶೀನಾಥ ಶಾಸ್ತ್ರಿಗಳು - ಆಚಾರ ವಿಚಾರಗಳಲ್ಲಿ ಕಟ್ಟುನಿಟ್ಟು. ಪುತ್ರ ಸಂತಾನಕ್ಕಾಗಿ ಮಾತ್ರ ಸಂಭೋಗ ಅನ್ನುವುದು ಅವರ ವ್ರತ. ಕಾಲ, ಗಳಿಗೆ ಕೂಡಿ ಬಂದರೆ ಮಾತ್ರ ಗಂಡ ಹೆಂಡತಿ ಕೂಡುವಿಕೆ. ಒಮ್ಮೆ ಸೇರಿದರೆ ತಿಂಗಳ ಪರೀಕ್ಷೆ ನಂತರವೇ, ಅದು ಫಲ ನೀಡದಿದ್ದರೆ, ಮರು ಪ್ರಯತ್ನ. ಶಾಸ್ತ್ರಿಗಳ ಈ ಪರೀಕ್ಷಾ ಪ್ರಯತ್ನದ ಫಲ ಮೂರು ಗಂಡು ಸಂತಾನ. ಈ ಪುತ್ರ ರತ್ನಗಳು ದೇವರ ಕೃಪೆ ಅನ್ನುವುದು ಅವರ ಅಚಲ ನಂಬಿಕೆ. ಮಕ್ಕಳ ಮುಖದ ಹೋಲಿಕೆ ಯಾರದ್ದೋ ಇರುವಂತಿದೆ ಅನ್ನುವ ಗುಸುಗುಸು ಮಾತು ಕೇಳಿಬರಬಹುದು. ಅದು ವಿವಾದಾತ್ಮಕ ಸಂಗತಿ. ದೇವರ ಮುಖದಂತೆ ಇಲ್ಲ ಎಂಬುದಂತೂ ನಿಶ್ಚಯ. ಅದು ಹೇಗಾದರೂ ಇರಲಿ. ಶಾಸ್ತ್ರಿಗಳ ಮಾತನ್ನೇ ನಂಬೋಣ. ಅವರು ದೇವರ ಮಕ್ಕಳೇ ಹೌದಾದರೆ ಆ ಮಕ್ಕಳಿಗೆ ತಂದೆ ತೋರಿದ ದಾರಿ ಯಾವುದು?

ದೇಶದಲ್ಲಿ ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರ, ಮೂಡಿಸಿ!

ಇದರಿಂದ ಶಾಸ್ತ್ರಿಗಳಿಗೆ ಅವರ ವಂಶಜರಿಗೆ ಅಥವಾ ಅವರೇ ಹೇಳಿದಂತೆ ದೇವರ ಮಕ್ಕಳಿಗೆ ಬಂದ ಲಾಭ ಏನು?

ಈ ಕೃತ್ಯಗಳಿಂದ ಜನರಲ್ಲಿ ಪಾಪಪ್ರಜ್ಞೆ, ಆಧ್ಯಾತ್ಮ ಕತೆಯ ಕಡೆ ಒಲವು!

ಓದುಗರಲ್ಲಿ ಗಲಿಬಿಲಿ ಉಂಟಾದಲ್ಲಿ ವಿಷದೀಕರಿಸುತ್ತೇನೆ.

ಜ್ಯೋತಿಷ್ಯ ಬಲ್ಲವರು ಶಾಸ್ತ್ರಿಗಳು. ಕಲೆಗಾರರು. ಊರ, ಪರ ಊರುಗಳಲ್ಲಿಯ ಶ್ರೀಮಂತರನ್ನು, ರಾಜಕಾರಣಿಗಳನ್ನು, ಪ್ರತಿಭಾವಂತರನ್ನು ಸೆಳೆಯುವ ಮಾತಿನ ಮೋಡಿ ಅವರದ್ದು. ಈ ಮಂತ್ರಿಗಳು ಮರುಳಾದರು ಅಂತ ಹಿಂಬಾಲಕರು ಕೈ ತೋರಿಸಿದರು. ಜ್ಯೋತಿಷ್ಯವೇ ಭವಿಷ್ಯ ಎಂಬ ನಂಬಿಕೆಯ ಜನರ ಹಿಂದು ಶಾಸ್ತ್ರಿಗಳ ಮನೆ ಎದುರು. ಹಣ ತರುವ ಉದ್ಯಮ ಎಂದು ತಿಳಿದ ನಂತರ ದೇವರ ಮಕ್ಕಳಿಗೂ ಅದರತ್ತ ಒಲವು. ಅವರೂ ಜ್ಯೋತಿಷ್ಯ ಹೇಳಲು ಪ್ರಾರಂಭಿಸಿದರು.

ಇರುವ ಮನೆ ಸಾಲದಾಯಿತು. ಬೇರೆ ಮನೆ ಮಾಡಲು ಚಿಂತಿಸಿದರು. ಹಾರುವರ ಆಸ್ತಿ ಕೊಂಡುಕೊಂಡರೆ ವಂಶ ನಿರ್ವಂಶ ಆಗುತ್ತದೆ ಎಂಬ ಭಯದಿಂದ ಶೂದ್ರರ್‍ಯಾರೂ ಮನೆಕೊಳ್ಳಲು ಮುಂದೆ ಬರುತ್ತಿರಲಿಲ್ಲ. 'ಈ ಬ್ರಾಹ್ಮಣ ಜ್ಯೋತಿಷ್ಯ ಹೇಳೋನು, ಮನೆ ಒಳಗೆ ಏನು ಮಾಯಮಂತ್ರ ಮಾಡಿಟ್ಟಿದ್ದಾನೋ ಏನು ಕತೆಯೋ' ಅಂತ ಬ್ರಾಹ್ಮಣರೂ ಹಿಂಜರಿಯುತ್ತಿದ್ದರು. ಹೀಗಾಗಿ ಮನೆಗೆ ಮಾರುಕಟ್ಟೆ ಬೆಲೆ ಸಿಗುವ ಲಕ್ಷಣಗಳೇ ಕಾಣುತ್ತಿರಲಿಲ್ಲ. ಅಲ್ಲದೆ ಬೇರೆ ಮನೆ ಅಂದರೆ ಜನರು ಬರುವುದಕ್ಕೆ ಸಮಯ ಹಿಡಿಯುತ್ತೆ, ಮನೆ ಬಡಾಯಿಸಲು ನೋಡಿದರು. ಸಾಕಷ್ಟು ಜಾಗ ಇರಲಿಲ್ಲ, ಪಕ್ಕದಲ್ಲೇ ಒಂದು ಖಾಲಿ ನಿವೇಶನ ಇದೆ ನಿಜ. ಅದು ಬೇರೆಯವರದ್ದು. ಮಾರಲು ಅದರ ಮಾಲೀಕ ಸಿದ್ಧನಿಲ್ಲ. ಇದೇ ತೊಳಲಾಟದಲ್ಲಿ ಹಲವು ದಿವಸಗಳನ್ನು ಶಾಸ್ತ್ರಿಗಳು ಕಳೆದರು.

ಒಂದು ದಿನ ರಾತ್ರಿ. ಶಾಸ್ತ್ರಿಗಳಿಗೆ ಅದು ಕಣ್ಣಿಗೆ ಕಟ್ಟಿದಂತೆ ಇದೆ. ನಾಗದೇವತೆ ಕನಸಿಗೆ ಬಂದು ತಾನು ಪಕ್ಕದ ನಿವೇಶನದಲ್ಲಿ ಉದ್ಭವಿಸುವುದಾಗಿ ಅಪ್ಪಣೆ ಕೊಡಿಸಿದಳಂತೆ. ಮುಂಜಾನೆಯೇ ಎದ್ದು, ಪ್ರಾತ: ವಿಧಿಗಳನ್ನೂ ಮುಗಿಸದೆ, ಹೋಗಿ ನೋಡಿದರಂತೆ. ಕನಸು ನೆನಸಾಗಿತ್ತು–ನಾಗದೇವತೆ ಉದ್ಭವಿಸಿದ್ದಳು!

ಇಂತಹ ಸುದ್ದಿ ಯಾವ ಮಾಯದಲ್ಲಿ ಹರಡುತ್ತದೆಯೋ ಏನೋ, ಉದ್ಭವ ದೇವತೆಯ ಪುಣ್ಯ ದರ್ಶನಕ್ಕೆ ಜನಸಾಗರವೇ ಹರಿದು ಬಂದಿತು. ನಿವೇಶನದ ಯಜಮಾನನೂ ಬಂದ. ನಾಗದೇವತೆಯನ್ನು ತಬ್ಬಿಕೊಂಡು ಭಕ್ತಿ ಪರವಶರಾಗಿ ಕಣ್ಣೀರು ಸುರಿಸುತ್ತಿದ್ದ ಶಾಸ್ತ್ರಿಗಳ ದಿವ್ಯ ಮೂರ್ತಿಯನ್ನು ಕಂಡ. ತನ್ನ ನಿವೇಶನದಿಂದ ಹೊರಕ್ಕೆ ಅದನ್ನು ತೆಗೆದು ಕೊಂಡು ಹೋಗಿ ಪ್ರತಿಷ್ಠಾಪಿಸಿ ಎನ್ನುವ ಮನಸ್ಸು ಒಂದು ಕ್ಷಣ ಆಯಿತಾದರೂ ಇದರಿಂದ ಕುಪಿತಗೊಂಡ ನಾಗದೇವತೆ ತನ್ನ ವಂಶ ನಿರ್ಮೂಲ ಮಾಡಿಯಾಳು ಎಂಬ ಆತಂಕದಿಂದ ಮೂಕನಾದ. ಜನರ ಸಂದಣಿ ತಡೆಯಲು ಪೋಲೀಸರು ಬಂದರು. ಅವರೂ ಮನುಷ್ಯರೇ ಅಲ್ಲವೆ. ದೇವತೆಯ ದರ್ಶನದಿಂದ ಪುಲಕಿತರಾದ ಅವರು ಜನಸಂದಣಿಯಲ್ಲಿ ಬೆರೆತು ಹೋದರು!

ಅದು ಉದ್ಭವ ದೇವತೆ ನೋಡಿ. ದೇವರಿಗೊಂದು ನೆರಳು ಮಾಡಲು ನಿರ್ಧರಿಸಿದರು. ದೇವರ ಕಾರ್ಯ ಅಲ್ಲವಾ, ದೇಣಿಗೆ ಹರಿದು ಬಂತು. ಸುಂದರ ದೇವಾಲಯ ಎದ್ದು ನಿಂತಿತು. ಶಾಸ್ತ್ರಿಗಳಿಗೇ ಅದರ ಉಸ್ತುವಾರಿ ನೀಡಲಾಯಿತು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೇ.

ಆಶ್ಚರ್ಯ ಅಂದರೆ ನಮಗೆ ಇರುವ ರೋಗ ನಮ್ಮ ಅರಿವಿಗೇ ಬಂದಿರುವುದಿಲ್ಲ, ಈ ಘಟನೆ ನಂತರ ಪ್ರಖ್ಯಾತ ಪುರುಷರಿಗೆಲ್ಲ ಸರ್ಪದೋಷ ಕಾಡುತ್ತಿದೆ ಎಂಬುದು ಪತ್ತೆ ಆಯಿತು. ಕ್ರಿಕೆಟ್‌ನ ಪ್ರಚಂಡ ಆಟಗಾರ ಸರ್ಪದೋಷದಿಂದಾಗಿ ರನ್ ಗಳಿಕೆಯಲ್ಲಿ ಕುಸಿತ ಕಂಡ. ಪ್ರಖ್ಯಾತ ಸಿನಿಮಾ ನಿರ್ಮಾಪಕ ತೆಗೆದ ಸಿನಿಮಾಗಳೆಲ್ಲ ತೋಪಾದುವು. ಕಾರಣ ಸರ್ಪದೋಷದಿಂದ ಅಂತ ತಿಳಿಯಿತು. ಜನಪ್ರಿಯ ರಾಜಕಾರಣಿ ಹಾಳು ಸರ್ಪದೋಷದಿಂದಾಗಿ ಜನರ ತೆಗಳಿಕೆಗೆ ಗುರಿಯಾದ. ಹೀಗೆ ಹಲವು ಕ್ಷೇತ್ರಗಳಲ್ಲಿನ ಜನ ಸರ್ಪ ದೋಷದ ನಿವಾರಣೆಗೆ ನಾಗದೇವತೆ ಬಳಿ ಬಂದು ಪರಿಹಾರ ಕಂಡುಕೊಂಡರು.

ಶಾಸ್ತ್ರಿಗಳು ಜನರ ದೋಷ ಪರಿಹಾರಕ್ಕೆಂದು ಹಲವು ನಗರಗಳಲ್ಲಿ ತಮ್ಮ ಶಾಖೆ ತೆರೆದಿದ್ದಾರೆ. ಒಂದೊಂದು ಶಾಖೆಯಲ್ಲೂ ಕನಿಷ್ಠ ಹತ್ತು ಉದ್ಯೋಗಿಗಳಿದ್ದಾರೆ. ಅವುಗಳ ಉಸ್ತುವಾರಿಗೆ ತಮ್ಮ ಪುತ್ರರನ್ನು ನೇಮಿಸಿದ್ದಾರೆ. ತನ್ನಿಂದಾಗಿ ಒಂದಷ್ಟು ಜನರ ಮನೆಯಲ್ಲಿ ದೀಪ ಹಚ್ಚುತ್ತಿದ್ದಾರಲ್ಲ ಅನ್ನುವ ನೆಮ್ಮದಿ ಶಾಸ್ತ್ರಿಗಳಿಗೆ.

ಸರ್ಕಾರ ಇಂತಹ ಉದ್ಯೋಗ ಖಾತರಿ ಯೋಜನೆ ಪ್ರಾರಂಭಿಸಿದರೆ ಹೇಗೆ....!?


'ಏನು ಶಾಸ್ತ್ರಿಗಳೆ ನಮಗೆ ಇದೆಲ್ಲ ಗೊತ್ತೇ ಇರಲಿಲ್ಲವಲ್ಲ' ಅಂದರೆ, 'ಇದು ನನ್ನ ಕನಸು ಕಣ್ರಿ' ಅನ್ನ ಬೇಕೆ ಆ ಶಾಸ್ತ್ರಿ.

–ಎಚ್.ಎಲ್. ಕೇಶವಮೂರ್ತಿ

ರೇಶ್ಮೆ ಬೇಗನೆ ಚೇತರಿಸಿಕೊಳ್ಳಲಿ

ಪತ್ರಿಕೆಯು ಸಂಚಿಕೆಯಿಂದ ಸಂಚಿಕೆಗೆ ಪ್ರಬುದ್ಧ ವಾಗುತ್ತಾ ನಡೆಯುತ್ತಿದೆ. ಪ್ರತಿಯೊಂದು ಲೇಖನಗಳಲ್ಲೂ ಪ್ರಖರವಾಗಿ ಗೋಚರಿಸುವ ಸಾಮಾಜಿಕ ಕಳಕಳಿ 'ಪತ್ರಿಕೆ'ಯ ಆರೋಗ್ಯಕ್ಕೆ ಸಾಕ್ಷಿ.

ಉಳಿದ ಟ್ಯಾಬಲಾಯ್ಡ್‌ಗಳಂತೆ ವೈಯಕ್ತಿಕ ಭಿನ್ನಾಭಿಪ್ರಾಯ, ದ್ವೇಷವನ್ನೇ ಆಧಾರವಾಗಿಟ್ಟುಕೊಂಡು ವರದಿಗಳನ್ನು ಪ್ರಕಟಪಡಿಸದು ನಮ್ಮ 'ಲಂಕೇಶ್.'




ಬಿಳಿದಾಳೆ ಈಶರವರು ಬರೆದ 'ರವಿ ಔಟ್...' ಎಂಬ ಲೇಖನದಲ್ಲಿನ ಲೇಖಕರ ಕಳಕಳಿ ಮೆಚ್ಚುವಂಥದ್ದು, ಉದ್ವೇಗವಿಲ್ಲದೆ, ಅನವಶ್ಯಕ ಆರೋಪಣೆಯಿಲ್ಲದೆ ಮಧುರವಾಗಿ ಓದಿಸಿಕೊಂಡು ಹೋಗುವ ಲೇಖನಗಳಿಂದಾಗಿ 'ಪತ್ರಿಕೆ' ಶ್ರೀಮಂತವಾಗಿದೆ.

-ಕೆ.ಎಸ್.ಎಸ್. ದಾವಣಗೆರೆ

ಈ ವಾರದ ಸಂಚಿಕೆಯಲ್ಲಿ 'ಬುದ್ಧ ನಕ್ಕಿದ್ದೂ-ಖರ್ಗೆ ಮುಕ್ಕಿದ್ದೂ...' ಎಂಬ ವರದಿ ಕಳ್ಳ ಖರ್ಗೆಯ ಮಳ್ಳತನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ದಲಿತರ ಆಶಾಕಿರಣ, ಕಾಂಗ್ರೆಸ್ಸಿನ ಕಣ್ಮಣಿ, ಅಭಿನವ ಅಂಬೇಡ್ಕರ್ ಹೀಗೆ ಏನೆಲ್ಲ ಹೆಸರುಗಳಿಗೆ ಖ್ಯಾತರಾಗಿರುವ ಮಲ್ಲಿಕಾರ್ಜುನ ಖರ್ಗೆ ಕೃಷ್ಣರ ಸಂಪುಟದಲ್ಲಿ ಗೃಹ ಖಾತೆ, ಧರ್ಮಸಿಂಗ್ ಸಂಪುಟದಲ್ಲಿ ಸಾರಿಗೆ-ನೀರಾವರಿ ಖಾತೆಯನ್ನು ಉಂಡು ಮುಗಿಸಿದರು. ಅದು ಸಾಲದು ಎಂಬಂತೆ ಅಳಿಯ ರಾಧಾಕೃಷ್ಣ-ಮಗ ಪ್ರಿಯಾಂಕ ಇಬ್ಬರನ್ನು ಹಗಲು ದರೋಡೆಗಿಳಿಸಿ ನಾಡನ್ನು ಕೊಳ್ಳೆ ಹೊಡೆದು ಜೇಬು ಭರ್ತಿಯಾಗಿಸಿಕೊಂಡರು. ಈಗ ಬೌದ್ಧ ವಿಹಾರಕ್ಕೆ ತಮ್ಮ ಹರಾಮಿ ದುಡ್ಡಿನ ರೂಪು ಹಚ್ಚಿ ಮೆರೆಯುತ್ತಿರುವುದು ನೋಡಿದರೆ ಇದು ನಾಚಿಕೆಗೇಡಿನ ಸಂಗತಿ ಎನಿಸುತ್ತೆ, ಈ ದಗಲ್ಬಾಜಿಯ ಮನುಷ್ಯನಿಗೆ ಕೊನೆ ಎಂದು? ಎಂಬ ಈ ಪ್ರಶ್ನೆಗೆ ಮೂಕವಿಸ್ಮಿತನಾಗಿ ಕುಳಿತಿರುವ ಆ ಬೌದ್ಧ ಸನ್ಯಾಸಿಯೇ ಉತ್ತರಿಸಲಿ...

-ಆರ್.ಕೆ. ಕೊರ್ತಿ, ಬಾದಾಮಿ



ರವೀಂದ್ರ, ರೇಶ್ಮೆಯವರ ಲೇಖನಗಳಿಂದ ಪ್ರಭಾವಿತನಾಗಿ ಬೆಳೆದ ನಾನು ಪಿಯುಸಿಯಿಂದ ಲಂಕೇಶ್ ಪತ್ರಿಕೆಯಲ್ಲಿ ಬರುವ ವಿಮರ್ಶೆ, ಪ್ರಗತಿದಾಯಕ ಲೇಖನಗಳನ್ನು ಓದಿ ನನ್ನದೇ ಆದ ಕೆಲವು ವಿಚಾರಗಳ ಜೊತೆ ಪ್ರಗತಿದಾಯಕ ಭಾವನೆಗಳನ್ನು ಅಳವಡಿಸಿಕೊಂಡಿರುವೆ. ರೇಶ್ಮೆಯವರು ಈಗ ಶಸ್ತ್ರಚಿಕಿತ್ಸೆ ಪಡೆದು ಆಸ್ಪತ್ರೆಯಲ್ಲಿರುವುದು ಗೊತ್ತಾಗಿ ಬೇಸರವಾಯಿತು. ಅವರು ಬೇಗನೆ ಚೇತರಿಸಿಕೊಳ್ಳಲಿ ಎಂದು ಆಶಿಸುತ್ತೇನೆ.

-ಸಬೀತಾ, ಜಮಖಂಡಿ

ಈ ವಾರ ನಮ್ಮ ಲಂಕೇಶ್ ಓದಿ ಕಣ್ಣಂಚಿಗೇ ನೀರು! ನಮ್ಮ ರೇಶ್ಮೆ ಮೇಲಿನ ಪ್ರೀತಿಯೇ ಅಂತಹದು! ರೇಶ್ಮೆ ಬೇಗನೆ ಗುಣಮುಖರಾಗಲಿ ಎಂಬುದು ನನ್ನ ಆಸೆ. ಅವರಂತಹ ಉತ್ಸಾಹಿ ಲೇಖಕರು ನಮಗೆ ಬೇಕು!

-ಜೆ.ಎ. ಖಲಂದರ್ ಅಜೀಜ್, ಜಾವಗಲ್

ಮೇ 24, 2006 ರ ಸಂಚಿಕೆಯ 'ಎಲ್ಲಿಯೂ ಮನೆಯಿಲ್ಲದವಳು' ಲೇಖನ ಬರಹಗಾರ್ತಿ ತಸ್ಲೀಮಾ ನಸ್ರೀನ್ ಅವರ ಅಂತರಂಗಕ್ಕೆ ಹಿಡಿದ ಕನ್ನಡಿಯಂತಿದೆ.

ಲೇಖಕಿಯಾಗಿ, ಹೆಣ್ಣಾಗಿ ತಸ್ಲೀಮಾ ಬಯಸುವ ಮನುಷ್ಯ ಸಹಜ liberty, ತನ್ನ ಮಿತಿಗಳ ಆಚೆಗೂ ತನ್ನನ್ನು ಸಕಾರಾತ್ಮಕವಾಗಿ ಗುರುತಿಸಿಕೊಳ್ಳುವಿಕೆ ಮುಂತಾದವು ಅವರ ಬರಹಗಳ under current ಗಳೂ ಆಗಿವೆ.



ಸಾಹಿತ್ಯ ರಚನೆಯಲ್ಲಿ ಆಕೆ ಹಿಡಿದ ನೇರ ಮತ್ತು ಪ್ರಾಮಾಣಿಕ ಹಾದಿಗಳು ಆಕೆಗೆ ದೊಡ್ಡ ಆಘಾತವನ್ನೇ ತಂದಿವೆ.

ಮೂಲಭೂತವಾದಿಗಳು ಆಕೆಯನ್ನು ಸಹಿಸದ ಪುರುಷವರ್ಗ ಹಾಗೂ ಸರ್ಕಾರ ಈ ಎಲ್ಲವುಗಳ ಕೆಂಗಣ್ಣಿಗೆ ಗುರಿಯಾಗಿ 'ಕೊಲೆ ಬೆದರಿಕೆ', 'ಟೀಕೆ', ಹಾಗೂ 'ನಿಷೇಧ' ಮೊದಲಾದವುಗಳ ನಡುವೆ ಲೇಖಕಿ ಬದುಕಬೇಕಾಗಿರುವುದು ನಿಜಕ್ಕೂ ದುರಂತ.

ಆದಾಗ್ಯೂ ಇದೀ ವ್ಯವಸ್ಥೆಗೆ ಸೆಡ್ಡು ಹೊಡೆದು ಬರೆಯುತ್ತಲೇ ಇದ್ದಾರೆ ಲೇಖಕಿ ತಸ್ಲೀಮಾ... ಬರೆಯುತ್ತಿರಲಿ. ಈ ಲೇಖಕಿಯ ವಿಶೇಷ- ಲೇಖನ ಪ್ರಕಟಿಸುವ ನಿಲುವು ತಳೆದ 'ಲಂಕೇಶ್' ಸಾಪ್ತಾಹಿಕ ಅಭಿನಂದನೀಯ.

-ಜಿ.ಎನ್. ಪ್ರಸನ್ನಕುಮಾರ್, ತುಮಕೂರು

ನಾನು ಹಲವೊಮ್ಮೆ ನನ್ನ ದುರಾದೃಷ್ಟವನ್ನೇ ಪ್ರೀತಿಸುತ್ತೇನೆ -ನಾರ್ಮ ಓ ಅಬ್ರೆಗೊ


ನನ್ನ ನಾರಾಯಣ ಮೇಷ್ಟ್ರು ಯಾರು ಗೊತ್ತಾ? ಕಲಾವಿದೆ ಎಂ.ಎನ್. ಲಕ್ಷ್ಮೀದೇವಿ ಇವಾರಲ್ಲ, ಅವರ ಯಜಮಾನರು. "ಯಾಕ್ರೀ ರಾಜ್‌ಕುಮಾರ್ ಮಕ್ಕಳನ್ನ ಹೊಡಿತೀರಾ" ಎಂದು ಲಕ್ಷ್ಮೀದೇವಿಯವರು ತಮ್ಮ ಯಜಮಾನರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು.

ಲಕ್ಷ್ಮೀದೇವಿಯವರು ತುಂಬಾ ಒಳ್ಳೆಯ ಕಲಾವಿದೆ ಮಾತ್ರ ಅಲ್ಲ, ಒಳ್ಳೆಯ ಹೃದಯವಿರುವ ಮಹಿಳೆ. ನಾವು ಅವರ ಮನೆಗೆ ಟ್ಯೂಷನ್‌ಗೆ ಹೋದಾಗ ರುಚಿಯಾದ ತಿಂಡಿ, ಬಿಸಿಬಿಸಿ ಕಾಫಿ ಕೊಡುತ್ತಿದ್ದರು. ನಿಜ ಹೇಳಬೇಕೆಂದರೆ ತಿಂಡಿ ಮತ್ತು ಕಾಫಿಗೋಸ್ಕರವೇ ನಾವು ಟ್ಯೂಷನ್ನಿಗೆ ಹೋಗುತ್ತಿದ್ದದ್ದೂ ಉಂಟು. ಆ ತಿಂಡಿ ಮತ್ತು ಕಾಫಿಯನ್ನು ನೆನೆಸಿಕೊಂಡಾಗ ಖುಷಿಯಾಗುತ್ತಿತ್ತು, ಆದರೆ ನಾರಾಯಣ ಮೇಷ್ಟ್ರನ್ನು ನೆನೆಸಿಕೊಂಡಾಗ ಸಂಕಟವಾಗುತ್ತಿತ್ತು! ಹೇಗೋ ಈ ಖುಷಿ ಮತ್ತು ಸಂಕಟವನ್ನು ಒಟ್ಟೊಟ್ಟಿಗೇ ಎಂಜಾಯ್ ಮಾಡುತ್ತಿದ್ದೆವು.

ನಾನು ಮತ್ತು ನನ್ನ ಕಸಿನ್ ಗೀತಾ ಚೆನ್ನೈನ ಬಿಸಿಲಲ್ಲಿ ನಡೆದುಕೊಂಡೇ ಟ್ಯೂಷನ್ನಿಗೆ ಹೋಗುತ್ತಿದ್ದೆವು. ನಮಗೆ ಕಾರಿದ್ದರೂ, ನಾನು ಸ್ಟಾರ್ ಮಗ ಆಗಿದ್ದರೂ ನನ್ನ ಅಪ್ಪಾಜಿ ಮತ್ತು ಅಮ್ಮ ನನಗೆ ಯಾವುದೇ ರೀತಿಯ ವಿಶೇಷ ಸೌಲಭ್ಯ ನೀಡುತ್ತಿರಲಿಲ್ಲ, ಎಲ್ಲರಂತೆ, ಜನಸಾಮಾನ್ಯರಂತೆ ನಾನು ಬೆಳೆಯಬೇಕು ಎಂಬುದು ಅವರ ಉದ್ದೇಶವಾಗಿತ್ತು. ಹೀಗಾಗಿ ಬಾಲ್ಯದಲ್ಲೇ ನಾನು ಜೀವನದ ಹಲವು ಮಜಲುಗಳನ್ನು ಅನುಭವಿಸಲು ಸಾಧ್ಯವಾಯಿತು.

ನಾರಾಯಣ ಮೇಷ್ಟ್ರ ಬಗ್ಗೆ ಇನ್ನೊಂದು ಪುಟ್ಟ ಜೋಕನ್ನು ನಾನಿಲ್ಲಿ ಹೇಳಲೇಬೇಕು. ಜೋಕರ್ ಶ್ಯಾಮ್ ಎಂಬ ಹಾಸ್ಯ ನಟರ ಬಗ್ಗೆ ನಿಮ್ಮಲ್ಲಿ ಹಲವರಿಗೆ ನೆನಪಿರಬೇಕು. ನಮ್ಮ ಕುಟುಂಬಕ್ಕೆ ತುಂಬ ಹತ್ತಿರವಾಗಿದ್ದ ಅವರು ಆಗಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ಒಂದು ದಿನ ಹಾಗೆ ಬಂದವರೇ "ನಾರಾಯಣ ಮೇಷ್ಟ್ರು ಸತ್ತೋದ್ರು" ಅಂತ ಹೇಳಿಬಿಟ್ರು. ನನಗೆ ಮತ್ತು ಗೀತಾಗೆ ತಡೆದುಕೊಳ್ಳಲಾರದಷ್ಟು ಸಂತೋಷವಾಯಿತು. ನಾವು ಇವತ್ತು ಪಾಯಸ ಮಾಡಲೇಬೇಕು ಎಂದು ಮಾತನಾಡುತ್ತಿರುವಾಗ ಯಾರೋ ಹಿಂದಿನಿಂದ ಕರೆದಹಾಗಾಯಿತು. ಹಿಂತಿರುಗಿ ನೋಡಿದ ನನಗೆ ಶಾಕ್ ಆಯಿತು. ನಾರಾಯಣ ಮೇಷ್ಟ್ರು ಜೀವಂತವಾಗಿ ಅಲ್ಲೇ ನಮ್ಮ ಎದುರು ನಿಂತಿದ್ದರು. "ಏನ್ಮಾತಾಡ್ತಿದ್ದೀರೋ, ಹೊಡೀತೀನ್ ನೋಡಿ ನಿಮ್ಗೆ" ಎಂದು ಗದರಿಸಿಬಿಟ್ಟರು. ಅಲ್ಲಿಂದ ಓಟ ಕಿತ್ತ ನಮಗೆ ಅವತ್ತು ಹೇಗೆ ಎಸ್ಕೇಪ್ ಆದೆವು ಎಂಬುದೇ ಗೊತ್ತಾಗಲಿಲ್ಲ, ಅಷ್ಟು ಜೋರಾಗಿ ಓಡಿದ್ದೆವು. ಜೋಕರ್ ಶ್ಯಾಮ್ ರವರು ನಮ್ಮ ಪರಿಸ್ಥಿತಿಯನ್ನು ನೋಡಿ ಹೊಟ್ಟೆ ತುಂಬ ನಕ್ಕರು. ಜೋಕರ್ ಶ್ಯಾಮ್ ಸಿನಿಮಾದಲ್ಲಿ ಮಾತ್ರವಲ್ಲ ನಿಜ ಜೀವನದಲ್ಲೂ ಹೀಗೇ ಹಲವಾರು ಬಾರಿ ತಮಾಷೆ ಮಾಡಿ ನಮ್ಮನ್ನೆಲ್ಲ ನಗಿಸಿದ್ದುಂಟು.

ನಮ್ಮ ಮನೆಯಲ್ಲಿ ಶಿವಾಜಿ ಎಂಬ ಒಬ್ಬ ಮ್ಯಾನೇಜರ್ ಇದ್ದರು. ಅವರನ್ನು ನಾವು ಪ್ರೀತಿಯಿಂದ ದಾದಾ ಎಂದು ಕರೆಯುತ್ತಿದ್ದೆವು. ನನ್ನ ಅಪ್ಪಾಜಿ ಮನೆಯಲ್ಲಿದ್ದಾಗ ತಿಂಗಳಿಗೊಂದು ದಿನ ಆತ ಚಿಕನ್ ಬಿರಿಯಾನಿ ಮಾಡುತ್ತಿದ್ದರು. ಅದು ಸಖತ್ ರುಚಿಯಾಗಿರುತ್ತಿತ್ತು. ನೀವು ನಂಬೋಲ್ಲ, ಆ ಬಿರಿಯಾನಿ ತಿನ್ನೋದಿಕ್ಕೆ ನನ್ನ ಕಸಿನ್ಸ್ ಅಲ್ಲದೆ ಸುಮಾರು 50ಕ್ಕೂ ಹೆಚ್ಚು ಜನ ಸೇರುತ್ತಿದ್ದರು. ಅದೆಷ್ಟೋ ಬಾರಿ ನಮ್ಮ ಹಿತೈಷಿಗಳು ಕೂಡಾ ಇಂತಹ ಸಂತೋಷಕೂಟಗಳಲ್ಲಿ ಭಾಗವಹಿಸುತ್ತಿದ್ದರು. ನನಗೆ ನೆನಪಿರುವ ಪ್ರಕಾರ ಸನಿಮಹಾದೇವಪ್ಪ ಜಯಮ್ಮ, ಕುಳ್ಳಿ ಜಯಮ್ಮ, ಅವರ ಬ್ರದರ್ಸ್ ಮಲ್ಲೇಶ್ ಮತ್ತು ನಟರಾಜ್, ಶ್ಯಾಂ, ಭರತ್ ಮೊದಲಾದವರೆಲ್ಲ ಹಾಜರಿರುತ್ತಿದ್ದರು. ಈ ಭರತ್ ಎಂಬುವವರು ಶಿವಾಜಿಯವರ ಮಗ. ಅವರೂ ನಮ್ಮ ಕಂಪನಿಯಲ್ಲಿ ಮುಂದೆ ಮ್ಯಾನೇಜರ್ ಆದರು. ಆ ಬಿರಿಯಾನಿ ಸಂತೋಷಕೂಟಗಳು ಎಷ್ಟು ಮಜವಾಗಿರುತ್ತಿದ್ದವೆಂದರೆ ಅದನ್ನು ನಾನು ಪದಗಳಲ್ಲಿ ವಿವರಿಸಲು ಆಗುವುದಿಲ್ಲ, ನನಗಂತೂ ಒಂದು ಕಡೆ ಬಿರಿಯಾನಿ ತಿನ್ನುವ ಸಂತೋಷ, ಇನ್ನೊಂದು ಕಡೆ ಮನೆಯವರು, ಗೆಳೆಯರು ಒಟ್ಟು ಸೇರುತ್ತೇವಲ್ಲಾ ಅಂತ ಮತ್ತಷ್ಟು ಸಂತೋಷ.




ನಮ್ಮ ಮನೆಯ ರಸ್ತೆಯ ಕೊನೆಯಲ್ಲಿ ಎಸ್.ಎ. ಅಶೋಕನ್ ಎಂಬ ಕಲಾವಿದರು ವಾಸಿಸುತ್ತಿದ್ದರು. ಅವರು ತಮಿಳಿನಲ್ಲಿ ವಿಲನ್ ಆಗಿ ದೊಡ್ಡ ಹೆಸರು ಮಾಡಿದ್ದರು. ಅವರ ಮಗನ ಹೆಸರು ವಿನ್ಸೆಂಟ್. ಈ ವಿನ್ಸೆಂಟ್ ನನ್ನ ತಮ್ಮ ರಾಘುವಿನ ಕ್ಲಾಸ್‌ಮೇಟ್ ಆಗಿದ್ದ.

ಅಶೋಕನ್ ಅವರಿಗೆ ನಮ್ಮ ಅಪ್ಪಾಜಿ ಥರ ರಾತ್ರಿ ಹೊತ್ತು ವಾಕ್ ಮಾಡುವ ಅಭ್ಯಾಸವಿತ್ತಾದ್ದರಿಂದ ಅವರಿಬ್ಬರೂ ಕತ್ತಲಾದ ಮೇಲೆ ನಮ್ಮ ರಸ್ತೆಯಲ್ಲಿ ಒಟ್ಟಿಗೇ ವಾಕ್ ಮಾಡುತ್ತಿದ್ದರು. ಅವರಿಬ್ಬರದ್ದು ಎಂತಹ ಒಳ್ಳೆ ಕಂಪೆನಿಯಾಗಿತ್ತೆಂದರೆ ಹಲವು ಬಾರಿ ಅಪ್ಪಾಜಿಯವರು ಅಶೋಕನ್ ಅವರನ್ನು ಅವರ ಮನೆತನಕ ಹೋಗಿ ಬಿಟ್ಟು ಬರುತ್ತಿದ್ದರು. ಇನ್ನು ಕೆಲವೊಮ್ಮೆ ಅಪ್ಪಾಜಿಯವನ್ನು ಅಶೋಕನ್‌ರವರು ನಮ್ಮ ಮನೆತನಕ ಬಿಡುತ್ತಿದ್ದರು. ಇವರಿಬ್ಬರು ಎಷ್ಟು ಕ್ಲೋಸ್ ಫ್ರೆಂಡ್ಸ್ ಆಗಿದ್ದರೆಂದರೆ ಅವರನ್ನು ಬಿಡಲು ಇವರು ಹೋಗುವುದು, ಇವರನ್ನು ಬಿಡಲು ಅವರು ಬರುವುದು.... ಹೀಗೆ ಕಾಮಿಡಿ ನಡೆಯುತ್ತಾ ಇರುತ್ತಿತ್ತು, ನಾವೆಲ್ಲಾ ಮಕ್ಕಳು ಈ ದೃಶ್ಯವನ್ನು ನೋಡುತ್ತಾ ಎಂಜಾಯ್ ಮಾಡುತ್ತಿದ್ದೆವು.

ಮೊದಲೇ ಹೇಳಿದಂತೆ ಅಥ್ಲೆಟಿಕ್ಸ್‌ನಲ್ಲಿ ನನಗೆ ತುಂಬಾ ಆಸಕ್ತಿ, ನಾನು ನಾಲ್ಕನೇ ತರಗತಿಯಲ್ಲಿದ್ದಾಗ ಒಮ್ಮೆ ಅಂತರಶಾಲಾ ಸಬ್ ಜ್ಯೂನಿಯರ್

> **ನಮ್ಮ ಮನೆಯಲ್ಲಿ ಶಿಸ್ತಿನ ವಿಷಯ ಯಾವುದೆಂದರೆ ಎಲ್ಲರೂ ಒಟ್ಟಿಗೆ ಊಟಕ್ಕೆ ಕೂರಬೇಕಾಗಿದ್ದದ್ದು, ನಾವೆಲ್ಲರೂ ನೆಲದ ಮೇಲೆ ಕೂತು ಊಟ ಮಾಡುತ್ತಿದ್ದೆವು. ನಮ್ಮ ಮನೆಯಲ್ಲಿ ಡೈನಿಂಗ್ ಟೇಬಲ್ ಎಂಬುದೇ ಇರಲಿಲ್ಲ. ನಮ್ಮ ನಡುವೆ ಬೇಧ-ಭಾವ ಇರಬಾರದು ಎಂಬ ಕಾರಣಕ್ಕೋಸ್ಕರ ಎಲ್ಲರೂ ಸಾಲಾಗಿ ನೆಲದ ಮೇಲೆ ಮಲಗುತ್ತಿದ್ದೆವು.**



ನೆಲದಮೇಲೆ ಊಟ, ಸಾಲಾಗಿ ನಿದ್ರೆ!

ಲೆವೆಲ್‌ನ ಸ್ಪರ್ಧೆ ನಡೆಯಿತು. ನನಗಿನ್ನೂ ನೆನಪಿದೆ. ಈ ಸ್ಪರ್ಧೆ ನಡೆದದ್ದು ನಮ್ಮ ಶಾಲೆಯಲ್ಲಲ್ಲ, ಬದಲಾಗಿ ನಮ್ಮ ಶಾಲೆಯ ಪಕ್ಕದಲ್ಲಿದ್ದ ವಿದ್ಯೋದಯ ಎಂಬ ಬಾಲಕಿಯರ ಶಾಲೆಯಲ್ಲಿ. ಆವತ್ತು ಆ ಶಾಲೆಗೆ ಹೋಗುವಾಗ ನನಗಾದ ಸಂತೋಷ ಮತ್ತು ಮುಜುಗರ, ಎರಡೂ ಈಗ ಸ್ವಲ್ಪ ಸ್ವಲ್ಪ ನೆನಪಿನಲ್ಲಿದೆ.

ಎಂದಿನಂತ ನನ್ನ ಅವ್ವ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಅವತ್ತು ನನಗಾಗಿ ಸ್ವಲ್ಪ ಹೆಚ್ಚೇ ಮೂಸಂಬಿ ಜ್ಯೂಸನ್ನು ತಯಾರಿಸಿಕೊಂಡು ಬಂದಿದ್ದರು. ನಾನು ಆಟ ಆಡುತ್ತಿದ್ದಾಗ ಅಲ್ಲೇ ಪಕ್ಕದಲ್ಲಿದ್ದ ಗೋಡೆಯ ಬಳಿ ನನ್ನವ್ವ ಸಪ್ಪೆ ಮೋರೆ ಹಾಕಿಕೊಂಡು ಕುಳಿತದ್ದು ನನಗೆ ನೆನಪಿದೆ. ಆದರೆ ನಾನು ಕ್ವಾಲಿಫಿಕೇಷನ್ ರೌಂಡ್ಸ್‌ನಲ್ಲಿ ಗೆದ್ದ ತಕ್ಷಣ ನನ್ನವ್ವ ಓಡಿಬಂದು ನನ್ನ ಮುಖದ ಮೇಲಿದ್ದ ಬೆವರನ್ನು ತಮ್ಮ ಸೀರೆಯ ತುದಿಯಿಂದ ಒರೆಸಿದ್ದರು. ಹಾಗೆ ಮುಖ ಒರೆಸಿದ ನಂತರ ಪ್ರೀತಿಯಿಂದ ಜ್ಯೂಸನ್ನು ಕುಡಿಸಿದ್ದರು. ಕೊನೆಗೆ ಆ ಸ್ಪೋರ್ಟ್ಸ್ ಟೂರ್ನಮೆಂಟ್‌ನ ಸಬ್ ಜ್ಯೂನಿಯರ್ ಲೆವೆಲ್‌ನಲ್ಲಿ ನಾನು ಚಾಂಪಿಯನ್ ಆದೆ. ಅದನ್ನು ನೋಡಿ ನನ್ನ ಅವ್ವನಿಗೆ ಖುಷಿಯೋ ಖುಷಿ. ಅಂದು ಅವ್ವನ ಕಣ್ಣುಗಳಲ್ಲಿ ಅಷ್ಟೊಂದು ಕಾಂತಿಯನ್ನು ಅದಕ್ಕಿಂತ ಮೊದಲು ನಾನು ಎಂದೂ ಕಂಡಿರಲಿಲ್ಲ.

ಈ ತರಹ ಬಾಲ್ಯದ ಕೆಲವು ತುಂಟಾಟಗಳು, ಕೆಲವು ಸಾಧನೆಗಳು, ಕೆಲವು ಗಲಾಟೆಗಳು ನನಗೆ ಸ್ವಲ್ಪ ಸ್ವಲ್ಪ ಜ್ಞಾಪಕಕ್ಕೆ ಬರುತ್ತಿವೆ. ಆದರೆ ಎಲ್ಲ ವಿಷಯಗಳೂ ನನಗೆ ಸ್ಪಷ್ಟವಾಗಿ ನೆನಪಿಲ್ಲ, ಉದಾಹರಣೆಗೆ ನಾನು ಚಿಕ್ಕವನಾಗಿದ್ದಾಗ 'ಧೂಮಕೇತು' ಎಂಬ ಚಿತ್ರದಲ್ಲಿ ನಟಿಸಿದ್ದೆನಂತೆ. ಆದರೆ ಆ ಚಿತ್ರದ ಸೆಟ್‌ಗೆ ನಾನು ಹೋಗಿದ್ದಾಗಲಿ, ಕ್ಯಾಮೆರಾ ಎದುರಿಸಿದ್ದಾಗಲಿ ನನಗೆ ಒಂದಿಷ್ಟೂ ನೆನಪಿಲ್ಲ.

ನಾನು ಮತ್ತು ನನ್ನ ಎಲ್ಲಾ ಕಸಿನ್ಸ್ ಒಂದೇ ಹಾಲಿನಲ್ಲಿ ಮಲಗುತ್ತಿದ್ದೆವು. ನಮ್ಮ ನಡುವೆ ಬೇಧ-ಭಾವ ಇರಬಾರದು ಎಂಬ ಕಾರಣಕ್ಕೋಸ್ಕರ ಎಲ್ಲರೂ ಸಾಲಾಗಿ ನೆಲದಲ್ಲಿ ಮಲಗುತ್ತಿದ್ದೆವು. ಅಷ್ಟೂ ಜನ ಮಲಗುವಂತಹ ಒಂದು ದೊಡ್ಡ ಹಾಲ್ ನಮ್ಮ ಮನೆಯಲ್ಲಿತ್ತು, ಅದನ್ನು ನಾವು ಆಫೀಸ್ ರೂಮು ಎಂತಲೂ ಕರೆಯುತ್ತಿದ್ದೆವು. ಈಗಿನಂತೆ ನಾವು ಒಬ್ಬೊಬ್ಬರು ಒಂದೊಂದು ಬೆಡ್ ರೂಮ್‌ನಲ್ಲಿ ಮಲಗಿದ್ದೇ ಇಲ್ಲ.

ನಮ್ಮ ಮನೆಯಲ್ಲಿ ಇನ್ನೊಂದು ಶಿಸ್ತಿನ ವಿಷಯ ಯಾವುದೆಂದರೆ ಎಲ್ಲರೂ ಒಟ್ಟಿಗೆ ಊಟಕ್ಕೆ ಕೂರಬೇಕಾಗಿದ್ದದ್ದು, ಈ ವಿಷಯದಲ್ಲೂ ಅಷ್ಟೇ, ನಾವೆಲ್ಲರೂ ನೆಲದ ಮೇಲೆ ಕೂತು ಊಟ ಮಾಡುತ್ತಿದ್ದೆವು. ನಮ್ಮ ಮನೆಯಲ್ಲಿ ಡೈನಿಂಗ್ ಟೇಬಲ್ ಎಂಬುದೇ ಇರಲಿಲ್ಲ, ಅಷ್ಟೇ ಅಲ್ಲ ಅಷ್ಟೊಂದು ಜನಕ್ಕೆ ಬೇಕಾದಂತಹ ದೊಡ್ಡ ಟೇಬಲ್ ತರುವುದಾದರು ಎಲ್ಲಿಂದ?

ನಾನು ಬೆಳಿಗ್ಗೆ ಬೇಗ ಏಳುತ್ತಿದ್ದುದರಿಂದ ಮತ್ತು ದಿನವಿಡೀ ಆಟವಾಡುತ್ತಿದ್ದುದರಿಂದ ರಾತ್ರಿ ಊಟದ ಹೊತ್ತಿಗೆ ಬಹಳ ಸುಸ್ತಾಗಿಬಿಡುತ್ತಿದ್ದೆ. ಹೀಗಾಗಿ ನಾನು ಊಟಕ್ಕೆ ಕುಳಿತುಕೊಂಡ ಕೂಡಲೇ ನನ್ನನ್ನು ನಿದ್ರಾದೇವತೆ ಆವರಿಸಿಕೊಂಡುಬಿಡುತ್ತಿದ್ದಳು. ಹಾಗೆ ನಾನು ಒಮ್ಮೆ ನಿದ್ರೆಗೆ ಜಾರಿದ ಮೇಲೆ ಯಾರಿಂದಲೂ ನನ್ನನ್ನು ಎಚ್ಚರಗೊಳಿಸಲು ಸಾಧ್ಯವಾಗುತ್ತಿರಲಿಲ್ಲ, ಹೀಗಾಗಿ ನಾನು ಬರುತ್ತಿದ್ದಂತೆ "ಅಯ್ಯಯ್ಯೋ ಶಿವಣ್ಣ ಬಂದ.... ಊಟಕ್ಕೆ ಕೂತ್ಕೊಳ್ಳೋ.... ಬೇಗ ಊಟ ಹಾಕ್ಬಿಡ್ರೋ...." ಎಂದು ಎಲ್ಲರೂ ಚುಡಾಯಿಸುತ್ತಿದ್ದರು. ಊಟಕ್ಕೆ ಲೇಟ್ ಆದರೆ ನಾನು ಅಲ್ಲೇ ಮಲಗಿಬಿಡುತ್ತೇನೆಂಬ ಭಯ ನಮ್ಮ ಮನೆಯವರಿಗಿತ್ತು, ನಾನು ಉಪವಾಸದಿಂದ ಮಲಗುವುದೂ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಆ ಕಾರಣದಿಂದಲೇ ನಾನು ಬಂದ ಕೂಡಲೇ ಎಲ್ಲರಿಗೂ ಕೂರಿಸಿ ಊಟಕ್ಕೆ ಎಲೆ ಹಾಕಿ, ಬೇಗಬೇಗ ಊಟ ಬಡಿಸುತ್ತಿದ್ದರು.

(ಮುಂದಿನ ವಾರಕ್ಕೆ....)

ಶಾಟ್ ಕಟ್



'ಕಂಡವರ ಹೆಣ್‌ಮಕ್ಳು ಬಿಚ್ಚಲಿ'

"ನನ್ನ ಹೆಣ್ಣು ಮಕ್ಕಳನ್ನು ಖಂಡಿತಾ ಚಿತ್ರರಂಗಕ್ಕೆ ತರುವುದಿಲ್ಲ'' ಎಂದು 'ಶೀಲವಂತ' ಶೈಲೇಂದ್ರ ಬಾಬು ಎಂಬ ನಿರ್ಮಾಪಕ ಇಂಗ್ಲಿಷ್ ಪತ್ರಿಕೆಯೊಂದರ ಮುಂದೆ ಒದರಿದ್ದಾನೆ. ಸದ್ಯದಲ್ಲೇ ಬರಲಿರುವ ಈ ನಿರ್ಮಾಪಕನ 'ಗಂಡ ಹೆಂಡತಿ' ಎಂಬ ಚಿತ್ರದ ಸ್ಟಿಲ್‌ಗಳನ್ನು ನೋಡಿದರೆ ವಾಕರಿಕೆಯಾಗಿ ವಾಂತಿ ಬರುವುದು ಖಂಡಿತ. ಮಹೇಶ್ ಭಟ್ ಟೀಮ್‌ನ 'ಮರ್ಡರ್' ಚಿತ್ರವನ್ನು ಪಕ್ಕಾ ಕಾಪಿ ಮಾಡುತ್ತಿರುವ ಈ 'ಶ್ಶೈಲೇಂದ್ರ', ಸಂಜನಾ ಎಂಬ ಪೆದ್ದಿಯನ್ನು 'ಎ' ಚಿತ್ರಗಳ ಸ್ಟಿಲ್‌ಗಳಲ್ಲಿ 'ಮಿಂಚಿ'ಸುತ್ತಿದ್ದಾನೆ. ನಿರ್ಮಾಪಕನಿಗೆ ತಕ್ಕಂತಿರುವ ರವಿ ಶ್ರೀವತ್ಸ ಎಂಬ ನಾನ್‌ಸೆನ್ಸ್‌ಫೆಲೋ ಸಹ ರೀಲು ಸುತ್ತುತ್ತಿದೆ. ಕಂಡವರ ಹೆಣ್ಣು ಮಕ್ಕಳನ್ನು ಬಿಚ್ಚಿಸಿ ಕಾಸು ಎತ್ತುವ ಇಂತಹ ಅಭಿರುಚಿಹೀನರು ತಮ್ಮ ಮಕ್ಕಳನ್ನು ಆ ಸ್ಟಿಲ್‌ಗಳಲ್ಲಿ ಕಲ್ಪಿಸಿಕೊಳ್ಳಲಾರರು ಸಹ.

'ಗಂಡ ಹೆಂಡತಿ'ಯ ಸ್ಟಿಲ್‌ಗಳನ್ನು ನೋಡಿದರೆ ಮತ್ತೊಂದು 'ಭಾ-ರತಿ' ಚಿತ್ರ 'ಓಂಗ್ ಬಂದ್ ಹಂಗ್' ಹೋಗುವಂತೆ ಕಾಣುತ್ತಿದೆ.

ಮೂರು ಜಡೆಗಳ ಮಧ್ಯೆ ಸುರೇಶ್ ಸುಸ್ತೋ ಸುಸ್ತು!



ಎರಡು ಜಡೆ ಸೇರಿದರೆ ಆಪತ್ತು ಎನ್ನುವಾಗ ಇಲ್ಲಿ ಮೂರು ಜಡೆಗಳ ಮಿಲನವಾಗಿದೆ; ಆದರೂ 'ತನನಂ ತನನಂ' ಇಂಪಾಗಿಯೇ ಸಾಗಿದೆ.

ನಮ್ಮ ಟೀಬ ಮೇಡಂ ಕವಿತಾ ಲಂಕೇಶ್, ರಮ್ಯ, ರಕ್ಷಿತಾರ ಮಧ್ಯೆ ನಿರ್ಮಾಪಕ ಎಂ.ಎನ್. ಸುರೇಶ್ ಸುಸ್ತಾದಂತೆ ಕಂಡರೂ ಈಗಲೇ ಗೆಲುವಿನ ನಗೆ ಬೀರುತ್ತಿದ್ದಾರೆ.

'ನನ್ನ ಪಾತ್ರಕ್ಕೇ ಹೆಚ್ಚು ಕವರೇಜ್ ಇದೆ' ಎನ್ನುವ ರಮ್ಯ, ರಕ್ಷಿತಾರ ಒಣಜಗಳ, ಒಳಜಗಳಗಳನ್ನು ಬಗೆಹರಿಸುವ ತಲೆನೋವು ಎದುರಿಸಿ ಯಶಸ್ವಿಯಾಗುತ್ತಿರುವ ಸುರೇಶ್, ಇನ್ನೊಂದು ಕಡೆ ಕವಿತಾ ಮೇಡಂರ ರಾಜಿರಹಿತ ಸೃಜನಶೀಲ ಚಿತ್ರೀಕರಣದ ಬೇಡಿಕೆಗಳನ್ನು ಹೇಗೋ ಅಡ್ಜಸ್ಟ್ ಮಾಡಿ ಪೂರೈಸುತ್ತಲೂ ಇದ್ದಾರೆ.

'ಸೆವೆನ್ ಓ ಕ್ಲಾಕ್' ಸಿನಿಮಾದಿಂದ ಭರ್ಜರಿ ಬ್ರೇಕ್ ಹಾಕಿಸಿಕೊಂಡ ಸುರೇಶ್, ಅದಕ್ಕೂ ಮೊದಲು ಒಂದೇ [illegible] 'ಚಪ್ಪಾಳೆ' ಹೊಡೆಯಲು ಹೋಗಿ ಗಾಳಿಯಲ್ಲಿ ಕೈಯಾಡಿಸುತ್ತಿದ್ದರು...

ಈಗ ಮೂರು ಜಡೆಗಳ ಮಧ್ಯೆಯೂ ಸುರೇಶ್ ಭರವಸೆಯಿಂದಲೇ ಚಿತ್ರೀಕರಣ ಮುಗಿಸುತ್ತಿದ್ದಾರೆ.



ಅಂಬಿ-ರವಿ ಸಿಂಪಲ್ ಬರ್ತ್ ಡೇ!

ಡಾ. ರಾಜ್ ನಿಧನದಿಂದಾಗಿ ಇಡೀ ಗಾಂಧಿನಗರದಲ್ಲಿ ಕವಿದಿದ್ದ ಸೂತಕದ ಕಳೆ ಇನ್ನೂ ಮಾಯವಾಗಿಲ್ಲ. ಆದ್ದರಿಂದಲೇ ಸಾದಿದ್ದು 29 ಮತ್ತು 30ರಂದು ಅಂಬರೀಶ್ ಮತ್ತು ರವಿಚಂದ್ರನ್ ತಮ್ಮ ಹುಟ್ಟು ಹಬ್ಬಗಳನ್ನು ಅತ್ಯಂತ ಸರಳವಾಗಿ ಆಚರಿಸಲು ನಿರ್ಧರಿಸಿದ್ದಾರೆ. ಅಂಬರೀಶ್ ಸ್ಟಾರ್ ಆಗಿ ಜನಮನ ಗೆದ್ದ ನಂತರ ತಮ್ಮ ಹುಟ್ಟುಹಬ್ಬವನ್ನು ಪ್ರತಿ ವರ್ಷ ಅತ್ಯಂತ ವಿಜೃಂಭಣೆಯಿಂದ ತಮ್ಮ ಆತ್ಮೀಯರ ಜೊತೆ ಆಚರಿಸಿಕೊಂಡು ಬಂದವರು. ವೈಭವ ಮತ್ತು ಪಂಚತಾರಾ ಪಾರ್ಟಿ ಜೀವನಕ್ಕೆ ಹೆಸರಾದ ಅಂಬರೀಶ್ ಇದೇ ಮೊದಲ ಬಾರಿಗೆ ಸರಳವಾಗಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದಾರೆ ಎಂದರೆ ಇವರು ನಿಜವಾಗಿಯೂ 'ಒಡಹುಟ್ಟಿದವರು' ಎನ್ನಬಹುದೇ?



ಸಾಹಸಸಿಂಹನಿಗೆ ಹುಷಾರಿಲ್ಲ!

ಮೊನ್ನೆ, ಮೊನ್ನೆ ಕುಕ್ಕೆ ಸುಬ್ರಮಣ್ಯಕ್ಕೆ ಹೋಗಿ ಸರ್ಪದೋಷ ನಿವಾರಣಾ ಪೂಜೆ ಮಾಡಿಸಿಕೊಂಡು ಬಂದಿರುವ ವಿಷ್ಣುವರ್ಧನ್ ಈಗ ಅನಾರೋಗ್ಯಪೀಡಿತರಾಗಿದ್ದಾರೆ . ಆದರೆ ಈ ಸುದ್ದಿ ದೃಢೀಕರಿಸಲು ಎಲ್ಲರೂ ಹಿಂದೆ ಮುಂದೆ ನೋಡುತ್ತಿರುವಾಗ 'ಸಿರಿವಂತ' ಚಿತ್ರ ತಂಡದವರು ಬಾಯಿ ಬಿಟ್ಟಿದ್ದಾರೆ. ವಿಷ್ಣು ಅನಾರೋಗ್ಯದಿಂದಾಗಿಯೇ 'ಸಿರಿವಂತ'ದ ಚಿತ್ರೀಕರಣ ಸದ್ಯಕ್ಕೆ ನಿಂತು ಹೋಗಿದೆ. ಆದರೆ ವಿಷ್ಣು ಆರೋಗ್ಯಕ್ಕೆ ಏನಾಗಿದೆ ಎಂಬುದನ್ನು ಮಾತ್ರ ಯಾರೂ ಬಾಯಿ ಬಿಡುತ್ತಿಲ್ಲ. ಕೆಲವರು 'ಅವರಿಗೆ ಮತ್ತೆ ಕಿವಿ ನೋವು' ಎನ್ನುತ್ತಿದ್ದಾರೆ. ಇನ್ನೂ ಕೆಲವರು 'ಸ್ವಲ್ಪ ಜ್ವರ, ಬೇರೇನೂ ಇಲ್ಲ' ಎಂದು ಸಮಾಧಾನದಿಂದ ಹೇಳುತ್ತಿದ್ದಾರೆ. ಆದರೆ ವಿಷ್ಣು ಅಭಿಮಾನಿಗಳು ಈ ಸುದ್ದಿ ಕೇಳಿ ಚಿಂತಾಕ್ರಾಂತರಾಗಿದ್ದಾರೆ. "ನಮ್ಮ ಗುರುವಿನ ಆರೋಗ್ಯ ಕೆಟ್ಟು ಚಿತ್ರೀಕರಣ ಮುಂದೆ ಹೋಗಿರುವುದು ಅವರ ಮೂವತ್ತು ವರ್ಷದ ವೃತ್ತಿ ಜೀವನದಲ್ಲಿ ಇದೇ ಮೊದಲ ಬಾರಿ" ಎಂದು ಹೇಳುತ್ತಿದ್ದಾರೆ. ಏನೇ ಇರಲಿ ಸಾಹಸ ಸಿಂಹ ವಿಷ್ಣುವರ್ಧನ್ ಬೇಗ ಚೇತರಿಸಿಕೊಂಡು ಮತ್ತೆ ಎಂದಿನಂತೆ ಗರ್ಜಿಸಲಿ ಎಂಬುದೇ ನಮ್ಮದೂ ಆಶಯ.



ಲೋಕಾಯುಕ್ತರ 'ಲಂಚಾವತಾರ'!

ಇದು ಬಿಸಿ ಬಿಸಿ ಸುದ್ದಿ.

ಲೋಕಾಯುಕ್ತ ವೆಂಕಟಾಚಲರವರು ತಮ್ಮ ಮುಖಕ್ಕೆ ಬಣ್ಣ ಹಚ್ಚಿ 'ಸಿನಿಮಾ ನಟ'ರಾಗಿದ್ದಾರೆ. ಕೆಲವು ತಿಂಗಳುಗಳ ಹಿಂದೆ ಸದ್ದಿಲ್ಲದೆ ಅವರು ಸಿನಿಮಾವೊಂದರಲ್ಲಿ ನಟಿಸಿದ್ದಾರೆ. ಅವರು ನಟಿಸಿದ ಚಿತ್ರದ ಹೆಸರು 'ಲಂಚಾವತಾರ'. ಈ ಚಿತ್ರವನ್ನು ತುಮಕೂರು ಮಹಾದೇವಯ್ಯ ನಿರ್ಮಿಸಿದ್ದು, ಬೂದಾಳ್ ಕೃಷ್ಣಮೂರ್ತಿ ನಿರ್ದೇಶಿಸಿದ್ದಾರೆ.

ವೆಂಕಟಾಚಲ ಅವರು ಯಾವ ಪಾತ್ರ ಮಾಡಿದ್ದಾರೆಂದು ನಿಖರವಾಗಿ ಮಾಹಿತಿ ಸಿಕ್ಕಿಲ್ಲವಾದರೂ ಈ ಚಿತ್ರದಲ್ಲೂ ಅವರು ಭ್ರಷ್ಟಾಚಾರಿಗಳ ವಿರುದ್ಧ ಧಾಳಿ ಮಾಡುವ ಪಾತ್ರದಲ್ಲೇ ಕಾಣಿಸಿಕೊಂಡಿದ್ದಾರೆಂಬುದು ಸುದ್ದಿ.

ಅದೆಲ್ಲ ಒಕೆ, ಆದರೆ ವೆಂಕಟಾಚಲರವರಿಗೆ ಸಿನಿಮಾದಲ್ಲಿ ನಟಿಸಲು ಯಾವಾಗ ಸಮಯ ಸಿಕ್ಕಿತು? ಆ ಬಗ್ಗೆ ಯಾಕೆ ಯಾವುದೇ ಪ್ರಚಾರ ಮಾಡಿಲ್ಲ ಎಂಬುದೇ ವಿಶೇಷ!



ಬಿಚ್ಚಿದವಳ ಮೇಲೊಂದು ಕೇಸ್!

ಇದು ಇಂಟರೆಸ್ಟಿಂಗ್ ಕೇಸ್! ಅವಳು ಬಿಚ್ಚಿದಳು... ಅದೆಷ್ಟು ಭೀಕರವಾಗಿತ್ತೆಂದರೆ ಕೊಲ್ಹಾಪುರದ ಪೋಲೀಸರು ಅವಳ ಮೇಲೆ 'ಅಶ್ಲೀಲತೆಯ ಅಂಗನೆ' ಎಂದು ಕೇಸ್ ಜಡಿದುಬಿಟ್ಟರು!

"I am too hot to handle" ಎಂದು ಮೊದಲಿಂದ ಹೇಳುತ್ತಲೇ ಬಂದಿರುವ ರಾಖಿ ಸಾವಂತ್‌ಳನ್ನು ಕೊಲ್ಹಾಪುರ ಪೋಲೀಸರು ಅದ್ಹೇಗೆ handle ಮಾಡುತ್ತಾರೊ? ಇಲ್ಲಾ ಕೈ ಸುಟ್ಟುಕೊಳ್ಳಲಿದ್ದಾರೊ?

ಆಗಿದ್ದಿಷ್ಟೇ: ಕೊಲ್ಹಾಪುರದಲ್ಲಿ ನಡೆದ ಶೋ ಒಂದರಲ್ಲಿ ಮಾದಕವಾಗಿ ನರ್ತಿಸಿದ ರಾಖಿಯ ಮೈಮೇಲೆ ತುಂಡೇ ತುಂಡು ಬಟ್ಟೆ ಇದ್ದದ್ದನ್ನು ನೋಡಿದ ಪೋಲೀಸರು "ಇದು ಸಮಾಜಕ್ಕೆ ಹಾನಿಕಾರಕ" ಎಂದು ಕೇಸ್‌ನ್ನೇ ಜಡಿದು ಬಿಟ್ಟಿದ್ದಾರೆ.

ಕಳ್ಳರನ್ನು ಹಿಡಿಯುವುದನ್ನು ಬಿಟ್ಟು ಯುವಕರ ಮನಸು ಕದಿಯುವ ಕಳ್ಳಿಯ ಹಿಂದೆ ಬಿದ್ದಿವೆ ಕೊಲ್ಹಾಪುರ ಪೋಲೀಸರು!

ಇದೆಲ್ಲದರಿಂದ ವಿಚಲಿತಳಾಗದ ರೋಮಾಂಚಕ ರಾಖಿ ಬೇಬಿ ಏನು ಹೇಳುತ್ತದೆ ಗೊತ್ತಾ?

"ನಾನೇನೂ ಗಜಲ್ ಅಥವಾ ಭಜನಾ ಗೀತೆ ಹಾಡುವವಳಲ್ಲ... ನನ್ನ ಅಭಿಮಾನಿಗಳ ಉತ್ಕರ್ಷದ ನಿರೀಕ್ಷೆಗೆ ತಕ್ಕಂತೆ ಕುಣಿದಿದ್ದೇನೆ...."

ಈ ಟಿಪ್ಪಣಿ ಬರೆಯುತ್ತಿರುವ ಕೈಯೇ ಸುಡುತ್ತಿದೆ....

Really, Rakhi is too hot to handle....



ಭಾನುವಾರ ಬಟ್ಟೆಗೂ ರಜಾ!

"ನಗರದ ಎಲ್ಲಾ ಹಿರಿಯ ಮಹಿಳೆಯರಿಗೆ ಡ್ರೆಸ್‌ಕೋಡ್ ಅಗತ್ಯ ಇದೆ. ಕೆಲವು ಹಿರಿಯ ಮಹಿಳೆಯರೇ ಲೋ ನೆಕ್‌ನಂತಹ ಡ್ರೆಸ್ ಹಾಕುವುದರಿಂದ ಇನ್ನೊಬ್ಬರಿಗೆ ಅನಗತ್ಯ ಅವಕಾಶ ಮಾಡಿಕೊಟ್ಟಂತೆ. ನಿನಗಾಗಿ ನೀ ತಿನ್ನು, ಬೇರೆಯವರಿಗಾಗಿ ಡ್ರೆಸ್ ಮಾಡು ಎಂಬ ಗಾದೆಯೇ ಇದೆ. ಸಭ್ಯ ವಸ್ತ್ರ ಸಂಹಿತೆ ಕಾಲೇಜು ಹುಡುಗಿಯರಿಗೆ ಅತ್ಯಾವಶ್ಯಕ. ಡ್ರೆಸ್ ಕೋಡ್ ಜಾರಿಗೆ ಬರಲಿ. ಭಾನುವಾರ ಅವರಿಗಾಗಿಯೇ ಇದೆ. ಆ ದಿನ ಹೇಗೆ ಬೇಕಾದರೂ ಇರಬಹುದು."

ಇದು ಹಿರಿಯ ಮಹಿಳೆಯರಿಗೆ, ಕಿರಿಯ ಕಾಲೇಜು ಕನ್ಯೆಯರಿಗೆ 'ಬಿಗ್' ಸಿಸ್ಟರ್ ತಾರಕ್ಕನ ಉಪದೇಶ. ರಾಷ್ಟ್ರ ಪ್ರಶಸ್ತಿ ಸಿಕ್ಕ ಮೇಲೆ ತಾನೇ ಗ್ರೇಟ್ 'ಸಮಾಜಸೇವಕಿ' ಎಂದು ಭ್ರಮಿಸಿರುವ ತಾರಾ ಡ್ರೆಸ್ ಕೋಡ್ ಜಾರಿಗೆ ಬರಲಿ ಎಂದು ಹುಚ್ಚುಚ್ಚಾಗಿ ಮಾತಾಡಿದೆ. ಭಾನುವಾರ ರಜಾ ದಿನವಾದ್ದರಿಂದ ಬಟ್ಟೆಗೂ ರಜೆ ಕೊಟ್ಟು ಬಿಡಿ ಎಂದು ಹೇಳುತ್ತಿರುವಂತಿದೆ ಈಯಮ್ಮ! "ಲೋ ನೆಕ್‌ನಂತಹ ಡ್ರೆಸ್ ಹಾಕುವುದರಿಂದ ಇನ್ನೊಬ್ಬರಿಗೆ ಅನಗತ್ಯವಾಗಿ ಅವಕಾಶ ಮಾಡಿಕೊಟ್ಟಂತೆ" ಅಂದವ್ಳೆ ತಾರೂ! 'ಅನಗತ್ಯವಾಗಿ ಅವಕಾಶ' ಎಂದರೆ ಏನು? ಮೈತುಂಬಾ ಸೀರೆಯುಟ್ಟಿದ್ದ ಮುದ್ದೇಬಿಹಾಳದ ಅಮಾಯಕ ಶಾರದಾಳ ಮೇಲೆ ಗ್ಯಾಂಗ್ ರೇಪ್ ಆಯ್ತಲ್ಲ? ಹಾಗೆಯೇ ಚೂಡಿದಾರ್ ಧರಿಸಿದ್ದ ಕಾಲ್‌ಸೆಂಟರ್ ಹುಡುಗಿ ಪ್ರತಿಭಾಳೂ 'ಅನಗತ್ಯ ಅವಕಾಶ' ಮಾಡಿಕೊಟ್ಟಳೇ ತಾರವ್ವ?

ಹಿಂದೊಮ್ಮೆ "ಪರಭಾಷಾ ನಟಿಯರಿಗೇಕೆ ಮಣೆ ಹಾಕುತ್ತೀರಿ? ದುಡ್ಡು ಕೊಡಿ, ನಾವೂ ಎಕ್ಸ್‌ಪೋಸ್ ಮಾಡ್ತೀವಿ" ಎಂಬ 'ಬಿಚ್ಚು'ಮಾತು ಹೇಳಿದ್ದಳು ಈ ತಾರಾಬಾಯಿ! ಆಕೆ ಎಕ್ಸ್‌ಪೋಸ್ ಮಾಡಿದರೆ ನೋಡುವರಾರು? ಪತಿ ವೇಣುನ ಕಣ್ಣೆಂಬ ಕ್ಯಾಮರಾ ಕ್ಯಾಚ್ ಮಾಡಬೇಕಷ್ಟೇ.

ಡ್ರೆಸ್ ಕೋಡ್ ಬಗ್ಗೆ ad 'dress' ಮಾಡುವ ಮುನ್ನ ಜನ ಏನಂ'ತಾರಾ' ಎಂದು ಯೋಚಿಸಬೇಕಲ್ಲವೆ ತಾರಾತಿಗಡಿ ಬುದ್ಧಿಯ ತಾರಾಮಣಿ?



'ತನನಂ ತನನಂ' ಶುಭಕಾಲ

'ಸೇವಂತಿ ಸೇವಂತಿ' ಚಿತ್ರ ಬಿದ್ದುಹೋಯಿತು; 'ಜ್ಯೂಲಿ' ಚಿತ್ರ ನಿರೀಕ್ಷಿಸಿದಷ್ಟು ಚಿಗುರಲಿಲ್ಲ. ಅದಕ್ಕೆ ನಾಯಕಿ ರಮ್ಯಾ ಈಗ 'ತನನಂ ತನನಂ' ಮತ್ತು 'ದತ್ತ' ಚಿತ್ರಗಳ ಬಗ್ಗೆ ಆಶಾವಾದಿಯಾಗಿದ್ದಾಳೆ.

ಈ ಹಿಂದೆ 'ಸುಂಟರಗಾಳಿ' ಚಿತ್ರ ದೀಢೀರನೆ ನೆಲಕ್ಕೆ ಅಪ್ಪಳಿಸಿದಾಗ ಅದರ ನಾಯಕಿ ರಕ್ಷಿತಾ ಕೂಡಾ ಹೀಗೆ ಅಪ್ಸೆಟ್ ಆಗಿ ಕುಳಿತಿದ್ದಳು. ಹ್ಯಾಟ್ರಿಕ್ ಹೀರೋಯಿನ್ ರಮ್ಯಾ ಚಿತ್ರಗಳೂ ಸೋತಿವೆ. ರಕ್ಷಿತಾ ಕೂಡ ಒಂದು ಬ್ರೇಕ್‌ಗಾಗಿ ಕಾಯುತ್ತಿದ್ದಾಳೆ. ಸಾಂಪ್ರದಾಯಿಕ ವೈರಿಗಳಾದ ರಮ್ಯಾ ಮತ್ತು ರಕ್ಷಿತಾ ಇಬ್ಬರಲ್ಲೂ ಈಗ 'ತನನಂ ತನನಂ' ಬ್ರೇಕ್ ನೀಡುತ್ತದೆ ಎಂಬ ಆಸೆ ಹುಟ್ಟಿದೆ.



ಗಾಂಧಿನಗರದ ಕೆಲವರ ಪ್ರಕಾರ ಈ ಚಿತ್ರದಲ್ಲಿ ರಕ್ಷಿತಾ ಸ್ಕೋರ್ ಮಾಡಿದ್ದಾಳಂತೆ. ಇನ್ನು ಕೆಲವರು ರಕ್ಷಿತಾಳಿಗಿಂತ ರಮ್ಯಳೇ ಹೈಲೈಟ್ ಎನ್ನುತ್ತಾರೆ. ಇಬ್ಬರ ಅಭಿಮಾನಿಗಳಿಗೂ ಈಗ 'ತನನಂ ತನನಂ' ಬಗ್ಗೆ ಕುತೂಹಲ, ಆಸಕ್ತಿ. ಈ ಚಿತ್ರದಿಂದ ರಮ್ಯ ಮೇಲೆ ಬರುತ್ತಾಳೋ ಅಥವಾ ರಕ್ಷಿತಾ ಗೆಲ್ಲುತ್ತಾಳೋ ಎಂಬುದು ಚಿತ್ರ ನೋಡಿದ ನಂತರವೇ ಗೊತ್ತಾಗುತ್ತದೆ.

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore-4. Phone : 26676427, Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44